ಸಂಪುಟ : ೨೯

ಸಂಚಿಕೆ : ೧

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಷಾಣ್ಮಾಸಿಕ ಪತ್ರಿಕೆ

ಸಂಪುಟ: ೨೯ ಸಂಚಿಕೆ : ೧

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜನವರಿ, ೧೯೯೭

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ಷಾಣ್ಮಾಸಿಕ ಪತ್ರಿಕೆ

ಸಂಪುಟ : ೨೯ ಸಂಚಿಕೆ : ೧

ಜನವರಿ, ೧೯೯೭

ಸಂಕ್ರಮಣ ಸಂಚಿಕೆ

ಪ್ರಕಟಣೆ : ಅಗಸ್ಟ್, ೧೯೯೮

ಪ್ರಕಾಶಕರು

ಪ್ರೊ. ಎಚ್. ವ್ಹಿ. ನಾಗೇಶ್
ನಿರ್ದೇಶಕರು
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು

ಡಾ. ಎ. ಮುರಿಗೆಪ್ಪ
ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ' ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು `ಕರ್ನಾಟಕ ಭಾರತಿ' ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

(ಷಾಣ್ಮಾಸಿಕ ಪತ್ರಿಕೆ)

೧. ಸಂಕ್ರಮಣ ಸಂಚಿಕೆ   ೨. ಸ್ವಾತಂತ್ರ್ಯೋತ್ಸವ ಸಂಚಿಕೆ

ಬಿಡಿ ಸಂಚಿಕೆಯ ಬೆಲೆ : ರೂ. ೨೫.೦೦

ಈ ಹಣವನ್ನು ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ತೆಗೆಯಿಸಿ, ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.

ಪರಿವಿಡಿ

ಪಂಪ ಮತ್ತು ಸಾಮಾಜಿಕ ನ್ಯಾಯ

-ಡಾ. ಮಲ್ಲಿಕಾ ಘಂಟಿ

ಸಾಮಾಜಿಕ ಪ್ರಜ್ಞೆಯ ಮುಂದುವರಿಕೆಯಾಗಿ `ಸಾಮಾಜಿಕ ನ್ಯಾಯ'- ಎಂಬುದನ್ನು ಪಂಪನ ಕಾವ್ಯಗಳನ್ನು ಇಟ್ಟುಕೊಂಡು ಹುಡುಕುವಾಗ ಒಂದಿಷ್ಟು ಪ್ರಯಾಸಪಡಬೇಕಾಗುತ್ತದೆ. ಈ ಸಾಮಾಜಿಕ ನ್ಯಾಯದ ಪರಿಕಲ್ಪನೆಯೆ ಇತ್ತೀಚಿನ ರಾಷ್ಟ್ರೀಯ ಪಕ್ಷವೊಂದರ ಹಿನ್ನಲೆಯಲ್ಲಿ ಹುಟ್ಟಿಕೊಂಡದ್ದು. ಪಂಪನಿಂದ ಹಿಡಿದು ಇಂದಿನ ಪ್ರಜಾಪ್ರಭುತ್ವದ ಕಾಲದ ಹರವಿನಲ್ಲಿ 'ಸಾಮಾಜಿಕ ನ್ಯಾಯ' ದ ಪರಿಕಲ್ಪನೆ ಕ್ರಿಯಾತ್ಮಕತೆಯನ್ನು ಪಡೆದುಕೊಳ್ಳದೆ ಹೋಗಿರುವ ದುರಂತ ನಮ್ಮ ಕಣ್ಣೆದುರಿಗಿದೆ.

ಈಗಾಗಲೇ ಪಂಪನ ಕೃತಿಗಳಲ್ಲಿ ಅವನ ಸಾಮಾಜಿಕ, ರಾಜಕೀಯ ಪ್ರಜ್ಞೆಯ ಬಗ್ಗೆ ಬೇಕಾದಷ್ಟು ಗುರುತಿಸಿದ್ದಾಗಿದೆ. ಇಂದು ಅವನ ಸಾಮಾಜಿಕ ಪ್ರಜ್ಞೆ ರಾಜಕೀಯ ಪರೀಧಿ ಪ್ರವೇಶಮಾಡಿ ಒಟ್ಟು ಬದುಕಿನ ನೆಲೆಯಲ್ಲಿ ಇರುವ ಅವನ ನ್ಯಾಯಪರತೆಯನ್ನು ಎತ್ತಿಕೊಳ್ಳಬೇಕಾಗಿದೆ. ಸಾಮಾಜಿಕ ನ್ಯಾಯದ ಅನುಷ್ಠಾನದ ಸಂದರ್ಭ ಚರಿತ್ರೆಯಲ್ಲಿ ಹಲವಾರು ಸಲ ಕಾಣಿಸಿಕೊಂಡಿದೆ. ಆದರೆ ನ್ಯಾಯ ಸಂದಿಲ್ಲ. ಪಂಪನನ್ನು ಮೊದಲ್ಗೊಂಡು ಬಸವಣ್ಣ ಮತ್ತು ಇಂದಿನ ನಮ್ಮ ಪ್ರಜಾಪ್ರಭುತ್ವದ ಪರಿಸರ ನಮ್ಮ ಕಣ್ಣೆದುರಿಗಿದೆ. ಪಂಪನ ಕಾವ್ಯದಲ್ಲಿ ಬಿರಿದ ಸಾಮಾಜಿಕ ನ್ಯಾಯದ ಬೀಜ, ಬಸವಣ್ಣನಲ್ಲಿ ಮೊಳಕೆಯೊಡೆದು ೨೧ನೇ ಶತಮಾನದಲ್ಲಿ ಪಲ್ಲವಿಸಬೇಕು ಎನ್ನುವ ತುಡಿತಗಳನ್ನು ಇಟ್ಟುಕೊಂಡು ನಡೆಸಿರುವ ಹೋರಾಟವನ್ನು ಗಮನಿಸುವುದಾಗಬೇಕು.

ಅರಸೊತ್ತಿಗೆಯ ಕಾಲದಲ್ಲಿ ಪಂಪ ಬದುಕಿದ ಸಮಾಜ ಧರ್ಮದ ನಿರ್ದೇಶಕತ್ವದಲ್ಲಿ ನೆಲೆಗೊಂಡದ್ದು. ಧರ್ಮ ಮತ್ತು ರಾಜಾಶ್ರಯದಲ್ಲಿದ್ದ ಒಬ್ಬ ಮನುಷ್ಯ ತನ್ನ ಬುದ್ಧಿ ಭಾವಗಳನ್ನು ಸಮಾಜದ ಮಧ್ಯದಿಂದ ತುಂಬಿಕೊಳ್ಳುವುದು ಸುಲಭದ ಕೆಲಸವಲ್ಲ. 'ವೈಚಾರಿಕ ಕುತ್ತಿಗೆಯ ಮೇಲೆ ನಿರಂತರ ಅರಸನ ಮತ್ತು ಧರ್ಮದ ಕತ್ತಿ ತೂಗುತ್ತಲೇ ಇರುವುದು ಸಹಜ. ಈ ತೂಗುಕತ್ತಿಯಿಂದ ತನ್ನ ತಲೆಯನ್ನು ಉಳಿಸಿಕೊಳ್ಳುತ್ತಲೇ ಪಂಪ ಲೌಕಿಕ ಆಗಮಿಕ ಕಾವ್ಯಗಳನ್ನು ಬರೆದ. ಪ್ರತಿಭಾನ್ವಿತನಾದ, ಪಂಡಿತನಾದ ಪಂಪ ವ್ಯಾಸಭಾರತ ಮತ್ತು ಪೂರ್ವ ಪುರಾಣಗಳ ಹಂದರದಲ್ಲಿ ತನ್ನ ವ್ಯಕ್ತಿತ್ವದ ಛಾಪು ಹಾಕಿದ್ದಾನೆ. ಸಿದ್ಧ ವಸ್ತು ವಿಷಯ ಗಳನ್ನಿಟ್ಟುಕೊಂಡು ಕಾವ್ಯ ಬರೆಯಹೊರಟ ಪಂಪ ಓದುಗರಿಗೆ ಮತ್ತು ವಿಮರ್ಶಕರಿಗೆ ಸ್ಪಷ್ಟವಾಗಿಯೆ ತನ್ನ ಉದ್ದೇಶವನ್ನು ಸಾಮರ್ಥ್ಯವನ್ನು 'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ'

'ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತಭಾ

....

ಪೇಟ್ರೊಡೆ ಪಂಪನೆ ಪೇಟ್ಗುಮೆಂದು ಪಂ

ಡಿತರೆ ತಗುಳ್ದು ಬಿಚ್ಚಳಿಸೆ ಪೇವಿಲೊಡರ್ಚಿದೆನೀ ಪ್ರಬಂಧಮಂ'

[ವಿ. ವಿ. ೧-೧೧]

ಹೇಳಿಕೊಂಡಿದ್ದಾನೆ. ಅಷ್ಟೇ ಅಲ್ಲ ತನ್ನ ಕಾವ್ಯದ ಪ್ರೌಢಿಮೆಯ ಬಗ್ಗೆ "ಮುನ್ನಿನ ಕಬ್ಬಮನೆಲ್ಲ ಮಿಕ್ಕಿಮೆಟ್ಟಿದುವು ಸಮಸ್ತಭಾರತ ಮುಮಾದಿಪುರಾಣ ಮಹಾಪ್ರಬಂಧಮುಂ" [ವಿ. ವಿ. ೧೪ -೫೯] ಹೆಮ್ಮೆಯಿಂದ ಹೇಳಿಕೊಂಡು ಹೀಗೆ ಬೀಗಿದ್ದಾನೆ.

ಭೂತ ಮತ್ತು ವರ್ತಮಾನಕಾಲದಲ್ಲಿಯ ಒಂದು ಸತ್ಯವೆಂದರೆ ರಾಜಶಕ್ತಿ ಪಂಡಿತರನ್ನು, ಬುದ್ಧಿಜೀವಿಗಳನ್ನು, ಶೂರರನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳುವ ಕ್ರಿಯೆ. ಬುದ್ಧಿಶಕ್ತಿ ಮತ್ತು ದೈಹಿಕ ಶಕ್ತಿಗಳಿಗೆ ಬದಲಾವಣೆ ತರುವ ಸಾಮರ್ಥ್ಯವಿರುತ್ತದೆ. ಹೀಗಾಗಿ ಧರ್ಮರಾಜನ ಮೂಲಕ ಅನುಸಂಧಾನಕ್ಕೆಳಸುತ್ತದೆ. ಮತಧರ್ಮ ಮತ್ತು ರಾಜಧರ್ಮದ ಝಳ ತಾಗಿಸಿಕೊಂಡೆ ಸಾಹಿತ್ಯ ಕುದಿಗೊಂಡಿದೆ. ಪಂಪ ಅರಿಕೇಸರಿಯ ಮೂಲಕ ರಾಜಾಶ್ರಯವನ್ನು, ದೇವೇಂದ್ರಮುನಿಗಳ ಮೂಲಕ ಜೈನಧರ್ಮದ ಆಶ್ರಯ ಹೊಂದಿಯೇ ತನ್ನ ಪಾಂಡಿತ್ಯ ಪ್ರದರ್ಶಿಸುತ್ತಲೇ, ಸಾಮಾಜಿಕ ಪ್ರಜ್ಞೆಯನ್ನು ಮತ್ತು ಸಾಮಾಜಿಕ ನ್ಯಾಯಪರತೆಯನ್ನು ತನ್ನ ಮಿತಿಯೊಳಗೆ ಎತ್ತಿಹಿಡಿದಿದ್ದಾನೆ, ಉಳಿಸಿಕೊಂಡಿದ್ದಾನೆ. ನ್ಯಾಯಪರತೆಯೆನ್ನುವುದನ್ನು ಕುಲ, ನೆಲ, ಭಾಷೆ, ಲಿಂಗ, ಅಧಿಕಾರ, ಮನುಷ್ಯ ಸಂಬಂಧಗಳ ನೆಲೆಯಲ್ಲಿಯ ಅಸಮಾನತೆಯನ್ನು ನೀಗುತ್ತಲೇ ಪಡೆದುಕೊಳ್ಳಬೇಕಾದ ಒಂದು ಜೀವನ ಕ್ರಮ, ಸ್ಥಿತಿಯೆನ್ನಬಹುದು. ಪಂಪನ ಕಾವ್ಯಗಳು ಈ ನೆಲೆಯಲ್ಲಿ ಅವನು ತಳೆದಿರುವ ಜನಪರತೆಯ ಕಾಳಜಿಗಳೇ ಅವನ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಎತ್ತಿತೋರಿಸುತ್ತವೆ.

೩

ಭಾಷೆ ಎನ್ನುವಂತಹದ್ದು ಮನುಷ್ಯ ವ್ಯವಹಾರಕ್ಕೆ ಬಳಸಲ್ಪಡುವ ಸಂಪರ್ಕ, ಸಂವಹನ ಮಾಧ್ಯಮವೆಂದು ಸರಳವಾಗಿ ಕರೆದು ಬಿಡುತ್ತೇವೆ. ಭಾಷೆ ಇಷ್ಟೊಂದು ಸರಳವಾದ ನೆಲೆಯಲ್ಲಿ ಬದುಕಿನೊಳಗೆ ಬಿಚ್ಚಿಕೊಳ್ಳುವುದಾದರೆ ಅದರ ಕುರಿತ ಹಾಗೇ ನಡೆದ, ನಡೆದಿರುವ ಘಟನೆಗಳ ಹಿನ್ನಲೆಯೇನು? ವರ್ಗದ ಒಡಲೊಳಗೆ ಕೈಕಾಲು ಮೂಡಿಸಿಕೊಂಡು, ವರ್ಣ ಭಾಷೆಯ ಮಡಿ ಮೈಲಿಗೆಯನ್ನು ಜೊತೆಗೆ ತಂದಿದೆ. ಹೀಗೆ ತಲೆ, ಕೈಕಾಲುಗಳಾಗಿ ವಿಭಜನೆಗೊಂಡ ಸಮಾಜದಲ್ಲಿ ತಲೆಯ ಜನರು ಮಾತನಾಡುವ ಭಾಷೆ ದೇವಲೋಕದ ಜೊತೆಗೆ ಸಂಪರ್ಕ ಕಲ್ಪಿಸಿಕೊಂಡು ದೇವಭಾಷೆಯಾಗಿ ಲಿಪಿಹೊಂದಿ ಗ್ರಂಥಸ್ಥ ಗದ್ದುಗೆ ಏರಿರಬೇಕು. ಕೈಕಾಲಿನ ಜನ ವ್ಯವಹರಿಸುವ ಭಾಷೆಗೆ ನೆಲದ ಸಂಪರ್ಕ ಹೊರತುಪಡಿಸಿ ಬೇರೆ ಸಂಪರ್ಕ ಸಿಗದೆ ಅದು ಗದ್ದುಗೆ ಏರುವ ಸಾಧ್ಯತೆಗಳಿಂದ ಬಹುಕಾಲದವರೆಗೆ ದೂರ ಉಳಿದಿರಬೇಕು. ಇದನ್ನೇ ನಾವು ಭೂಸುರರ ಭಾಷೆ ಶೂದ್ರರ ಭಾಷೆಯೆಂದು ಪಂಪನ ಕಾಲದಿಂದ ಇಂದಿನ ಕನ್ನಡದವರೆಗೆ ಕರೆಯಬಹುದೇನೋ ? ಇಂತಹ ಭಾಷಾ ಕೀಳರಿಮೆಯನ್ನು ಪಂಪ ತನ್ನ ಕಾಲದಲ್ಲಿ ಕಂಡಿರುವ ಕಾರಣವೇ ಅವನು ತನ್ನ

ಕಾವ್ಯದ ಭಾಷೆಯಾಗಿ 'ಪುಲಿಗೆರೆಯ ತಿರುಳ್ಗನ್ನಡ' ವನ್ನು ಬಳಸಿಕೊಂಡಿದ್ದಾನೆ, ದುಡಿಸಿಕೊಂಡಿದ್ದಾನೆ. ಈ ತಿರುಳ್ಗನ್ನಡ ಅಂದಿನ ಶಿಷ್ಟ ಭಾಷೆಯೆ ಆಗಿತ್ತು ನಿಜ. ಎಲ್ಲ ಕಾಲದಲ್ಲಿಯೂ ಭಾಷೆಯ ಸ್ವರೂಪ ಎರಡು ನೆಲೆಯಲ್ಲಿ ಕೆಲಸ ಮಾಡುತ್ತಿರುತ್ತದೆ. ಒಂದು ಅಕ್ಷರಸ್ಥರಲೋಕ, ಇನ್ನೊಂದು ಅನಕ್ಷರಸ್ಥ ಲೋಕವೆನ್ನಬಹುದು. ಬ್ರಾಹ್ಮಣರಲ್ಲದವರು ಸಾಕ್ಷರರಾಗಿ ದಿನಬಳಕೆಯ ಭಾಷೆಗೆ ಒಂದಿಷ್ಟು ಮೆರಗುಕೊಟ್ಟು ಗ್ರಂಥಸ್ಥಗೊಳಿಸಿದ್ದರೆ, ಸಾಮಾನ್ಯರು ಹುಟ್ಟುಡುಗೆಯಲ್ಲಿಯೇ ಅದನ್ನು ಬಳಸುವ, ಬೆಳೆಸುವುದನ್ನು ಇಂದಿಗೂ ಕಾಣಬಹುದು. ಹೀಗೆ ಸಂಸ್ಕೃತ ಮೂಲದಲ್ಲಿದ್ದ ಎರಡು ಕಾವ್ಯಗಳನ್ನು ತನ್ನ ಕಾಲದ ಗ್ರಂಥಸ್ಥ ಶೂದ್ರ ಭಾಷೆಯಲ್ಲಿ (ಅದನ್ನೆ ಹಳಗನ್ನಡ) ಕಾವ್ಯಕ್ಕೆ ಬಳಸಿಕೊಂಡಿದ್ದಾನೆ. ಪಂಪ ತನ್ನನ್ನು `ನಾಡೊವಜ' ಎಂದು ಕರೆದುಕೊಂಡಿದ್ದಾನೆ. ಉಪಾಧ್ಯಾಯ ಗದ್ದುಗೆಯನ್ನು ಗುತ್ತಿಗೆ ಹಿಡಿದ ವಿಪ್ರರು ನಾಡಿನ ಜನರನ್ನು ಕುರಿ ಮಂದೆ ಎಂದು ತಿಳಿದು ಅಕ್ಷರ, ಕಾವ್ಯ ಪಾಂಡಿತ್ಯಾದಿ ಸಂಗತಿಗಳನ್ನು ಹುಟ್ಟಿನ ನೆಲೆಯಲ್ಲಿಯೆ ಗಟ್ಟಿಗೊಳಿಸಿದ್ದರು. ಇದನ್ನು ಪಂಪ ಮನಗಂಡೆ ತನ್ನನ್ನು ನಾಡಿನ ಉಪಾಧ್ಯಾಯನೆಂದು ಕರೆದುಕೊಳ್ಳುತ್ತಲೇ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಕಾವ್ಯ ಬರೆಯಲು ಮುಂದಾಗಿರಬಹುದು.

೩

ಚಾತುರ್ವಣದ ಬಗ್ಗೆ ಸ್ಪಷ್ಟತೆಯಿತ್ತು ಪಂಪನಿಗೆ. ವರ್ಣ ವ್ಯವಸ್ಥೆಯ ಸಮಾಜದಲ್ಲಿ ದ್ವಿಜರಲ್ಲದವರು ಸಾಮಾಜಿಕ ಕೀಳರಿಮೆಯಿಂದ ಕುಗ್ಗಿ ಹೋಗುವ ಸಂದರ್ಭಗಳಿಗೆ ಪಂಪ ಮುಖಾಮುಖಿಯಾಗಿರಬಹುದು. ಬ್ರಾಹ್ಮಣ ಧರ್ಮದಿಂದ ಜೈನಧರ್ಮಕ್ಕೆ ಮತಾಂತರ ಗೊಂಡಿರುವ ಕಾರಣಗಳಲ್ಲಿ ಬಲವಾದದ್ದೇನಾದರೂ ಇರಬಹುದೆ? ಪಂಪ ತನ್ನ ಭಾರತದಲ್ಲಿ ಹಲವಾರು ಕುಲದ ಪ್ರಸಂಗಗಳನ್ನು ಮೂಲಕ್ಕೆ ಸಂಬಂಧಿಸಿ ತಂದಿದ್ದರೂ ಆ ಸಂದರ್ಭದಲ್ಲಿ ಕುಲದ ನೆಲೆಯಲ್ಲಿ ಪ್ರಶ್ನೆಯೆತ್ತುವ ಪಾತ್ರಗಳು ಬೇರೆಯಾಗಿವೆ.

ಪಾಂಡವರು, ಕೌರವರು ಬಾಲಕರಾಗಿದ್ದಾಗ ಹಸ್ತಿನಾವತಿಯಲ್ಲಿ ಅವರು ಕಲಿತ ವಿದ್ಯೆಯ ಪ್ರದರ್ಶನವೇರ್ಪಡುತ್ತದೆ. ಆಗ ಅರ್ಜುನನೊಡನೆ ಕರ್ಣ ಸೆಣಸಬಯಸುತ್ತಾನೆ. ಕೃಪಾಚಾರ್ಯ ಮತ್ತು ದ್ರೋಣರು ಮಧ್ಯಪ್ರವೇಶಿಸಿ ಕರ್ಣನನ್ನುದ್ದೇಶಿಸಿ

ಏವದ ಮುಳಿಸಿನ ಕಾರಣ
ಮಾವುದೊ ನೀಂ ನಿನ್ನತಾಯಿ ತಂದೆಯ ದೆಸೆಯಂ"।

ಎಂದು ಕುಲ ಎತ್ತಿ ಮರ್ಮಭೇದಕವಾದ ಮಾತುಗಳನ್ನಾಡುತ್ತಾರೆ. ಆಗ ದುರ್ಯೋಧನ ಮಧ್ಯ ಪ್ರವೇಶಿಸಿ ಕರ್ಣನ ಪರವಹಿಸಿ

"ಕುಲವೆಂಬುದುಂಟೆ ಬೀರಮೆ
ಕುಲಮಲ್ಲದೆ? ಕುಲಮನಿಂತು ಪಿಕ್ಕದಿರಿಂ ನೀ
ಮೊಲಿದೆಲ್ಲಿ ಪುಟ್ಟಿ ಬೆಳದಿರೊ?
ಕುಲಮಿರ್ದುದೆ ಕೊಡದೊಳಂ ಶರಸ್ತಂಭದೊಳಂ?"

[ವಿ. ವಿ.೨ ೮೩]

ಕೃಪ, ದ್ರೋಣರ ಹುಟ್ಟಿನ ಮೂಲಕ್ಕೆ ಕೈ ಹಾಕುತ್ತಾನೆ. ಗುಣ ಸ್ವಭಾವಗಳು ವ್ಯಕ್ತಿಯನ್ನು ಅಳೆಯುವ ಮಾನದಂಡಗಳೆಂದು ಹೇಳಿ ಕರ್ಣನಿಗೆ ಪಟ್ಟಕಟ್ಟಿ ಕುಲಸ್ಥನನ್ನಾಗಿಸುತ್ತಾನೆ. ವ್ಯಾಸಭಾರತದಲ್ಲಿ ಭೀಮ, ಕೃಪರು ಈ ಸನ್ನಿವೇಶದಲ್ಲಿ ಕರ್ಣನನ್ನು ಪ್ರಶ್ನಿಸುವವರು. ಆದರೆ ಪಂಪ ದ್ರೋಣ ಮತ್ತು ಕೃಪರ ಮೂಲಕ ಮಾತನಾಡಿಸುತ್ತಾನೆ. ಇಬ್ಬರೂ ವಿಪ್ರೋತ್ತಮರು.

ಇಂತಹದೆ ಪ್ರಸಂಗ ಮತ್ತೊಮ್ಮೆ ಕರ್ಣನಿಗೆ ಎದುರಾಗುತ್ತದೆ. ಆಗ ಪಂಪ ಕರ್ಣನಿಂದಲೇ ಪ್ರತಿಭಟನೆಯ ಧ್ವನಿಯನ್ನು ಹೊರಡಿಸುತ್ತಾನೆ. ಭೀಷ್ಮರಿಗೆ ಸೇನಾಪಟ್ಟ ಕಟ್ಟುವಾಗ ಕರ್ಣ ಪ್ರತಿಭಟಿಸುತ್ತಾನೆ. ವಯಸ್ಸಾದ ಮತ್ತು ಪಾಂಡವರನ್ನು ಎತ್ತಿ ಆಡಿಸಿದ ಭೀಷ್ಮರು ಪಕ್ಷಪಾತ ತೋರದೆ ಯುದ್ಧಮಾಡಲು ಸಾಧ್ಯವೆ ? ಎಂದು. ಆಗ ದ್ರೋಣರು ಮಧ್ಯಬಾಯಿ ಹಾಕಿ "ನಾಲಗೆ ಕುಲಮಂ ತುಬ್ಬುವ ವೊಲು ಐದೆ ನೀ ಕೆಡೆ ನುಡಿವೈ" ಎಂದಾಗ ಕರ್ಣ ತನ್ನ ಮೊದಲಿನ ಪ್ರಸಂಗದಲ್ಲಿ ದುರ್ಯೋಧನ ನೀಡಿದ ಉತ್ತರದ ಮುಂದುವರಿಕೆಯಾಗಿಯೆ

"ಕುಲಮನೆಮುನ್ನಮುಗ್ಗಡಿಪಿರೇಂಗಳ? ನಿಮ್ಮ ಕುಲಂಗಳಾಂತು ಮಾರ್
ಮಲೆವನನಟ್ಟಿ ತಿಂಬವೆ? ಕುಲಂಕುಲಮಲ್ತು ;ಛಲಂಕುಲಂ । ಗುಣಂ
ಕುಲಮಭಿಮಾನವೊಂದೆ ಕುಲಮಣ್ಮು ಕುಲಂ । ಬಗೆವಾಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ"

[ವಿ.ವಿ. ೧೦-೨]

ಹೀಗೆ ಕರ್ಣನ ಮೂಲಕ ಮಾತನಾಡಿಸುವ ಪಂಪ ಹುಟ್ಟಿನಿಂದ ಶ್ರೇಷ್ಠತೆಯನ್ನು ಒಪ್ಪಿಕೊಂಡು ಬಂದ ಸಮಾಜದಲ್ಲಿ ಅರ್ಹತೆ, ಗುಣ, ಸ್ವಭಾವಗಳೇ ವ್ಯಕ್ತಿಯನ್ನು ಗುರುತಿಸುವ ಲಕ್ಷಣಗಳಾಗಬೇಕೆಂದು ಹಂಬಲಿಸಿ, ಜಾತಿಯ ಹೆಸರಿನಿಂದ ಕೀಳರಿಮೆಗೆ ಒಳಗಾದ ಜನರ ಪರವಾಗಿ ಮಾತನಾಡಿ ನ್ಯಾಯ ಒದಗಿಸಿದ್ದಾನೆ.

ಕುರುಕ್ಷೇತ್ರ ಯುದ್ಧ ಭೂಮಿಯಲ್ಲಿ ಮಹಾರಥರೆಲ್ಲ ಮಡಿದಿದ್ದಾರೆ. ಕರ್ಣನಿಗೆ ಈಗ ಸೇನಾಪಟ್ಟ ಕಟ್ಟಲಾಗಿದೆ. ಕರ್ಣನಿಗೆ ಒಬ್ಬ ಸಮರ್ಥ ಸಾರಥಿಯ ಆವಶ್ಯಕತೆಯನ್ನು ಮನಗಂಡ ದುರ್ಯೋಧನ ಶಲ್ಯ ರಾಜನ ಬಳಿಗೆ ಹೋಗಿ ವಿನಯದಿಂದ ನಾಳಿನ ಯುದ್ಧದಲ್ಲಿ ನೀವು ಕರ್ಣನ ಸಾರಥ್ಯವನ್ನು ವಹಿಸಿಕೊಂಡರೆ ಜಯ ಖಂಡಿತ ನಮಗೆ ಲಭಿಸುವುದು ಎನ್ನುತ್ತಾನೆ. ಆಗ ಶಲ್ಯ ಉರಿದು ಬಿದ್ದು

"ಕಲಿಯನ ಪಂದೆ ಮಾಳ್ಪಕಡುವಂದೆಯನೊಳ್ಗಲಿ ಮಾಳ್ಪತಕ್ಕನಂ
ಪೊಲೆಯನೆ ಮಾಳ್ಪಮುಪೊಲೆಯನಂ ನೆಜೆ ತಕ್ಕನ ಮಾಳ್ಪತಮ್ಮೊಳ ॥
ಗ್ಗಲಿಸಿ ಪೊದಟ್ದು ಪರ್ವಿದವಿವೇಕತೆಯಿಂ ನೃಪಚಿತ್ತ ವೃತ್ತಿ ಸಂ
ಚಲಮದಱಿಂದಮೋಲಗಿಸಿ ಬಾಳ್ವುದೆ ಕಷ್ಟಮಿಳಾಧಿನಾಥರಂ"

[ವಿ. ವಿ. ೧೨- ೬೨]

ಹೀಗೆ ವೀರನನ್ನು ಹೇಡಿಯನ್ನಾಗಿಸುವ, ಹೇಡಿಯನ್ನು ವೀರನನ್ನಾಗಿಸುವ, ಯೋಗ್ಯನಾದವನನ್ನು ಹೊಲೆಯನನ್ನಾಗಿಸುವ, ಹೊಲೆಯನನ್ನು ಯೋಗ್ಯನಾಗಿಸುವ ಅವಿವೇಕ

ರಾಜರಲ್ಲಿ ಇರುತ್ತದೆ. ಅವರ ಚಿತ್ತ ಚಂಚಲ, ಇಂತಹ ರಾಜರನ್ನು ಅರ್ಥಮಾಡಿಕೊಂಡು ಬದುಕುವುದು ಕಷ್ಟವೆನ್ನುತ್ತಾನೆ. ಇಂತಹ ಗುಣ ರಾಜರಲ್ಲಿ ಯಾಕೆ ಇರುತ್ತದೆ ಎಂಬುದಕ್ಕೆ ತೊಟ್ಟಿನ ಮೊಲೆವಾಲನುಂಡ ಗುಣ ಮಿಂತಿವನಾರ್ ಕಿಡಿಪರ್ ನರೇಂದ್ರರೊಳ್" ಮದ, ಗರ್ವ, ಅವಿವೇಕ ಇವು ದಾಸಿಯ ಮೊಲೆಯ ಹಾಲು ಕುಡಿದು ಬಂದ ಗುಣಗಳನ್ನು ರಾಜರಿಂದ ಹೋಗಲಾಡಿಸುವವರು ಯಾರು ಎನ್ನುತ್ತಾನೆ. ಹಾಗೆಯೇ ಮುಂದುವರಿದು -

ಪಿಂದೆ ಕಪಂಗಿ ತೇರನೆಸಗೆಂಬವನಂಬಿಗನಾಜಿರಂಗದೊಳ್ ।
ಮುಂದೆ ಸಮಾನನಾಗಿ ಜಿಸದಿರ್ಪವನುಂ ತುಱಿಕಾಱನಾಗೆ ಮ ॥
ತ್ಸ್ಯಂದನ ಚೋದನ ಕ್ರಮಮದುಂ ಪೊಲೆಯಂಗ ಮರ್ದಿರ್ಕು ಮಂತುಟಂ ।
ನೀದಯೆಗೆಯ್ದು ಪೇೞ್ದೆಯಿದ ನಾರ್ ಪಡೆದರ್ ಫಣಿರಾಜಕೇತನಾ ॥

[ವಿ.ವಿ. ೧೨-೯೪]

ಹೀಗೆ ಯುದ್ಧಭೂಮಿಯಲ್ಲಿ ರಥ ನಡೆಸು ಎಂದು ಆಜ್ಞೆಮಾಡುತ್ತಾ ಕುಳಿತುಕೊಳ್ಳುವನು ಬೆಸ್ತ, ಸರಿಸಮಾನಾಗಿ ಎದುರಿಗೆ ಕಾಣಿಸುವನು ದನಕಾಯುವ ಗೊಲ್ಲ. ಇಂತಹ ಸಂದರ್ಭದಲ್ಲಿ ನಾನು ರಥ ನಡೆಸುವುದಿದೆಯಲ್ಲ ಅದು ಹೊಲೆಗೆಲಸವೆನ್ನುತ್ತಾನೆ. ಇಂತಹ ಹೊಲೆಗೆಲಸ ಮಾಡಲು ಮನಸ್ಸಿಲ್ಲದಿದ್ದರೂ ಸ್ವಾಮಿಭಕ್ತ, ಸಜ್ಜನರಾದವರು ಒಪ್ಪಿಕೊಳ್ಳಲೇ ಬೇಕಲ್ಲ? ಇಲ್ಲಿಯೂ ದುರ್ಯೋಧನ ಶಲ್ಯನಿಗೆ ಕರ್ಣನ ವ್ಯಕ್ತಿತ್ವದ ಬಗ್ಗೆ ಹೇಳ ಬೇಕಾಗುತ್ತದೆ. ಹೀಗೆ ಪಂಪ ಕರ್ಣನ ಹಲವಾರು ಪ್ರಸಂಗದಲ್ಲಿ ಕುಲಹೀನರ ಪರವಾಗಿ ನ್ಯಾಯಸಮ್ಮತ ರೀತಿಯಲ್ಲಿಯೇ ಮಾತನಾಡುತ್ತಾನೆ. ಹೀಗೆ ಮಾತನಾಡುವ ಪಂಪ ಕೆಲವು ಪ್ರಸಂಗದಲ್ಲಿ ಬ್ರಾಹ್ಮಣತ್ವವನ್ನು ಎತ್ತಿಹಿಡಿಯಲು ಹಾತೊರೆಯುವುದಕ್ಕೆ ಆಶ್ಚರ್ಯಪಡಬೇಕಾಗುತ್ತದೆ. ತನ್ನ ಮಿತಿಯಲ್ಲಿ ಜಾತಿ ವ್ಯವಸ್ಥೆಯನ್ನು ಪ್ರತಿಭಟಿಸಿದ ಪಂಪನ ಪೂರ್ವಿಕರು ವೈದಿಕ ಕರ್ಮಠತನಕ್ಕೆ ಹೇಸಿ ಜೈನರಾದವರು ಎಂದು ಅಂದುಕೊಂಡಾಗ ಮತ್ತೇಕೆ ಬ್ರಾಹ್ಮಣತ್ವದ ಶ್ರೇಷ್ಠತೆಯನ್ನು ಎತ್ತಿ ಹಿಡಿಯಲು ಮುಂದಾದ. ಆದಿಪುರಾಣದಲ್ಲಿ ಪಂಪನೆ

"ಪರಮಬ್ರಹ್ಮತನೂಭವರ್ ದ್ವಿಜವರರ್ ವರ್ಣೋತ್ತಮರ್ ಲೋಕ ಪೂ
ಜ್ಯರಿಳಾವಂದಿತ ಮಾನ್ಯರುನ್ನತ ಗುಣರ್ ಚಾರಿತ್ರ ಶುದ್ಧರ್ ಧರಾ
ಮರರೀ ಬ್ರಾಹ್ಮಣರೆಂದುಕೊಂಡು ಕೊಸೆದಾಪಟ್ಟುಂಡ ಭೂಮಂಡಲೇ
ಶ್ವರನೋರಂತೆ ನೆಗಳ್ಚೆಕೊಡೆ ನೆಗಳ್ಚೀತ್ತೊತ್ತಂ ದ್ವಿಜಾನ್ವಯಂ"

[ಆ. ಪು. ೧೫ -೨೧]

ಹೀಗೆ ವರ್ಣದಲ್ಲಿ ಉತ್ತಮರು, ಚಾರಿತ್ರ್ಯಶುದ್ಧರು ಬ್ರಹ್ಮನ ಶರೀರದಲ್ಲಿ ಹುಟ್ಟಿದವರು ಭೂಮಿಯ ಮೇಲಿನ ದೇವತೆಗಳು ಎಂದು ಒಂದು ವರ್ಗವನ್ನು ಮೇಲೆತ್ತಲು ಪಂಪನಿಗೆ ಇದ್ದ ಒತ್ತಡಗಳೇನು ? ಬಹುಶಃ ಜೈನಧರ್ಮದಲ್ಲಿಯೂ ಈ ಬ್ರಾಹ್ಮಣ್ಯದ ಶ್ರೇಷ್ಠತೆಯ ಹುಳುಗಳು ಹೊಕ್ಕಿರಬಹುದೆ? ಅಥವಾ ಪಂಪನ ಮನಸ್ಸಿನ ಮೂಲೆಯಲ್ಲಿ ಈ ಹುಳುಗಳು ಇದ್ದಿರಬಹುದೆ?

ರಾಜಸೂಯಯಾಗದ ಪ್ರಸಂಗದಲ್ಲಿ ಧರ್ಮರಾಯ ನೆರೆದ ಸಭೆಯಲ್ಲಿ ಅಗ್ರಪೂಜೆಯನ್ನು ಯಾರಿಗೆ ಮಾಡಬೇಕೆಂದು ಭೀಷ್ಮರನ್ನು ಕೇಳಲು ಭೀಷ್ಮರು ಕೃಷ್ಣನ ಹೆಸರನ್ನು ಸೂಚಿಸುತ್ತಾರೆ. ಆಗ ಸಭೆಯಲ್ಲಿದ್ದ ಶಿಶುಪಾಲನು ತೀವ್ರವಾಗಿ ಪ್ರತಿಭಟಿಸಲು ಕಾರಣ ಕೃಷ್ಣ. ದಶಾವತಾರದ ಕೃಷ್ಣ ಬಗ್ಗೆ ವ್ಯಂಗ್ಯವಾಡುತ್ತಾನೆ. ಅದೇ ಸಂದರ್ಭದಲ್ಲಿ ಶಂಖದಲ್ಲಿ ಹಾಲೆರೆದ ಹಾಗೆ ಸತ್ಕುಲದ ಅನೇಕಾನೇಕ ಅರಸುಗಳು ಇಲ್ಲಿ ನೆರೆದಿರುವಾಗ ನೀನು ಈ ಪೂಜೆಗೆ ಯೋಗ್ಯನೆ ಎಂದು ಪ್ರಶ್ನೆ ಹಾಕುತ್ತಾನೆ. ಇಲ್ಲಿ ಸತ್ಕುಲ ಯಾವುದು? ಅರಸರ ಕ್ಷತ್ರಿಯ ಕುಲವೇ? ದನಕಾಯುವ ದನಗಾಹಿಗಳ ಕುಲವೆ? ಹೀಗೆ ಪಂಪ ತನ್ನಲ್ಲಿಯ ಕೆಲವು ದ್ವಂದ್ವಗಳಿಗೆ ಒಳಗಾಗಿದ್ದಾನೆ. ಇದು ಪಂಪನ ವ್ಯಕ್ತಿತ್ವದಿಂದ ಹುಟ್ಟಿದ್ದಾಗಿರಲಿಕ್ಕಿಲ್ಲ. ಮೂಲ ವ್ಯಾಸಭಾರತವನ್ನು ಮೇಯ್ಯೆಗೆಡಲಿಯದೆ' ಹಾಗೇ ಬರೆಯಲು ಹೊರಟಾಗ ಎದುರಾದ ಬಿಕ್ಕಟ್ಟುಗಳ ಫಲವಾಗಿರಬಹುದು.

೪

ವರ್ಣದ ಹಾಗೇ ವರ್ಗ ಸಂಬಂಧಿ ನೆಲೆಯಲ್ಲಿಯೂ ಪಂಪ ದುಡಿಯುವ ವರ್ಗ ಮತ್ತು ಆಳುವ ವರ್ಗವನ್ನು ಕಣ್ಣೆದುರಿಗಿಟ್ಟುಕೊಂಡು ಅರಸನ ಆಶ್ರಯದಲ್ಲಿಯೂ ಜೋಳವಾಳಿಯನ್ನೂ ಮೀರಿಯೂ ಕೆಲವು ಸಲ ಮಾತನಾಡುತ್ತಾನೆ. ದ್ರೋಣ, ದ್ರುಪದರ ಪ್ರಸಂಗದಲ್ಲಿ ಇದನ್ನು ಕಾಣಬಹುದು. ನಂತರ ದುರ್ಯೋಧನನ್ನು ಚಿತ್ರಾಂಗದ ಹೆಡಮುರಿಗೆ ಕಟ್ಟಿಕೊಂಡು ಹೋಗುವಾಗ ಎಲ್ಲ ವೀರರೂ "ಅಂತುಯ್ವುದುಂ ನೆಗೆಚ್ಚೆಯೆ ಬೀರರೆಲ್ಲಾ ಬಡವರ ಪಿತರರಂತೆ ಮಿಳ್ಮಿಳ ನೋಡುತ್ತಿರೆ ಮಿಕ್ಕುದುಂಡರಂತೆ ತಲೆಯಂಬಾಗಿ" ಇಲ್ಲಿ ಬರುವ ಬಡವರ ತಂದೆ, ಒಂದು ಸಮಾಜದಲ್ಲಿಯ ಅಸಹಾಯಕ ವರ್ಗವನ್ನು ಸೂಚಿಸುವಂತಿದೆ. ಅರಸರು, ಶ್ರೀಮಂತರು ಹಣಮದ, ಅಧಿಕಾರ ಬಲದಿಂದ ಬಡವರ ಮಕ್ಕಳನ್ನು ಬಿಟ್ಟಿ ಕೆಲಸಕ್ಕೆ ಎಳೆದುಕೊಂಡು ಹೋಗುತ್ತಿದ್ದರು. ಹೀಗೆ ಎಳೆದುಕೊಂಡು ಹೋದ ಗಂಡು ಮಕ್ಕಳನ್ನು ಸೈನ್ಯದ ಕೆಲಸಕ್ಕೂ ಹೆಣ್ಣುಮಕ್ಕಳನ್ನು ದಾಸಿಯರನ್ನಾಗಿಯೂ ದುಡಿಸಿಕೊಳ್ಳುತ್ತಿದ್ದರು. ಹೀಗೆ ಅರಸು, ಅವನ ಅಧಿಕಾರಿ ವರ್ಗ ಮಕ್ಕಳನ್ನು ಎಳೆದೊಯ್ಯುವಾಗ ಆ ಬಡತಂದೆಯರು ಅಸಹಾಯಕತೆಯಿಂದ ಪಿಳಪಿಳನೆ ಕಣ್ಣು ಪಿಳುಕಿಸುತ್ತ ನಿಂತಿರುತ್ತಿದ್ದರು ಎಂಬುದರಲ್ಲಿ ಕೆಳವರ್ಗದ, ಬಡವರ ಅಸಹಾಯಕತೆ ಮಡುಗಟ್ಟಿರುವುದನ್ನು ಕಾಣಬಹುದು. ಆದಿಪುರಾಣದಲ್ಲಿ ಬರುವ ಲೋಲುಪ ಎನ್ನುವ ವ್ಯಾಪಾರಿಯ ಪ್ರಸಂಗದಲ್ಲಿಯೂ ಬಿಟ್ಟಿ ದುಡಿಯುವರ ಗೋಳನ್ನು ಕಾಣಬಹುದು.

ವಾರಸುದಾರಿಕೆ ಇಲ್ಲದವರ ಆಸ್ತಿಯನ್ನು ರಾಜರು ವಶಪಡಿಸಿಕೊಳ್ಳುವುದು ಹೊಸ ವಿಚಾರವೇನಲ್ಲ. ಆದರೆ ವಾರಸುದಾರಿಕೆಯಿದ್ದು ವಶಪಡಿಸಿಕೊಳ್ಳುವ ಘಟನೆಗಳು ರಾಜನ ದಬ್ಬಾಳಿಕೆಯನ್ನು ತೋರಿಸುವಂತಹದ್ದು. ಶ್ರೀಮತಿಯ ಭವಾವಳಿಯ ಕಥೆಯ ನಿರೂಪಣೆಯ ಸಂದರ್ಭದಲ್ಲೊಂದು ಇಂತಹ ಪ್ರಸಂಗ ಚಿತ್ರಿಸಿದ್ದಾನೆ. ಈ ಪ್ರಸಂಗ ಮೂಲದಲ್ಲಿಲ್ಲ. "ಶ್ರೀಮತಿ ತನ್ನ ಪೂರ್ವಭವದಲ್ಲಿ ನಿರ್ನಾಮಿಕೆಯಾಗಿ ಪಿಹಿತಾಶ್ರವ ಮುನಿಗಳಿಂದ ತನ್ನ ಭವವನ್ನು ತಿಳಿಯುತ್ತಾಳೆ.

ಅವಳಿಗೆ ಆ ಹೆಸರು ಏಕೆ ಬಂತೆಂಬುದಕ್ಕೆ ಪಂಪ ಕೊಡುವ ಕಾರಣ ಸಹಜವಾಗಿದೆ. ಪರೇತವನ ಭೂಮಿಯೊಳ್ ಜೀರ್ಣ ಶೀರ್ಣ ಜೀರಂಗಳೊಳ್ ಕಂಡ ಕಂಡವರೆಲ್ಲ ಮೆಯ್ಯ ದುರ್ಗಂಧಕ್ಕೆ ಪೇಸಿಕಳೆಯೆ ನಿರ್ನ್ನಾಮಿಕೆ' ಯೆಂಬ ಪೆಸರಾಗಿ ಬೆಳೆಯುತ್ತಾಳೆ"[ಸಮಗ್ರ ಕ.ಸಾ.ಚರಿತ್ರೆ ಜಿ. ವಿ. ವಿ. ಸಂ. ೨ ಪು.ಸಂ. ೧೦೪] ಪಂಪನೆ ಹೆಣೆದಿರುವ ಈ ಕಥೆಯಲ್ಲಿ ವಾರಸುದಾರರಿಲ್ಲದ ಅದು ಹೆಣ್ಣು ಮಕ್ಕಳ ಆಸ್ತಿಯನ್ನು ಅರಸು ಎತ್ತಿಹಾಕಿಕೊಂಡು ಹೇಗೆ ಅವರನ್ನು ಬೀದಿಪಾಲಾಗಿ ಮಾಡುತ್ತಾನೋ ಹಾಗೆನೇ ಆಸ್ತಿಯಿಲ್ಲದವರನ್ನು ಸಮಾಜ ನಿರ್ದಯವಾಗಿ ನಡೆಸಿಕೊಳ್ಳುತ್ತಿತ್ತು ಎಂಬುದನ್ನು ಎತ್ತಿತೋರಿಸುತ್ತಾನೆ.

ದ್ರುಪದರಾಜನ ಬಳಿಗೆ ಸಹಾಯಾರ್ಥಿಯಾಗಿ ಬಂದ ದ್ರೋಣ ತಮ್ಮ ಬಾಲ್ಯದ ಸ್ನೇಹದ ಸಲುಗೆಯಿಂದ ಸೇವಕನಿಗೆ ಹೇಳಿಕಳಿಸುತ್ತಾನೆ. 'ನಿಮ್ಮ ಒಡನಾಡಿದ ಗೆಳೆಯ ದ್ರೋಣನೆಂಬ ಬ್ರಾಹ್ಮಣ ಬಂದಿದ್ದಾನೆ' ಎಂದು ಅರಸನಿಗೆ ಹೇಳಿದಾಗ ದ್ರುಪದ

"ಅಂತೆಂಬನಾರ್ಗೆ ಪಿರಿದುಂ।
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ ॥
ಚಿಂತೆನಗೆ ಕೆಳೆಯನೇ ನೊಂ।
ಕಂತಪ್ಪನ ಜಿಯೆನೆಂದು ಸಭೆಯೊಳ್ ನುಡಿದಂ ॥

[ವಿ. ವಿ. ೩ -೪೭]

ದ್ರೋಣಂಗೆ ಇದರಿಂದ ಅಪಮಾನವಾಗುತ್ತದೆ. ಆಗ ಅವರು ಈ ಪ್ರಸಂಗದ ವಿಶ್ಲೇಷಣೆ ಮಾಡುತ್ತಾರೆ.

ನುಡಿತಡಪಪ್ಪುದೊಂದು ಮೊಗದೊಳ್ ಮುಜುಕಂದೊರೆಕೊಳ್ವುದೊಂದು ನಾ ।
ಣ್ಗೊಡೆ ಗುಡದಿರ್ಪುದೊಂದು ನುಡಿಗಳ್ ಮೊಜೆಯಂ ಮಜೆಯಿಪ್ಪುದೊಂದುಕ ॥
ಳ್ಗುಡಿದವರಂದ ಮಿಂತು ಸಿರಿ ಸಾರ್ತರೆ ಸಾರ್ವುದದರ್ಕೆಸಂದೆಯಂ ।
ಬಡದೆ ಜಲಕ್ಕನೀಗಳ ಚಿದೆಂ ಸಿರಿಕಳ್ಳೊಡಪುಟ್ಟಿತೆಂಬುದಂ ।

[ವಿ.ವಿ.೨-೪೯]

ಕಳ್ಳುಕುಡಿದವರು ನಾಚಿಕೆ ಬಟ್ಟಿರುತ್ತಾರೆ. ಮುಖ ಸಿಂಡರಿಸಿರುತ್ತಾರೆ. ಮಾತು ತಡವರಿಸಿ ಆಡುತ್ತಾರೆ. ದಾರಿತಪ್ಪಿ ನಡೆಯುತ್ತಾರೆ. ಸಿರಿ ಬಂದಾಗಲೂ ಹೀಗೆಯೇ. ಶ್ರೀಮಂತಿಕೆಯ ಮತ್ತು, ಕುಡಿತದ ಅಮಲು ದಾರಿ ತಪ್ಪಿಸುತ್ತದೆ ಎಂಬುದನ್ನು ಅಂತೆ ಎನ್ನುತ್ತಾರೆ. ವರ್ಗ ನೆಲೆಯಲ್ಲಿ ಕುಲದ ಉತ್ತಮಿಕೆ ನೆಲಕಚ್ಚುವ ಸನ್ನಿವೇಶವಿದು. ಆದರೂ ಪಂಪ ಅಪಮಾನಿತನಾದ, ಅಸಾಹಯಕನಾದ ದ್ರೋಣನ ಪರವಾಗಿಯೇ ನಿಲ್ಲುವಲ್ಲಿ ಅವನ ಮಾನವ ಪ್ರೇಮ ಕೆಲಸ ಮಾಡಿದೆ.

೨೩

ಭಾರತೀಯ ಸಮಾಜ ಮನುಷ್ಯ ಸಂಬಂಧಗಳಿಗೆ ಕೆಲವು ಹೆಸರಿಟ್ಟು, ಕರೆದಿದೆ. ರಕ್ತ ಸಂಬಂಧಗಳಿಗೆ ಹೆಚ್ಚು ಬೆಲೆ ಕೊಟ್ಟಿದೆ. ಇದು ಒಳಗಿನ ಲೋಕವಾದರೆ ಸಮಾಜದಲ್ಲಿಯ ವ್ಯಕ್ತಿ

ವ್ಯಕ್ತಿಗಳ ಸಂಬಂಧ ಹೊರಗಿನ ಲೋಕದ್ದು ಎನ್ನಬಹುದು. ಮಾರ್ಕ್ಸ್ ಹೇಳಿದ ಹಾಗೇ 'ಎಲ್ಲ ಮನುಷ್ಯ ಸಂಬಂಧಗಳು ಆರ್ಥಿಕ ಆಧಾರದ ಮೇಲೆಯೆ ನಿಂತಿರುತ್ತವೆ' ಎನ್ನುವುದನ್ನು ಒಪ್ಪದ ಭಾವುಕ ಮನಸ್ಸುಗಳು ಈ ಸಮಾಜ, ಸಂಸ್ಕೃತಿ ನಿರೂಪಿಸಿದ ಸಂಬಂಧಗಳ ವರ್ತುಲದೊಳಗೆ ಗಿರಕಿ ಹೊಡೆಯುತ್ತಿರುತ್ತವೆ. ಪಂಪನಿಗೆ ಈ ಸಂಬಂಧಗಳನ್ನು ಒರೆಗೆ ಹಚ್ಚುವ ಪ್ರಸಂಗಗಳು ಎದುರಾಗಿರಬಹುದು.

ಇಂದಿನ ಸಮಾಜದಲ್ಲಿಯೂ ಉನ್ನತ ಅಧಿಕಾರದಲ್ಲಿರುವ ವ್ಯಕ್ತಿಗಳು ತಾವು ಬೆಳೆದು ಬಂದ ಸ್ಥಿತಿಯನ್ನು ಮರೆತು ಬ್ರಾಹ್ಮಣ್ಯತ್ವದಿಂದ (ಭ್ರಮೆ) ನೇಣು ಹಾಕಿಕೊಂಡಿರುವವರ ಸಂಖ್ಯೆ ಸಾಕಷ್ಟಿದೆ. ಹೀಗೆ ಅಧಿಕಾರ ಅಂತಸ್ತಿನ ಮದವೇರಿದವರು ರಕ್ತ ಸಂಬಂಧದ ಒಳಲೋಕದ ಬಾಗಿಲುಗಳನ್ನೇ ಮುಚ್ಚಿಕೊಂಡಿರುವುದಕ್ಕೆ ನಮ್ಮ ಭಾರತೀಯ ಸಮಾಜ, ಸಂಸ್ಕೃತಿ ಏನಾದರೂ ಉತ್ತರ ಹೇಳಲು ಸಾಧ್ಯವೆ? ಇಂತಹ ಹಲವಾರು ಸನ್ನಿವೇಶಗಳನ್ನು ಪಂಪ ತನ್ನ ಕಾವ್ಯದಲ್ಲಿ ತುಂಬಿದ್ದಾನೆ. ದುರ್ಯೋಧನ, ಕರ್ಣ, ಭರತ, ಬಾಹುಬಲಿ, ಕುಂತಿಯರ ಪ್ರಸಂಗದಲ್ಲಿ ಇದನ್ನು ಕಾಣಬಹುದು.

ಭರತ ಬಾಹುಬಲಿಯರ ಯುದ್ಧ ಪ್ರಸಂಗದಲ್ಲಿ ಪಂಪ ಸಹೋದರ ಸಂಬಂಧಗಳನ್ನು ಪ್ರಶ್ನಿಸುತ್ತಾನೆ, ಮತ್ತು ಪರಂಪರಾಗತವಾಗಿ ಹೇಳಿಕೊಂಡು ಬಂದ ನೆಲೆಯಿಂದ ಭಿನ್ನವಾದ ನೆಲೆಯಲ್ಲಿ ಉತ್ತರ ಕೊಡತ್ತಾನೆ. ಭಾರತೀಯ ಕೌಟುಂಬಿಕ ಚೌಕಟ್ಟಿನಲ್ಲಿ ಹಿರಿಯಣ್ಣ ಮತ್ತು ಅತ್ತಿಗೆ, ತಂದೆ-ತಾಯಿಯರ ಸಮಾನವೆಂದು ಹೇಳಿದೆ. ಹಿರಿಯಣ್ಣನ ಆಜ್ಞೆಯನ್ನು ಉಲ್ಲಂಘಿಸುವಂತಿಲ್ಲ. ಇಲ್ಲಿ ವಿನಯಕ್ಕಿಂತಲೂ ವಿಧೇಯತೆಯನ್ನು ನಮ್ಮ ಸಮಾಜ ಅಪೇಕ್ಷೆ ಪಟ್ಟಿದೆ. ಅಂತಹ ಒಂದು ಪ್ರಸಂಗ ಆದಿಪುರಾಣದಲ್ಲಿ ಭರತ ಬಾಹುಬಲಿಯರ ಪ್ರಸಂಗದ ಮೂಲಕ ಒರೆಗೆ ಹಚ್ಚಿದ್ದಾನೆ. ಭರತ ದಿಗ್ವಿಜಯ ಮುಗಿಸಿಕೊಂಡು ಪುರ ಪ್ರವೇಶ ಮಾಡುವ ಸಮಯದಲ್ಲಿ ಅವನ ಚಕ್ರರತ್ನ ನಿಂತುಕೊಳ್ಳುತ್ತದೆ. ಆಗ ಭರತ ಪುರೋಹಿತರನ್ನು ಕೇಳಲು ಅವರು ನಿನ್ನ ನೂರುಮಂದಿ ತಮ್ಮಂದಿರೂ ನಿನ್ನ ಚಕ್ರಾಧಿಪತ್ಯವನ್ನು ಒಪ್ಪಿಲ್ಲವೆಂದಾಗ ಭರತ ತನ್ನ ತಮ್ಮಂದಿರಿಗೆ ಆಜ್ಞೆ ಮಾಡುತ್ತಾನೆ. ಆಗ ಎಲ್ಲರೂ ಅಣ್ಣನ ಕಾರ್ಯಕ್ಕೆ ಹೇಸಿ ತಪಸ್ಸಿಗೆ ಹೋಗುತ್ತಾರೆ. ಆದರೆ ಬಾಹುಬಲಿ ಎದುರು ನಿಲ್ಲುತ್ತಾನೆ. ಪ್ರತಿಭಟಿಸುತ್ತಾನೆ. ಅವನ ದಿಗ್ವಿಜಯದ ವೈಖರಿಯನ್ನೇ ಟೀಕಿಸಿ ಹೀಯಾಳಿಸಿ ಮಾತನಾಡುತ್ತಾನೆ. ಆಗ ಅವನಿಂದ ಬರುವ ಮಾತು ಸಂಬಂಧಗಳಿಗೆ ವ್ಯಾಖ್ಯಾನ ನೀಡಿದಂತಿದೆ.

> "ಪಿರಿಯಣ್ಣಂಗೆಱಗುವುದೇಂ
> ಪರಿಭವಮೇ ಕೀೞ್ ನೆತ್ತಿಯೊಳ್ ಬಾಳಂ ನಿ
> ರ್ನೆರ ಮೂೞ್ ಚಲದಿನೆಱಗಿಸ
> ಲಿರೆ ಭರತಂಗೆಱಗುವೆೞಕ ಮಂಜ ಮೆಯಲ್ತೇ"
>
> [ಆ. ಪು. ೧೪-೭೫]

ಭಯದ ಅಂಜಿಕೆಯ ಒಡಲಿನಿಂದ ವಿಧೇಯತೆ ಬರಬಹುದು. ಆದರೆ ವಿನಯ ಬರಲು ಸಾಧ್ಯವೆ? ಪ್ರೀತಿ, ಸ್ನೇಹದಲ್ಲಿಯೇ ವಿನಯ ಕಾಣಿಸಿಕೊಳ್ಳಲು ಸಾಧ್ಯ. ಬಾಹುಬಲಿಯ ಪಕ್ಷದಲ್ಲಿ

ನಿಂತು ಪಂಪ ತನ್ನ ಸಮಕಾಲೀನ ಜೀವನದ ಕೌಟುಂಬಿಕ ಚೌಕಟ್ಟಿನಲ್ಲಿ ಗಟ್ಟಿಗೊಂಡ ಹಿರಿಕಿರಿಯ ಸಂಬಂಧಗಳಿಗೆ ನ್ಯಾಯ ಒದಗಿಸುವಲ್ಲಿ ಗುಣಕ್ಕೆ ಮಹತ್ವ ನೀಡುತ್ತಾನೆ.

ಹೊರಲೋಕದ ಸಂಬಂಧದ ನೆಲೆಯಲ್ಲಿ ಪಂಪ ದುರ್ಯೋಧನ ಮತ್ತು ಕರ್ಣರನ್ನಿಟ್ಟು ಕೊಂಡು ತನ್ನ ಮತ್ತು ಅರಿಕೇಸರಿಯ ಸ್ನೇಹದ ಬಗ್ಗೆ ಮಾತನಾಡುತ್ತಾನೆ. ಇಲ್ಲಿ ಅರಸ, ಆಳು, ಪ್ರಜ್ಞೆ ಎನ್ನುವುದಕ್ಕಿಂತಲೂ ನಿರ್ಮಲ ಸ್ನೇಹದ ಪರವಾಗಿ ಪಂಪ ನ್ಯಾಯ ದೊರಕಿಸಿಕೊಳ್ಳುತ್ತಾನೆ.

ದುರ್ಯೋಧನ ಕರ್ಣನಿಗೆ ಅಂಗರಾಜ್ಯಾಧಿಪತ್ಯವನ್ನು ಶಾಸ್ತ್ರೋಕ್ತವಾಗಿ ನೀಡಿದ ಮೇಲೆ ಕರ್ಣನಿಗೆ ಹೇಳುವ ಈ ಮಾತುಗಳು

"ಪೊಡಮಡುವರ್ ಜೀಯೆಂಬರ್
ಕುಡು ದಯೆಗೆಯ್ಯೇಂ ಪ್ರಸಾದಮೆಂಬಿವು ಪೆಱರೊಳ್
ನಡೆಗೆಮ್ಮ ನಿನ್ನಯೆಡೆಯೊಳ್
ನಡೆಯಲ್ವೇಡೆನಗೆ ಕೆಳೆಯನೈರಾಧೇಯಾ"

[ವಿ. ವಿ. ೨ -೮೫]

ನಮ್ಮಸ್ಕರಿಸುವುದು, ವಿಧೇಯತೆಯಿಂದ ಇರುವುದು ದಯೆ ತೋರಬೇಕು ಎಂದು ನಡುಬಗ್ಗಿಸಿ ನಿಲ್ಲುವುದೆಲ್ಲ ಬೇರೆಯವರಲ್ಲಿ. ನನ್ನಲ್ಲಿ ನಿನ್ನಲ್ಲಿ ಅಂತಹದ್ದು ಬೇಡ. ನಾನು ನೀನು ಗೆಳೆಯರು. ಎನ್ನುವಲ್ಲಿ ಪಂಪನಿಗೆ ಅರಿಕೇಸರಿಯೊಡನಿದ್ದ ಸ್ನೇಹದ ಸಲುಗೆಯನ್ನು ಅರಿಯಬಹುದು. ಇದನ್ನು ಇನ್ನಷ್ಟು ಒತ್ತಿ ಸಹಜವಾಗಿ ನಡೆದಿರಬಹುದಾದ ಘಟನೆಯ ಮೂಲಕ ಮನವರಿಕೆ ಮಾಡಿಸುತ್ತಾನೆ. ಒಂದು ದಿನ ಕರ್ಣ ಮತ್ತು ಭಾನುಮತಿ ಪಗಡೆಯಾಟ ಆಡುವಾಗ ಪಂದ್ಯ ಕಟ್ಟುತ್ತಾರೆ. ಭಾನುಮತಿ ಆಟದಲ್ಲಿ ಸೋಲುತ್ತಾಳೆ. ಆಗ ಆ ಸಂತೋಷದ ಗಳಿಗೆಯಲ್ಲಿ ಕರ್ಣ ಭಾನುಮತಿಯು ಕೊರಳಹಾರಕ್ಕೆ ಕೈಹಾಕಿ ಅದು ಹರಿದು, ಮುತ್ತುಗಳೆಲ್ಲ ನೆಲದ ಮೇಲೆ ಸೂರೆಗೊಳ್ಳುತ್ತವೆ. ಆಗ ಕರ್ಣನಿಗೆ ವಾಸ್ತವದ ಅರಿವಾಗುತ್ತದೆ. ತಾನು ಆಡುತ್ತಿರುವುದು ಅರಸನ ಹೆಂಡತಿಯ ಜೊತೆಗೆ ಅದು ಪರಸ್ತ್ರೀ. ಎನ್ನುವುದು ನೆನಪಾಗಿ ಒಂದು ಕ್ಷಣ ಅಳುಕುತ್ತಾನೆ. ಆದರೆ ದುರ್ಯೋಧನ ಇದನ್ನು ಕಂಡು ಯಾವುದೇ ಭಾವನೆಗೆ ಎಡೆಕೊಡದೆ ಮುತ್ತುಗಳನ್ನು ಆರಿಸಿಕೊಡಲೆ ಎಂಬ ಪ್ರಸಂಗವನ್ನು-

"ಸೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ
ಳ್ಳುತ್ತಿರೆ ಯೇವ ಮಿಲ್ಲದಿವ ನಾಯ್ದುದೊ ತಪ್ಪದೆ ಪೇಟುಮೆಂಬ ಭೂ
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲವೆ"

[ವಿ. ವಿ. ೯- ೬೯]

ಕೃಷ್ಣ ಕರ್ಣನಿಗೆ ಅವನ ಹುಟ್ಟಿನ ಗುಟ್ಟನ್ನು ಹೇಳಿ ಪಾಂಡವ ಪಕ್ಷಕ್ಕೆ ಕರೆಯ ಬಂದಾಗ ಆಡಿ ತೋರಿಸುತ್ತಾನೆ ಕರ್ಣ. ಇದು ಸ್ನೇಹದ ನಿಜವಾದ ಅರ್ಥ. ಅರಸ ದುರ್ಯೋಧನ ಮತ್ತು

ಕರ್ಣರ ಸ್ನೇಹದಲ್ಲಿಯೂ ಪಂಪ ಸಾಮಾನ್ಯ ಸೂತಪುತ್ರನಾದ ಕರ್ಣನ ಪರವಾಗಿ ಮಾತನಾಡಿ ಅವನ ವ್ಯಕ್ತಿತ್ವದ ಹಿರಿಮೆಗೆ ಗರಿ ಚುಚ್ಚುತ್ತಾನೆ.

೬

ಸ್ತ್ರೀ ಸಂಬಂಧಿ ನೆಲೆಯಲ್ಲಿ ನಮ್ಮ ಸಮಾಜ ಅಂದಿನಿಂದ ಇಂದಿನವರೆಗೂ ಇಬ್ಬಗೆಯ ನೀತಿಯನ್ನಿಟ್ಟುಕೊಂಡೆ ಬಂದಿದೆ. ಇಂತಹ ಸಂದರ್ಭದಲ್ಲಿ ಪ್ರಜ್ಞಾವಂತ ವ್ಯಕ್ತಿಗೆ ಈ ನೆಲೆಯಲ್ಲಿ ಪ್ರಶ್ನೆಗಳು ಕಾಡಿರುವ ಸಾಧ್ಯತೆಗಳಿವೆ. ಅಂತಹ ಸಾಧ್ಯತೆಗಳು ಪಂಪನಲ್ಲಿಯೂ ಕಾಣಿಸುತ್ತವೆ. ಹೆಣ್ಣಿನ ಆಯ್ಕೆಯ ಹಕ್ಕನ್ನು ಕಿತ್ತುಕೊಂಡು ಆಕೆಯನ್ನು ಪಂದ್ಯದ ವಸ್ತುವಾಗಿಸಿದ ವ್ಯವಸ್ಥೆಯ ಬಗ್ಗೆ ಪಂಪನಲ್ಲಿ ಸದಭಿಪ್ರಾಯವಿಲ್ಲ. ಆಯ್ಕೆಯ ಹಕ್ಕು, ವೈಚಾರಿಕ ಶಕ್ತಿ, ಸಾಹಸ, ಛಲ, ನನ್ನಿಯಂಥ ಗುಣಗಳು ಗಂಡುತನದ ಗುಣಗಳೆಂದೆ ಪರಿಭಾವಿಸಿದ ಕಾಲದಲ್ಲಿ ಪಂಪ ಈ ಗುಣಗಳನ್ನು ಹೆಣ್ಣಿನ ಮೂಲಕವೂ ತೋರಿಸಲು ಪ್ರಯತ್ನಿಸಿದ್ದಾನೆ.

ಅಷ್ಟಾದಶ ವರ್ಣನೆಗಳಲ್ಲಿ ವೇಶ್ಯಾವಾಟಿಕೆಯ ವರ್ಣನೆಯೂ ಒಂದು. ಇದನ್ನು ಪಂಪ ತನ್ನ ಕಾವ್ಯ ಬರೆಯುವ ಸಂದರ್ಭದಲ್ಲಿಯೂ ಪಾಲಿಸಿಕೊಂಡು ಬಂದಿದ್ದಾನೆ. ಆ ಕಾಲದಲ್ಲಿ ಸೂಳೆಗಾರಿಕೆ ಒಂದು ಮೌಲ್ಯವಾಗಿರಬಹುದೇನೋ?

ಆ ಮೌಲ್ಯ ಪುರುಷ ಪ್ರಧಾನ ಸಂಸ್ಕೃತಿಯ ಮುದ್ದುಮರಿಗಳಲ್ಲಿ ಒಂದು ಎಂಬುದೇನು ಸುಳ್ಳಲ್ಲ. ಹೀಗಿರುವಾಗ ಆ ಸಂಪ್ರದಾಯದಲ್ಲಿಯೂ ಸ್ತ್ರೀಯರು ತಮ್ಮ ಸ್ವತಂತ್ರ ಆಯ್ಕೆಯ ಹಂಬಲವನ್ನುಟ್ಟುಕೊಂಡಿದ್ದರು. ತಮ್ಮ ಗುಣ ಸ್ವಭಾವಕ್ಕೆ ಒಗ್ಗುವ ವಿಟರನ್ನೇ ಆರಿಸಿಕೊಳ್ಳುತ್ತಿದ್ದರು. ಬರೀ ಧನ, ಕನಕಾದಿಗಳಿಗೆ ಅಲ್ಲ ಎಂಬುದನ್ನು ಪಂಪ ಚಿತ್ರಿಸಿದ್ದಾನೆ. ಕುಂಟಣಿಯರು ಹೊನ್ನು ತರುವ, ಕೊಡುವ ಮುದುಕರನ್ನು ಕರೆತಂದಾಗ ಎಳೆಯ ವಯಸ್ಸಿನ ಸೂಳೆಯರು ಬೇಸರವನ್ನು, ಸಂಕಟವನ್ನು ನಿರಾಕರಿಸುವ ಮನಸ್ಥಿತಿಯನ್ನು ತನ್ನ ಗೆಳತಿಯರಲ್ಲಿ ಹೀಗೆ ಬಿಚ್ಚಿ ತೋರಿಸುತ್ತಾರೆ.

ಕೊರೆವೊಡೆ ಬೆಟ್ಟುಗಳ್ ಬಿರಿವುವುಣ್ಮುವ ಲಾಳೆಯ ಲೋಳೆಗಳ್ ಪೊನ
ಲ್ವರೀವುವು ಕೆಮ್ಮಿಕುಮ್ಮಿದೊಡೆ ತೋಳೊಳೆ ಜೀವವೀಯೋಗಮಪ್ಪುದೋ ॥
ದಿರದರ್ದೆ ಗಪ್ಪುದತ್ತಾಳಗಮಾ ನರೆಪಂ [ನೆರೆವಂದು] ಪೊಂಗಳಂ
ಸುರಿವೊಡಮಾರೊ ಸೈರಿಸುವರಾತನ ಪಲ್ಗಿಲಿವಾಯ ನಾತಮಂ"

[ವಿ. ವಿ. ೪-೧೦೦]

ತೋಳ್ ತೆಕ್ಕೆಯಲ್ಲಿ ಕೆಮ್ಮಿದರೆ ಜೀವ ಹೋಗುವ, ಹಲ್ಲಿಲ್ಲದ, ಕಣ್ಣು ಕಾಣದ ಗಂಡಸನ್ನು ಯಾವ ಯುವತಿ ಬಯಸಲು ಸಾಧ್ಯವೆಂಬುದನ್ನು ಹೇಳುತ್ತಲೇ ಪಂಪ ಗಂಡಸಿನ ಅಹಂಮಿಕೆಗೂ ಪೆಟ್ಟುಕೊಟ್ಟು ಹೆಣ್ಣಿನ ಸ್ವತಂತ್ರ ಆಯ್ಕೆಯನ್ನು ಎತ್ತಿ ಹಿಡಿಯುತ್ತಾನೆ.

ದ್ರೌಪತಿಯಂತೂ ಪಂಪನ ಕೈಯಲ್ಲಿ ಅಷ್ಟು ಇಂಬಾಗಿ ಮೂಡಲು ಸಾಧ್ಯವಾಗಿಲ್ಲ. ಮೂಲ ಭಾರತದಲ್ಲಿ ದ್ರೌಪತಿ ಪಂಚವಲ್ಲಭೆ. ಆದರೆ ಪಂಪನಲ್ಲಿ ಆಕೆ ಅರಿಕೇಸರಿಯ ಹೆಂಡತಿ ಯಾಗಬೇಕಾಗುವುದರಿಂದ ಕೆಲವು ಸಂದರ್ಭದಲ್ಲಿ ಮುಜುಗರಕ್ಕೆ ಒಳಪಡ ಬೇಕಾಗುತ್ತದೆ. ಅಂತಹ

ಪ್ರಸಂಗಗಳಲ್ಲಿ ಪಂಪ ತೇಲಿಸಿಕೊಂಡು ಕತೆಯನ್ನು ಮುಂದಕ್ಕೆ ಬೆಳೆಸುತ್ತಾನೆ. ದ್ರುಪದರಾಜ ಮಗಳಿಗಾಗಿ ಸ್ವಯಂವರ ಏರ್ಪಡಿಸಿದ್ದು ಆಕೆಗಿರುವ ಆಯ್ಕೆಯ ಹಕ್ಕಿಗಾಗಿಯೆ ಇರಬೇಕು. ಹೀಗಾಗಿ ಸ್ವಯಂವರದಲ್ಲಿ ದ್ರೌಪತಿ ಪಾಂಡವರ ವಲ್ಲಭೆಯಾಗುತ್ತಾಳೆ. ಇಂತಹ ದ್ರೌಪತಿಯನ್ನು ಧರ್ಮರಾಯ ಪಗಡೆಯಾಟದಲ್ಲಿ ಪಣಕ್ಕಿಟ್ಟು ಸೋಲುತ್ತಾನೆ. ಇಲ್ಲಿ ಆಗಲೇ ಹೆಣ್ಣನ್ನು ವಸ್ತುವಾಗಿಯೂ ಪರಿಗಣಿಸಲಾಗಿತ್ತು. ಮಾರುವ, ಹೊತ್ತುಕೊಂಡು ಹೋಗುವ, ಹಸ್ತಾಂತರಗೊಳ್ಳುವ ವಸ್ತುವಾಗಿರುವುದರಿಂದಲೇ ತುಱುಗೋಳೊಳ್ ಪೆಣ್ಬುಯ್ಯಲೊ।..... ಗಂಡುತನಮನೆ। ನೆಱಪಿದವಂ ಗಂಡನಲ್ಲನೆಂತುಂ ಷಂಡಂ । ಹೆಣ್ಣು ಅಸಹಾಯಕತೆಯಿಂದ ತನ್ನ ರಕ್ಷಣೆಗಾಗಿ ಗಂಡಸಿನ ಮೊರೆ ಹೋಗುವುದು, ಅವರು ಪ್ರಾಣದ ಹಂಗುದೊರೆದು ಹೋರಾಡುವುದು ವೀರತನವೆನಿಸಿತ್ತು. ಆದರೆ ಪಂಪ ಭಾರತದ ದ್ರೌಪತಿ ತನ್ನ ಅಸ್ತಿತ್ವದ ಉಳಿಕೆಗಾಗಿ ತಾನೇ ಹೋರಾಡಬೇಕಾದ ಅನಿವಾರ್ಯತೆಯನ್ನು ಮನಗಂಡ

ಮುಡಿಯಂ ಪಿಡಿದೆಳೆದವನಂ
ಮಡಿಯಿಸಿ ಮತ್ತವನ ಕರುಳ ಪಿಣಿಲಿಂದೆನ್ನಂ
ಮುಡಿಯಿಸುವಿನೆನಂಮುಡಿಯಂ
ಮುಡಿಯೆಂ ಗಡಕೇಳಿಮೀಗಳಾನ್ [ನುಡಿ] ನುಡಿದೆಂ

ಎಂದು ತನಗಾದ ಅಪಮಾನಕ್ಕೆ ಕನಲಿ ಘೋರ ಪ್ರತಿಜ್ಞೆ ಗೈಯುವ ಪ್ರಸಂಗ ಬಂದಿದೆ. ಈ ಸಂದರ್ಭದಲ್ಲಿ ದ್ರೌಪತಿ ಪಂಪಭಾರತದಲ್ಲಿ ರಕ್ಷಣಾರ್ಥಿಯಾಗಿ ಯಾರ ಮೊರೆಯನ್ನು ಹೋಗುವುದಿಲ್ಲ. ಆತ್ಮಗೌರವದ, ನಿಜವಾದ ವ್ಯಕ್ತಿ ಗೌರವ ನೆಲೆಯಲ್ಲಿ ದ್ರೌಪತಿ ಕಾಣಿಸಿಕೊಳ್ಳುತ್ತಾಳೆ.

ಅರಮನೆಯಲ್ಲಿ ಎಣಿಕೆಗೆ ನಿಲುಕದ ಹಾಗೇ ಹೆಣ್ಣುಗಳನ್ನು ಕಟ್ಟಿಹಾಕಿದ ರಾಜರಿಗೆ ಮಕ್ಕಳ ಯೋಗವಿಲ್ಲದಾಗ ಒಂದು ಅನುಕೂಲ ಸಿಂಧೂ ಪ್ರವೃತ್ತಿಯನ್ನು ಧರ್ಮ ಹುಟ್ಟುಹಾಕಿತ್ತು. ಅದನ್ನೆ 'ನಿಯೋಗ ಪದ್ಧತಿ' ಎಂದು ಕರೆದರು. ಉತ್ತಮ ಕುಲಜನಿಂದ ರಾಜನ ಪಟ್ಟದರಸಿಯರು ಪುತ್ರಸಂತಾನವನ್ನು ಪಡೆಯಬಹುದಾಗಿತ್ತು ಈ ಅವಕಾಶ ಕಿರಿಯ ರಾಣಿಯರಿಗೆ ಇರಲಿಲ್ಲ. ಈ ಕಿರಿಯ ರಾಣಿಯರ ಬಗ್ಗೆ ಪಂಪನಿಗೆ ತುಂಬಾ ಮರುಕ. ಹೀಗಾಗಿ ಮಾದ್ರಿ ತನಗೆ ಮಕ್ಕಳಿಲ್ಲದುದುರ್ಕೆ ವಿರಕ್ತೆಯಾಗಿ ಪೊಸೆದು ಬಿಸುಟ ರಕ್ತಶೋಕ ಪಲ್ಲವದಂತೆ ಕರಂ ಕೊರಗಿ ಚಿಂತಿಸುತ್ತಿರ್ದೊಡಾಕೆಯ ಭಿನ್ನವಾದ ಮೊಗದಂದಮಂ ಕಂಡು ಕುಂತಿ ಕರುಣಿಸಿ ಪುತ್ರೋತ್ಪತ್ತಿ ನಿಮಿತ್ತಂಗಳಪ್ಪ ಮಂತ್ರಾಕ್ಷರಂಗಳನುಪದೇಶಂಗೆಯ್ದಳ್" ಕುಂತಿಯ ಕರುಣೆಯಿಂದ ಮಾದ್ರಿಗೂ ಮಕ್ಕಳಾಗುತ್ತವೆ. ಪಟ್ಟದರಸಿಗಿದ್ದ ಹಕ್ಕನ್ನು ಇನ್ನುಳಿದವರಿಗೆ ವಿಸ್ತರಿಸುವಾಗ ಅವರ ಕರುಣೆಯ ಕಟಾಕ್ಷಬೇಕು ಎಂಬುದನ್ನು ಹೇಳಿದ್ದರೂ ನೊಂದ ಹೆಣ್ಣಿನ ಪರವಾಗಿ ಮಾದ್ರಿಯ ಪರವಾಗಿ ನಿಂತು ಆಕೆಗೆ ನ್ಯಾಯ ದೊರಕಿಸುತ್ತಾನೆ.

ಹೆಣ್ಣೊಬ್ಬಳು ಮಕ್ಕಳನ್ನು ಪಡೆಯುವುದು ಆಕೆಯ ಇಚ್ಛೆಗೆ ಬಿಟ್ಟ ವಿಷಯ ವಾಗಿರುವುದರಿಂದ ಸತ್ಯವತಿ ಪರಾಶರ ಮುನಿಯಿಂದ ಮಗನನ್ನು ಪಡೆಯುತ್ತಾಳೆ. ಮುಂದೆ

ಹೆಣ್ಣಿಗೆ ಕೌಟುಂಬಿಕ ಚೌಕಟ್ಟಿನ ಭದ್ರತೆ ಬೇಕೆ ಎನ್ನುವ ಸ್ಥಿತಿ ಬಂದಾಗ ಕನ್ಯತ್ವದ, ಪಾತಿವ್ರತ್ಯದ ಸಂಗತಿಗಳು ಗಂಭೀರವಾದ ಮೌಲ್ಯಗಳಾದವು. ಇಂತಹ ಸಂದರ್ಭದಲ್ಲಿ ಹೆಣ್ಣು ತನ್ನ ಆಯ್ಕೆ ಹಕ್ಕನ್ನು ಚಲಾಯಿಸುವ, ತನ್ನ ಬಯಕೆ ಇಡೇರಿಸಿಕೊಳ್ಳುವಾಗಲೆಲ್ಲ ಯೋಚಿಸುವ ಅನಿವಾರ್ಯತೆ ಎದುರಾಗಿರಬಹುದು. ಹೀಗಾಗಿ ಸತ್ಯವತಿ ಶಂತನು ಕರೆದಾಗ `ಬೇಡವ್ರೊಡೆ ನಮ್ಮಯ್ಯನಂ ಬೇಡಿ' ಎಂದು ತಂದೆಯೆಡೆಗೆ ಬೆರಳುಮಾಡುತ್ತಾಳೆ. ಹೀಗೆ ಪಂಪ ತನ್ನ ಸಂದರ್ಭದಲ್ಲಿ ಸಾಮಾಜಿಕವಾಗಿದ್ದ ವರ್ಗ, ವರ್ಣ, ಲಿಂಗ ನೆಲೆಯಲ್ಲಿ ಇದ್ದ ಅಸಮಾತನೆಯನ್ನು ಕಂಡಿದ್ದ. ಆಶ್ರಿತನಾಗಿದ್ದ ಪಂಪನಿಗೆ ಇಂತಹ ಅವಕಾಶಗಳಲ್ಲೆಲ್ಲ ನೇರವಾಗಿ ಪ್ರತಿಭಟಿಸುವ ಅವಕಾಶವಿರಲಿಕ್ಕಿಲ್ಲ. ಆದರೆ ಸಿಕ್ಕ ಅವಕಾಶಗಳೆಲ್ಲೆಲ್ಲ ಪ್ರತಿಭಟನೆಯ ಧ್ವನಿ ಎತ್ತಿ ದುರ್ಬಲರಿಗೆ, ದೀನರಿಗೆ, ನ್ಯಾಯ ಒದಗಿಸುವಲ್ಲಿ ಮುಂದಾಗಿರುವುದನ್ನು ಗುರುತಿಸಬೇಕು. ಅಂದಿನಿಂದ ಇಂದಿನವರೆಗೂ ಅಸಮಾನತೆಯ ಬೇರುಗಳು ನೆಲದೆಡೆಗೆ ಬೆಸೆದುಕೊಂಡೆ ಇವೆ. ಈ ಅಸಮಾನತೆಯ ಬೇರುಗಳನ್ನು ಅಲುಗಿಸಿದ ಪಂಪನ ನಂತರದ ಅವಧಿಯಲ್ಲಿ ಕಿತ್ತು ಒಗೆಯುವುದಾಗಬೇಕಾಗಿದೆ.

ಶಾಸನ ಪದ್ಯಕಾರರು : ಕೆಲವು ಸಮಸ್ಯೆಗಳು

ಡಾ. ಆರ್. ಪನ್ನೀರ್ ಸೆಲ್ವಮ್

ಸಾಧಾರಣವಾಗಿ ಶಾಸನಗಳು ಆಯಾ ಕಾಲದಲ್ಲಿ ನಡೆದ ನಡೆಸಿದ, ರಾಜಕೀಯ, ಸಾಮೂಹಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರಕಟಪಡಿಸುವ ಮಾಧ್ಯಮವಾಗಿ ಶಾಸನಗಳು ಇರುವವು. ಈ ಶಾಸನಗಳು ಗದ್ಯವಾಗಿರಬಹುದು, ಪದ್ಯವಾಗಿರಬಹುದು. ಪದ್ಯರೂಪವಾದ ಶಾಸನಗಳು ಸಾಹಿತ್ಯ ದೃಷ್ಟಿಯಿಂದಲೂ, ಛಂದಸ್ಸಿನ ದೃಷ್ಟಿಯಿಂದಲೂ ಮಹತ್ವವನ್ನು ಪಡೆದಿವೆ. ರಾಜನ ಕೀರ್ತಿಯನ್ನು ಮಂತ್ರಿ ಪ್ರಧಾನಿಗಳ, ಯುದ್ಧದಲ್ಲಿ ಪಾಲ್ಗೊಂಡು ಗೆದ್ದ ಸತ್ತ ವೀರರ ಮಹಿಮೆಗಳನ್ನು ಸಾಮೂಹಿಕ ಸಮಯಾಚಾರಗಳ ವಿವರಗಳನ್ನು ವರ್ಣನಾತ್ಮಕ ಛಂದಸ್ಸಿನ ರೂಪದಲ್ಲಿ ಬರೆದಿಟ್ಟಿರುತ್ತಾರೆ. ಸಾಹಿತ್ಯ ಮಹತ್ವಪೂರ್ಣವಾದ ಈ ಶಾಸನ ಪದ್ಯಗಳಲ್ಲಿ ಕಂಡುಬರುವ ಕೆಲವೊಂದು ಸಮಸ್ಯೆಗಳನ್ನು ಚರ್ಚಿಸುವುದು ಈ ಲೇಖನದ ಉದ್ದೇಶ.

ಪದ್ಯಗಳನ್ನು ಒಬ್ಬ ಕವಿ ಒಬ್ಬ ರಾಜನ ಬಗ್ಗೆ ಅಥವಾ ವ್ಯಕ್ತಿಯ ಬಗ್ಗೆ ಬರೆದರೆ ಅದೇ ಪದ್ಯವನ್ನು ಬೇರೆ ಒಬ್ಬರಿಗೆ ಹಾಡಲು ರೂಢಿ ಇರುವುದಿಲ್ಲ. ಶಾಸನ ಪ್ರಶಸ್ತಿಗಳಲ್ಲಿ ಮೊದಲನೆಯ ಸಾಲಿನಲ್ಲಿ ಬರುವ ಬಿರುದುಗಳನ್ನು ನೋಡಿ ಆ ಶಾಸನ ಯಾವ ರಾಜನಿಗೆ ಸಂಬಂಧಪಟ್ಟು ದೆಂಬುದನ್ನು ಸರಳವಾಗಿ ಹೇಳಬಹುದು. ಆದರೆ ಪ್ರಸ್ತುತ ಕನ್ನಡ ಶಾಸನ ಪದ್ಯಗಳಲ್ಲಿ ಈ ಪದ್ಧತಿ ಕಂಡುಬಂದಿಲ್ಲ.

೧೧೫೫ ವರ್ಷದ ಒಂದನೆಯ ನರಸಿಂಹನ ಹಾಸನ ಶಾಸನದಲ್ಲಿ ಸಾವಿ ಅಯ್ಯನ ಹೆಂಡತಿಯಾದ ಜಕ್ಕಳೆ ಎಂಬುವಳನ್ನು ಕುರಿತ ಪದ್ಯಗಳು ಕೆಲವು ಕಂಡು ಬರುತ್ತವೆ. ಅವುಗಳಲ್ಲಿ ಒಂದು ಕಂದ ಪದ್ಯ ಈ ಕೆಳಗಿನಂತೆ ಇರುತ್ತದೆ. ಈ ಜಕ್ಕಳೆ ಜೈನ ಬಸದಿ ಕಟ್ಟಿಸಿದ ವಿಷಯವನ್ನು ಇದರಲ್ಲಿ ಹೇಳಲ್ಪಟ್ಟಿದೆ. ಇದೇ ಪದ್ಯವನ್ನು ತ್ರಿಭುವನಮಲ್ಲದೇವ ಬಿಜ್ಜಳನ ಕಾಲದ ೧೧೬೨ನೇ ವರ್ಷದ ಹೂಲಿ ಶಾಸನದಲ್ಲಿಯೂ ಕಂಡು ಬರುತ್ತದೆ. ಇದರಲ್ಲಿ ಮೆಚ್ಚಲ್ಪಡುವ ವ್ಯಕ್ತಿ ರೇವಿಯಕ್ಕ ಎಂಬವಳು. ಮೇಲಿನದು ಜೈನ ಬಸದಿಯ ವಿಷಯವಾಗಿರುವಾಗ ಎರಡನೆಯ ಪದ್ಯವು ಅಗಸ್ತೀಶ್ವರ ದೇವರನ್ನು ಸಂಬಂಧಪಟ್ಟಿದೆ. ಈ ಶಾಸನದ ಕೊನೆಯ ಸಾಲಿನಲ್ಲಿ ಇವರ ಹೆಸರು ಮಾತ್ರ ಬದಲಾಯಿಸಿದ್ದಾರೆ. ಇದು ಹೀಗಿರುವಾಗ ಹೂಲಿಯ ಇನ್ನೊಂದು ಶಾಸನದಲ್ಲಿ ಬಿಜ್ಜಳನ ಕಾಲದ ದಾಸಿರಾಜನ ಹೆಂಡತಿ ಒಳಜಲೆಯ ಹೆಸರು ಸೇರಿದ ಕೊನೆಯ ಸಾಲು ಬದಲಾವಣೆ ಆಗಿದೆಯೇ ಹೊರತು ಪದ್ಯ ಮೇಲೆ ಕಾಣಿಸಿದಂತೆ ಇರುತ್ತದೆ. ಈ ಮೂರು ಶಾಸನಗಳನ್ನು ನೋಡೋಣ.

ಅ. ರತಿಯನ್ನಳ್ ರೂಪಿಂ ಭಾ।
ರತಿಯನ್ನಳ್ ವಾಗ್ವಿಳಾಸದಿಂ ಸೌಷ್ಠವದಿಂ
ಕ್ಷಿತಿಯನ್ನಳ್ ಪೆರ್ಮಗೆ ಅರುಂ
ಧೃತಿಯನ್ನಳ್ ರೇವಿಯಕ್ಕನೆನೆ ಮೆಚ್ಚದರಾರ್ ॥

ಆ. ರತಿಯನ್ನಳ್ ರೂಪಿಂ ಭಾ।
ರತಿಯನ್ನಳ್ ವಾಗ್ವಿಳಾಸದಿಂ ಸೌಷ್ಠವದಿಂ
ಕ್ಷಿತಿಯನ್ನಳ್ ದಾಸಿಯಕುಲ
ಸತಿಯೊಳಜಲೆ ನಾರಿಯಂತು ನೊಂದರುಂ ಒಳರೇ ॥

ಇ. ರತಿಯನ್ನಳ್ ರೂಪಿಂ ಭಾ॥
ರತಿಯನ್ನಳ್ ವಾಗ್ವಿಳಾಸದಿಂ ಸೌಷ್ಠವದಿಂ
ಕ್ಷಿತಿಯನ್ನಳ್ ಪೆರ್ಮಗೆ ಅರುಂ
ಧೃತಿಯನ್ನಳ್ ಜಕ್ಕಿಯವ್ವೆ ಕಾಂತಾರತ್ನಂ ॥

ಮೇಲೆ ಕಾಣಿಸಿದ ಮೂರು ಪದ್ಯಗಳು ಒಳಜವ್ವೆ, ರೇವಿಯಕ್ಕ ಮತ್ತು ಜಕ್ಕಳೆ ಈ ಮೂರು ಮಹಿಳೆಯರ ಬಗ್ಗೆ ಬರೆದವುಗಳಾಗಿವೆ. ಈ ಮೂರರಲ್ಲಿಯೂ ಇರುವ ಭಿನ್ನತೆ ಏನೆಂದರೆ ಹೆಸರು ಬದಲಾಯಿಸಿರುವುದೊಂದೆ ಹೊರತು ಮೂರು ಪದ್ಯಗಳು ವಿಭಿನ್ನವಾದವುಗಳಲ್ಲ.

ಈ ಮೂರು ಶಾಸನಗಳನ್ನು ಬರೆದ ಕವಿ ಒಬ್ಬ ವ್ಯಕ್ತಿಯೇ ಅಥವಾ ಒಬ್ಬ ಶಾಸನವನ್ನು ನೋಡಿ ಬೇರೆ ಬೇರೆ ಹೆಂಗಸರ ಹೆಸರುಗಳನ್ನು ಬದಲಾಯಿಸಿ ಒಂದೇ ಪದ್ಯವನ್ನು ಅದೇ ಛಂದಸ್ಸಿನಲ್ಲಿ ರಚಿಸಿರಬಹುದೇ ? ಎಂಬ ಸಮಸ್ಯೆ ಹುಟ್ಟುತ್ತದೆ.

ಇದೇ ರೀತಿಯಲ್ಲಿ ವಿಷ್ಣುವರ್ಧನನ ಕಾಲದ (1141) ಕಡೂರ ಶಾಸನದಲ್ಲಿ ಬರುವ ಎರಡು ಪದ್ಯಗಳೂ ಎರಡನೆಯ ಬಲ್ಲಾಳನ ಕಾಲದ (1233) ಅರಸಿಕೆರೆಯ ಶಾಸನ ಪದ್ಯಗಳಿಗೆ ಹೊಂದಾಣಿಕೆ ಆಗಿರುತ್ತವೆ. ಕಡೂರ ಶಾಸನದಲ್ಲಿ ವಿಷ್ಣುವರ್ಧನನ ಹೆಂಡತಿ ಪಮ್ಮಳದೇವಿ ಎಂದಿರುವಾಗ ಅರಿಸಿಕೆರೆಯ ಶಾಸನದಲ್ಲಿ ಎರಡನೆಯ ಬಲ್ಲಾಳನ ಮಹಿಷಿ ಪದ್ಮಳದೇವಿ ಎಂದಿರುತ್ತವೆ. ಎಂದರೆ ಪಮ್ಮಳ ದೇವಿಯೂ ಹಾಗೂ ಪದ್ಮಳದೇವಿಯೂ ಒಬ್ಬರೇ ? ಈ ಎರಡನೆಯ ಬಲ್ಲಾಳನು ಮೇಲೆ ಹೇಳಿದ ವಿಷ್ಣುವರ್ಧನನಿಗೂ ಒಂದನೆಯ ನರಸಿಂಹನಿಗೂ ಹಿಂದಿನಕಾಲಕ್ಕೆ ಸೇರಿದವನು. ಎಂದರೆ ಬಲ್ಲಾಳನು ವಿಷ್ಣುವರ್ಧನನಿಗೆ ಮೊಮ್ಮಗನಾಗುತ್ತಾನೆ. ವಿಷ್ಣುವರ್ಧನನ ಕಡೂರ ಶಾಸನದ ಮಂಚೇಶ್ವರ ದೇವರನ್ನು ಪ್ರತಿಷ್ಠೆ ಮಾಡಿದ ಸಂಭವಕ್ಕೂ ಬಲ್ಲಾಳನ ಅರಿಸಿಕೆರೆಯ ಶಾಸನ ವಿಷ್ಣುದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ಬಿಟ್ಟ ಸಂಭವಕ್ಕೂ ಸುಮಾರು ನೂರು ವರ್ಷಗಳ ಕಾಲಾವಧಿಗೆ ಒಳಪಟ್ಟಿರುವುದನ್ನು ಗಮನಿಸಬೇಕು. ಆ ಪದ್ಯಗಳನ್ನು ನೋಡೋಣ.

ಅ. ಆ ವಿಭುವಿನ ಪಟ್ಟ ಮಹಾ
ದೇವಿ ಮದ ದ್ವಿರದ ಗಮನೆ ಬಿಂಬಾಧರೆ ಲ
ಜ್ಜಾವತಿ ಬಮ್ಮಲ ದೇವಿ ಕ
ಲಾವತಿ ಲಾವಣ್ಯ ಪುಣ್ಯವತಿ ಸೊಗಯಿಸಿದಳ್ ॥

ಆ. ರತಿಗಂ ಅರುಂಧತಿಗಂ ಸರ
ಸತಿಗಂ ರೇವತಿಗಂ ಎಸೆವ ಪಾರ್ವತಿಗಂ ಶ್ರೀ
ಸತಿಗಂ ಸಮನೆನಿಸಿ ಮಹಾ
ಸತಿ ಬಮ್ಮಲದೇವಿ ತೊಳಗಿ ಬೆಳಗಿದಳ್ ಎಳೆಯಂ ||

ಇವುಗಳಂತೆ ಇರುವ ಇನ್ನೊಂದು ಪದ್ಯವನ್ನು ನೋಡುವಾ. ಒಂದನೆಯ ನರಸಿಂಹನ ಹಾಸನ ಶಾಸನದಲ್ಲಿ ಒಂದು ಪದ್ಯ ಬರುತ್ತದೆ. ಈ ಶಾಸನದ ವಿಷಯ ಒಂದನೆಯ ನರಸಿಂಹನ ಮಹಾಪ್ರಾಧಾನವಾದ ಪಡವಳ್ಳ ಸಾಮನನು ಹೆಂಡತಿ ಹೆಸರಿನಲ್ಲಿ ಬಸ್ತಿಯನ್ನು ಕಟ್ಟಿಸಿ ಭೂಮಿಯನ್ನು ಬಿಟ್ಟಂತೆ ಹೇಳಲಾಗಿದೆ. ಇದರ ಕಾಲ ಕ್ರಿ. ಶ. ೧೧೫೫ ಇದೆ. ಪದ್ಯವನ್ನು ತ್ರಿಭುವನಮಲ್ಲ ಬಿಜ್ಜಳನ ಕಾಲದ ಹೂಲಿಯ ಶಾಸನದಲ್ಲಿ ಮಾಳಪಯ್ಯನ ಕುರಿತ ವಿಷಯವಾಗಿ ಬರುತ್ತದೆ. ಹಾಸನ ಶಾಸನದಲ್ಲಿ ಕೊನೆಯ ಮಾತು ಪಡೆವಳ್ಳ ಸಾಮಣ್ಣ ಎಂದಿರುತ್ತದೆ. ಹೂಲಿಯ ಶಾಸನದಲ್ಲಿ ಪ್ರಭುಮಾಳಪಯ್ಯನಾ ಎಂದು ಹೆಸರು ಒಂದೇ ಬದಲಾಯಿಸಿ ಬರೆಯಲ್ಪಟ್ಟಿದೆ. ಇದರ ಕಾಲ ಕ್ರಿ. ಶ. ೧೧೬೨. ಅವುಗಳು ಈ ಕೆಳಗಿನಂತಿವೆ:

ಅ. ವರವನಿತಾ ಜನಂಗಳ ಮನಂ ಕುಸುಮಾಸ್ತ್ರ ಶರಕ್ಕೆ ಸದ್ಬುದೋ |
ತ್ಕರಕರ ಪಂಕಜಂ ಬಹುಸುವರ್ಣ ಚಯಕ್ಕಧಿನಾಥ ಮಂದಿರಂ ||
ಸ್ಥಿರತರ ರಾಜ್ಯಲಕ್ಷ್ಮಿಗೆಡೆಯಾದವು ರೂಪ ವಿಳಾಸದೇಳ್ಗೆಯಿಂ |
ನಿರುಪಮ ದಾನದಿಂ ಪತಿಹಿತೋನ್ನತಿಯಿಂ ಪಡೆವಳ್ಳ ಚಾಮನಾ ||

ಆ. ವರವನಿತಾ ಜನಂಗಳ ಮನಂ ಕುಸುಮಾಸ್ತ್ರ ಶರಕ್ಕೆ ಸದ್ಬುದೋ |
ತ್ಕರಕರ ಪಂಕಜಂ ಬಹುಸುವರ್ಣ ಚಯಕ್ಕದಿನಾಥ ಮಂದಿರಂ ||
ಸ್ಥಿರತರ ರಾಜ್ಯ ಲಕ್ಷ್ಮಿಗೆಡೆಯಾದುವು ರೂಪವಿಲಾಸದೇಳ್ಗೆಯಿಂ |
ನಿರುಪಮ ದಾನದಿಂ ಪತಿ ಹಿತೋನ್ನತಿಯಿಂ ಪ್ರಭು ಮಾಳತಯ್ಯನಾ ||

ಈ ಎರಡು ಪದ್ಯಗಳಲ್ಲಿ ಕಾಣಲ್ಪಡುವ ವ್ಯತ್ಯಾಸಗಳು ಎರಡು. ಒಂದು ಹೆಸರು, ಮತ್ತೊಂದು ಮೇಲಿನ ಪದ್ಯದಲ್ಲಿ ಬರುವ ವಿಳಾಸ ಎಂಬುದು ಎರಡನೆಯ ಪದ್ಯದಲ್ಲಿ ವಿಲಾಸ ಎಂದಿರುವುದು. ಇವುಗಳನ್ನು ಬಿಟ್ಟರೆ ಎರಡು ಪದ್ಯಗಳು ಒಂದೇ ತರಹ ಇರುವುದನ್ನು ಕಾಪಿಯಾಗಿರುವುದನ್ನು ಕಾಣಬಹುದು.

ಇವುಗಳನ್ನು ನೋಡುವಾಗ ಶಾಸನ ಪದ್ಯಗಳನ್ನು ರಚಿಸಿರುವವರು ಹೀಗೆ ಮಾಡಿದರೋ ಅಥವಾ ಅದನ್ನು ಕಲ್ಲಿನಲ್ಲಿ ಬರೆಯುವವರೇ ತಾವೇ ಸಾಹಿತ್ಯ ಜ್ಞಾನದಿಂದ ಅವರೇ ಅಲ್ಲಲ್ಲಿ ಹೆಸರುಗಳನ್ನು ಬದಲಾಯಿಸಿ ಬರೆದಿರುವರೋ ಎಂಬ ಸಂದೇಹವನ್ನು ಹುಟ್ಟಿಸುತ್ತದೆ. ಈ ಸಮಸ್ಯೆಗಳಿಗೆ ಉತ್ತರವನ್ನು ಕೊಡುವುದು ಅಷ್ಟು ಸುಲಭವಲ್ಲ ಎಂಬುದನ್ನು ತಿಳಿಯಬೇಕು.

ಸಂಕೀರ್ಣ ಕವಿ ಜಿ. ಎಸ್. ಶಿವರುದ್ರಪ್ಪ ಮತ್ತು ಅವರ ಸಾಂದರ್ಭಿಕ ಸಂವೇದನೆ *

ಶ್ರೀ ರಾಮರಡ್ಡಿ ಎಸ್. ರಡ್ಡಿ

ಆಧುನಿಕ ಕನ್ನಡ ಸಾಹಿತ್ಯವು ಪಾಶ್ಚಾತ್ಯ ಪ್ರೇರಣೆಯಿಂದ ಹುಟ್ಟಿ, ಮಣ್ಣಿನ ಸತ್ವದೊಂದಿಗೆ ಬೆಳೆದು ಬರುತ್ತಿರುವ ಅಮೂಲ್ಯ ಸಂಪತ್ತು. ಈ ಶತಮಾನದ ದ್ವಿತೀಯ ದಶಕದ ಆರಂಭದಿಂದ ಇಲ್ಲಿಯವರೆಗೆ ಬೆಳೆದು ಬಂದ ಕನ್ನಡ ಸಾಹಿತ್ಯವು ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಘಟ್ಟಗಳನ್ನು ಗಟ್ಟಿಯಾಗಿ ನಿರ್ಮಿಸಿಕೊಂಡು ಮುಂದುವರಿದಿದೆ. ಮುಂದೆ ಯಾವ ಘಟ್ಟ-ಘಟ್ಟಗಳನ್ನು ಅದು ಗಿಟ್ಟಿಸಿಕೊಳ್ಳುತ್ತದೆ ಎಂಬುದು ಅದರ ಗುಪ್ತವಾದ ಇತಿಹಾಸ ಗರ್ಭವನ್ನು ವೀಕ್ಷಿಸುವವರ ಕೌತುಕದ ವಿಚಾರವಾಗಿದೆ. ಅದಿರಲಿ, ಸದ್ಯದವರೆಗೆ ಬೆಳೆದು ಬಂದಿರುವ ಆಧುನಿಕ ಕನ್ನಡ ಸಾಹಿತ್ಯವು ಮಾತ್ರ ತುಂಬಾ ವೈವಿಧ್ಯಮಯವಾಗಿದೆ. ಇಲ್ಲಿ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ-ಬಂಡಾಯಗಳೆಂಬ ಘಟ್ಟಗಳ ವೈವಿಧ್ಯವಿದ್ದರೆ, ಆಯಾ ಘಟ್ಟಗಳಲ್ಲಿ ಸೃಷ್ಟಿಯಾದ ಸಾಹಿತ್ಯ ರೂಪಗಳದ್ದು ಮತ್ತೊಂದು ವೈವಿಧ್ಯ. ಈ ಪ್ರತಿಯೊಂದು ರೂಪಗಳಲ್ಲಿ ಎದ್ದು ಕಾಣುವ ವಸ್ತುವೈವಿಧ್ಯವಲ್ಲದೆ, ವ್ಯಕ್ತಿ -ಸಮಾಜ ಇತ್ಯಾದಿಗಳನ್ನು ಕುರಿತ ವಿವಿಧ ಸ್ತರದ ಧ್ವನಿ ವೈವಿಧ್ಯ ಬೇರೆ. ಈ ಎಲ್ಲ ವೈವಿಧ್ಯತೆಗಳನ್ನು ಸೂಕ್ಷ್ಮಾತಿ ಸೂಕ್ಷ್ಮವಾಗಿ ವಿವೇಚಿಸುವುದು ಸಾಹಿತ್ಯವನ್ನು ವೈಜ್ಞಾನಿಕ ತಂತ್ರದಿಂದ ಸಮರ್ಪಕವಾಗಿ ನೋಡುವ ದೃಷ್ಟಿಕೋನ ಬೆಳೆದಾಗ ಮಾತ್ರ ಸಾಧ್ಯ.

ಪ್ರಸಕ್ತದವರೆಗೆ ಸಾಹಿತ್ಯವನ್ನು ರೂಪವನ್ನಾಧರಿಸಿ ವಿಭಜಿಸಿ ರಚನೆಯನ್ನಾಧರಿಸಿ ವಿವರಿಸುವ, ಅಭ್ಯಸಿಸುವ ಪ್ರವೃತ್ತಿ ಹೆಚ್ಚಾಗಿದೆ. ಮತ್ತು ಅದು ಒಗ್ಗಿದೆ. ಹಾಗೆಯೇ ಆಧುನಿಕ ಕನ್ನಡ ಸಾಹಿತ್ಯವನ್ನು ಕೂಡ ಅದರ ವೈವಿಧ್ಯಮಯವಾದ ರೂಪಗಳನ್ನನುಸರಿಸಿ ಕಾವ್ಯ,() ನಾಟಕ, ಪ್ರಬಂಧ, ಕಥೆ, ಕಾದಂಬರಿ, ಹರಟೆ, ಪ್ರವಾಸಕಥನ, ಆತ್ಮಕಥನ ಇತ್ಯಾದಿಯಾಗಿ ವಿಭಜಿಸಿ ವಿವೇಚಿಸಲಾಗಿದೆ. ಈ ಒಂದೊಂದು ಪ್ರಕಾರಕ್ಕೂ ತನ್ನದೇ ಆದ ಇತಿಹಾಸವಿರುವಂತೆ ಆಧುನಿಕ

---

* ಡಾ. ಜಿ.ಎಸ್. ಶಿವರುದ್ರಪ್ಪನವರ ``ಪ್ರೀತಿ ಇಲ್ಲದ ಮೇಲೆ'' ಕವನ ಸಂಕಲನವ ಕುರಿತು ಒಂದು ವಿಮರ್ಶಾತ್ಮಕ ಮತ್ತು ಸಂಶೋಧನಾತ್ಮಕ ಚಿಂತನೆ.

() `ಆಧುನಿಕ ಕನ್ನಡ ಕಾವ್ಯ' ವೆಂದು ಕರೆದು ಗುರುತಿಸುವ ಅನೇಕ ವಿದ್ವಾಂಸರ ಭಾವನೆಯಂತೆ ಕವನ ಮತ್ತು ಕಾವ್ಯ ಇವೆರಡರಲ್ಲಿ ಏನೂ ವ್ಯತ್ಯಾಸವೇ ಇಲ್ಲವೆಂಬಂತಿದೆ. ಅವೆರಡರಲ್ಲಿ ಸ್ಪಷ್ಟವಾದ ವ್ಯತ್ಯಾಸವಿದೆ. ಅದನ್ನು ಗುರುತಿಸುವ ಕ್ರಿಯೆ ನಡೆಯಬೇಕಾಗಿದೆ ಎಂಬುದು ನನ್ನ ಅಭಿಪ್ರಾಯ.

ಕನ್ನಡ ಸಾಹಿತ್ಯೇತಿಹಾಸದ ಘಟ್ಟಗಳನ್ನು ಆಧರಿಸಿದ ವಿಭಜನೆಯೂ ಇದೆ. ಅದಕ್ಕಾಗಿಯೇ ಸಾಹಿತ್ಯದ ಆಯಾ ರೂಪಗಳನ್ನು ಆಯಾ ಘಟ್ಟಗಳಿಗನುಸರಿಸಿ ಒಡೆದು ವರ್ಣಿಸುವ ಪ್ರಕ್ರಿಯೆ ರೂಢಿಯಲ್ಲಿದೆ. ಅದು ಸಹಜವೂ ಹೌದು. ಉದಾಹರಣೆಗೆ ಆಧುನಿಕ ಕನ್ನಡ ಕಾವ್ಯವನ್ನು ತೆಗೆದುಕೊಂಡರೆ ನವೋದಯಕಾಲದ ಕಾವ್ಯ, ನವ್ಯಕಾವ್ಯ, ದಲಿತ-ಬಂಡಾಯ ಕಾವ್ಯಗಳೆಂದು ಇತ್ಯಾದಿಯಾಗಿ ವಿಂಗಡಿಸಿ ನೋಡಲಾಗುತ್ತದೆ. ತಮತಮಗೆ ವೈವಿಧ್ಯಮಯವಾದ ಸಂವೇದನೆಗಳು ಆಯಾ ಕಾಲಘಟ್ಟಗಳ ಸಾಹಿತ್ಯದಲ್ಲಿ ಸಮಾಗಮವಾಗಿರುವುದರಿಂದ ಈ ತೆರನಾದ ವಿಂಗಡಣೆ ಮತ್ತು ವಿಭಜನೆ ನ್ಯಾಯಸಮ್ಮತವೂ ಹೌದು. ಈ ಹಿನ್ನೆಲೆಯಲ್ಲಿ ನೋಡಿದಾಗ ಕವಿ ಜಿ. ಎಸ್. ಶಿವರುದ್ರಪ್ಪನವರ "ಪ್ರೀತಿ ಇಲ್ಲದ ಮೇಲೆ" ಕವನ ಸಂಕಲನವು ಮಹತ್ವದ ಸಮಸ್ಯಾತ್ಮಕ ಸಂಕಲನ ವಾಗಿ ಕಂಡುಬರುತ್ತದೆ. ಅದು ಹೇಗೆ ? ಎಂಬ ಪ್ರಶ್ನೆಯು ಸಮಗ್ರ ಆಧುನಿಕ ಕನ್ನಡ ಕಾವ್ಯಕ್ಕೆ ಅನ್ವಯಿಸಿ ಈ ಕವಿಯ ಸಾಹಿತ್ಯೇತಿಹಾಸದ ಅಧ್ಯಯನಕ್ಕೆ ಪ್ರಚೋದನೆ ನೀಡುತ್ತದೆ. ಅದೆಲ್ಲವನ್ನು ಕೂಲಂಕಷವಾಗಿ ಅಭ್ಯಾಸಪೂರ್ಣವಾದ ಚಿಂತನೆಗೆ ಒಳಪಡಿಸಿದಾಗ ಕವಿಯ ಸಂಕೀರ್ಣತೆ ಮತ್ತು ಸಂವೇದನೆಯ ಸಾಂದರ್ಭಿಕತೆ ಇವು ಅಂತಿಮ ನಿಲುವುಗಳಾಗಿ ನಿಲ್ಲುತ್ತವೆ. ಆದರೆ "ಪ್ರೀತಿ ಇಲ್ಲದ ಮೇಲೆ " ಕವನ ಸಂಕಲನ ಮಾತ್ರ ಆಧುನಿಕ ಕನ್ನಡ ಕಾವ್ಯದ ಎಲ್ಲ ಘಟ್ಟಗಳಿಗೆ ಸ್ಪಂದಿಸುವ 'ಕೂಡಲ ಸಂಗಮ'ವಾಗಿ ನಿಲ್ಲುತ್ತದೆ ಅದು ಹೇಗೆ ? ಹಾಗೆ ಆಗಲು ಕಾರಣವೇನು ? ಎಂಬುದನ್ನು ಈ ಕೆಳಗಿನಂತೆ ಚರ್ಚಿಸಬಹುದಾಗಿದೆ.

ಕ್ರಿ. ಶ. ೧೯೮೭ರಲ್ಲಿ ಪ್ರಕಟವಾದ ಕವಿ ಜಿ. ಎಸ್. ಶಿವರುದ್ರಪ್ಪನವರ "ಪ್ರೀತಿ ಇಲ್ಲದ ಮೇಲೆ" ಕವನ ಸಂಕಲನವು `ನಾನು ಬರೆಯುತ್ತೇನೆ' ಎಂಬುದರಿಂದ ಆರಂಭವಾಗಿ "ನೀವೆಲ್ಲಾದರೂ ನನ್ನ ತಾಯನ್ನು ಕಂಡರೆ" ಎನ್ನುವ ಕೊನೆಯ ಕವನದವರೆಗೆ ಒಟ್ಟು ೩೩ ಕವನಗಳನ್ನು ಒಳಗೊಂಡಿದೆ. ಇವು ಗಾತ್ರದಲ್ಲಿ ಚಿಕ್ಕ ಚಿಕ್ಕ ಕವನಗಳಾದರೂ ಪಾತ್ರದಲ್ಲಿ ಹಿರಿದಾದ ಮಹತ್ವವನ್ನು ಹೊಂದಿವೆ. ಇಲ್ಲಿಯ ಕವನಗಳು ವಿಷಯವಸ್ತುವಿನ ದೃಷ್ಟಿಯಿಂದ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ -ಬಂಡಾಯಗಳಲ್ಲಿನ ಯಾವೊಂದು ಘಟ್ಟಕ್ಕೂ ಸೀಮಿತವಾಗಿ ನಿಲ್ಲದೇ ಎಲ್ಲ ಘಟ್ಟಗಳನ್ನು ಪ್ರತಿನಿಧಿಸುತ್ತವೆ. ಕವಿಯು ಹಾಗೆಂದು ಹೇಳದಿದ್ದರೂ, ಒಂದೊಂದು ಗುಂಪು, ಗುಂಪಾಗಿ ಕ್ರಮಬದ್ಧವಾಗಿ ಜೋಡಿಸದಿದ್ದರೂ ಚಿಕಿತ್ಸಕ ಬುದ್ಧಿಯ ಸಹೃದಯ ವಿಮರ್ಶಕರು ಇದನ್ನು ಸಹಜವಾಗಿ ಗುರುತಿಸಬಹುದಾಗಿದೆ.

ಸೃಷ್ಟಿಸೌಂದರ್ಯ ಮತ್ತು ಸ್ತ್ರೀ ಸೌಂದರ್ಯಗಳ ವಿವಿಧ ಮುಖಗಳ ಅದ್ಭುತವಾದ ಅಪೂರ್ವ ವರ್ಣನೆ ದಾರ್ಶನಿಕ ಮನೋಭಾವ ಸಂಗೀತದೊಂದಿಗೆ ಇಂಪಾಗಿ ಹಾಡಲು ಬರುವಂಥ ಛಂದೋ ಲಕ್ಷಣ ಇತ್ಯಾದಿಗಳು ನವೋದಯ ಕಾವ್ಯದ ಕೆಲವು ಪ್ರಮುಖ ಲಕ್ಷಣಗಳು. ಕವಿ ಶಿವರುದ್ರಪ್ಪನವರು ನವೋದಯ ಸಾಹಿತ್ಯದ ಗಾಢ ಪ್ರಭಾವ ಮತ್ತು ಅನುಭವವನ್ನು ಹೊಂದಿರುವ ಕಾರಣಕ್ಕಾಗಿಯೋ ಏನೋ ಅವರ ಈ ಸಂಕಲದಲ್ಲಿ ನವೋದಯ ಕಾವ್ಯದ ಲಕ್ಷಣಗಳುಳ್ಳ ಕವನಗಳು ಕಂಡುಬರುತ್ತವೆ. 'ನೋಡಮ್ಮ ಮುಗಿಲ ತುಂಬ...' ಎಂಬ ಕವನದ ಕೆಲವು ಸಾಲುಗಳನ್ನು ಗಮನಿಸಿ

'ನೋಡಮ್ಮಾ ಮುಗಿಲ ತುಂಬ
ಬೆಳ್ ಬೆಳಗಿನ ಮಲ್ಲಿಗೆ,

ಹಾರಿ ಹೋಗಿ ಕಿತ್ತು ತಂದು
ಮುಡಿಸಲೇನು ತುರುಬಿಗೆ"[೧]

ಇಲ್ಲಿ ಕವಿಗಳು ನಕ್ಷತ್ರಗಳನ್ನು 'ಬೆಳ್ ಬೆಳಕಿನ ಮಲ್ಲಿಗೆ' ಎಂದಿರುವುದು ಸ್ವಾರಸ್ಯಕರ. ಅವುಗಳನ್ನು ಭೂತಾಯಿಯ ತುರುಬಿಗೆ ಮುಡಿಸಲು ಬಯಸಿದ ಕವಿಯ ಮನೋಭಾವ 'ಹಾರಿ ಹೋಗಿ ಕಿತ್ತು ತರುವೆ' ಎಂಬ ಸಾಹಸಿ ಕಲ್ಪನೆ ನಿಜಕ್ಕೂ ಆಹ್ಲಾದಕರ. ಸೃಷ್ಟಿಯನ್ನು ಕುರಿತ ಈ ರೀತಿಯ ಆಶ್ಚರ್ಯಾದ್ಭುತ ಪ್ರೇಮಾಭಿವ್ಯಕ್ತಿಯು ನವೋದಯದ ಲಕ್ಷಣವಲ್ಲದೆ ಬೇರೆಯಲ್ಲ. ಇಲ್ಲಿ ಎರಡು ಪಾದಗಳ ಕೊನೆಗೊಮ್ಮೆ ಬರುವ ಯತಿ, ಎರಡು ಪಾದಗಳನ್ನು ಎಡೆಬಿಡದೆ ಓಡಿಸಿಕೊಂಡು ಹೋಗುವ ರೀತಿ ಮತ್ತು ಕೊನೆಗೊಮ್ಮೆ ಬರುವ ಅಂತ್ಯಪ್ರಾಸ ಇವು ಕವನದ ಕಂಪು ಮಾಧುರ್ಯಗಳನ್ನು ಹೆಚ್ಚಿಸಿ ಹಾಡುಗಬ್ಬವನ್ನಾಗಿಸಿವೆ. ಇದರಂತೆಯೆ 'ಹೊಸಮನೆಯಲ್ಲಿ', ಹೀಗೊಂದು 'ಪ್ರೇಮಗೀತೆ', 'ಒಂದಿರುಳು' 'ಹೊಸಹುಟ್ಟು,' 'ಹಿಮಾಲಯದ ಸ್ಮೃತಿಸಂಪುಟ','ಲಿಖಿತ' 'ನಿದರ್ಶನಕ್ಕೆ' ಮುಂತಾದ ಕವನಗಳಲ್ಲಿ ನವೋದಯ ಕಾವ್ಯದ ಲಕ್ಷಣಗಳಿವೆ.

ವರ್ಗ ವ್ಯವಸ್ಥೆಯನ್ನು ಕಿತ್ತೆಸೆಯುವ, ವರ್ಗ ಹೋರಾಟವನ್ನು ಪ್ರಚೋದಿಸುವ ಮಾರ್ಕ್ಸ್‌ವಾದವನ್ನು ಸಾಹಿತ್ಯದಲ್ಲಿ ಮೂಡಿಸುವ ಪ್ರಯತ್ನಗಳು ನಡೆದವು. ಕ್ರಿ. ಶ. ೧೯೪೫-೫೫ ರ ವರೆಗಿನ ಈ ಘಟ್ಟವು ಕನ್ನಡದಲ್ಲಿ 'ಪ್ರಗತಿಶೀಲ ಸಾಹಿತ್ಯವೆಂದು ಪ್ರಸಿದ್ಧಿಯನ್ನು ಪಡೆದಿದೆ. ಉಳ್ಳವರು ಇಲ್ಲದವರ ನಡುವೆ ಇರುವ ಕಂದಕವನ್ನು ತುಂಬಿ ಸಮಗೊಳಿಸಬೇಕೆಂಬ ಮಾರ್ಕ್ಸ್‌ವಾದದ ಪ್ರೇರಣೆಯಿಂದ ನಮ್ಮಲ್ಲಿ ಪ್ರಗತಿಶೀಲ ಸಾಹಿತ್ಯದ ಉಗಮವಾಯಿತು. ಇದರಿಂದ ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾದ ವಿಷಯ ವಸ್ತುವಿನ ಕಥೆ ಕಾದಂಬರಿಗಳು ಯಥೇಚ್ಛವಾಗಿ ರಚನೆಯಾದವು. ಆದರೆ ಕಾವ್ಯಕ್ಕೆ ಸಂಬಂಧಿಸಿದಂತೆ ಈ ಘಟ್ಟದ ಸಾಧನೆ ಸೊನ್ನೆಯೆಂದೇ ಹೇಳಬೇಕಾದಷ್ಟು ಕ್ವಚಿತ್ತಾಗಿದೆ. ಕವಿ ಶಿವರುದ್ರಪ್ಪನವರ` ಪ್ರೀತಿ ಇಲ್ಲದ ಮೇಲೆ' ಕೃತಿಯ` ಸ್ವರ್ಗಕ್ಕೆ' ಎಂಬ ಕವನದಲ್ಲಿ ಈ ರೀತಿಯ ವಸ್ತುವಿನ ವಿವೇಚನೆಯಿದೆ.

" ಹೊಟ್ಟೆ ತುಂಬಿದವರ ಆ ಸ್ವರ್ಗದಲ್ಲಿ
ಹೊಟ್ಟೆಕಿಚ್ಚಿಗೂ ಕೂಡಾ ಬರಗಾಲವಿಲ್ಲ"[೨]

ಮೇಲಿನ ಸಾಲುಗಳಲ್ಲಿ ಉಳ್ಳವರಲ್ಲಿಯ ಮಾನಸಿಕ ಸಂಕುಚಿತತೆ ವ್ಯಕ್ತವಾಗಿದೆ. ಅಂತೆಯೇ 'ಯಾವ ಹಾಡ ಹಾಡಲಿ'? ಕವನದಲ್ಲಿಯೂ ವರ್ಗವ್ಯವಸ್ಥೆಯನ್ನು ವಿರೋಧಿಸುವ ಸೂಕ್ಷ್ಮ ಸಂವೇದನೆಯಿದೆ.

"ಯಾವ ಹಾಡ ಹಾಡಲಿ
....
....
ಬರಿ ಮಾತಿನ ಜಾಲದಲ್ಲಿ

---

೧. ಜಿ. ಎಸ್. ಶಿವರುದ್ರಪ್ಪ 'ನೋಡಮ್ಮಾ ಮುಗಿಲ ತುಂಬ', ' ಪ್ರೀತಿ ಇಲ್ಲದ ಮೇಲೆ' (ಕವನ ಸಂಕಲನ), ೧೯೮೭
೨. ಜಿ. ಎಸ್. ಶಿವರುದ್ರಪ್ಪ 'ಸ್ವರ್ಗಕ್ಕೆ', 'ಪ್ರೀತಿ ಇಲ್ಲದ ಮೇಲೆ' (ಕವನ ಸಂಕಲನ) ೧೯೮೭

ಶೋಷಣೆಗಳ ಶೂಲದಲ್ಲಿ
ವಂಚನೆಗಳ ಸಂಚಿನಲ್ಲಿ
ಹಸಿದ ಹೊಟ್ಟೆ ನರಳುವಲ್ಲಿ
ಯಾವ ಹಾಡು ಹಾಡಲಿ?"[೩]

ಮೇಲಿನ ಪಾದಗಳಲ್ಲಿ ಮೇಲ್ವರ್ಗದವರ ಶೋಷಣೆಗೆ ತುತ್ತಾದ ಕೆಳವರ್ಗದವರ ಶೋಚನೀಯವಾದ ಸ್ಥಿತಿ ಹಾಗೂ ಆ ನೋವಿನ ಸೂಕ್ಷ್ಮ ಅಭಿವ್ಯಕ್ತಿ ಇದೆ. ಅಂತೆಯೇ `ಅವಸ್ಥೆ' ಕವನದ

"ಚಳಿಗೆ ಗಡಗಡ ನಡುಗಿ
ಮುದುರಿ ಮೂಲೆಗೆ ಕೂತ
ಹರಕು ಚಿಂದಿಯ ಪುಟ್ಟ ಹುಡುಗನ್ನ ಕಂಡು
ಬೆಚ್ಚನೆಯ ಬಟ್ಟೆ ತೊಟ್ಟ ನನ್ನೊಳಗೂ
ನಡುಕ ಶುರುವಾಗುತ್ತದೆ"[೪]

ಎಂಬ ಸಾಲುಗಳಲ್ಲಿ ವ್ಯಕ್ತವಾಗಿರುವ ವರ್ಗ ಹೋರಾಟವನ್ನು ಪ್ರಚೋದಿಸುವ ವಸ್ತು ಗಮನಾರ್ಹವಾಗಿದೆ. ಇಲ್ಲಿ ಬಡವರ ಶೋಷಣೆಗೆ ಕಾರಣರಾದವರು (ಮೇಲ್ವರ್ಗದವರು) ಅವರ ಒಡಲಿನ ಉರಿಯ ಉಷ್ಣಕ್ಕೆ ಹೆದರುವ ಚಿತ್ರಣವನ್ನು ಕವಿ ವಿಶಿಷ್ಟವಾಗಿ ಒಡಮೂಡಿಸಿದ್ದು ಕಂಡುಬರುತ್ತದೆ. ಹೀಗೆ ಈ ಸಂಕಲನದ ಇನ್ನೂ ಅನೇಕ ಕಡೆ ಪ್ರಗತಿಶೀಲತೆ ವ್ಯಕ್ತವಾಗಿದೆ.

ನವ್ಯಕಾವ್ಯಕ್ಕೆ ಹೊಂದುವ ಕವನಗಳೂ ಈ ಸಂಕಲನದಲ್ಲಿವೆ. ಸಮಕಾಲೀನಪ್ರಜ್ಞೆಯನ್ನು ಹೊಸಭಾಷೆ- ಹೊಸ ಶೈಲಿಗಳಲ್ಲಿ ಅಭಿವ್ಯಕ್ತಪಡಿಸಿದ್ದು ನವ್ಯ ಸಾಹಿತ್ಯದ ಸ್ಥೂಲ ಸ್ವರೂಪವಾದರೂ ವ್ಯಕ್ತಿನಿಷ್ಠ ವಿಷಯವಸ್ತು, ಮುಕ್ತ- ಛಂದಸ್ಸು, ಪ್ರತಿಮೆಗಳ ಯಥೇಚ್ಛವಾದ ಬಳಕೆ ಇತ್ಯಾದಿಗಳು ನವ್ಯಕಾವ್ಯದ ಲಕ್ಷಣಗಳಾಗಿ ಗೋಚರಿಸುತ್ತವೆ. ಇಲ್ಲಿ ವಾಸ್ತವಿಕತೆಯ ಚಿತ್ರಣವೂ ಇರುತ್ತದೆ.

ದಿನಾ ಬೆಳಿಗ್ಗೆ
ರಪ್ಪನೆ ಬಂದು ಬೀಳುತ್ತದೆ
ಪತ್ರಿಕೆ ಒಳಗೆ,
ಬಿಡಿಸಿ ಓದೋಣವೆ ಭಯ ನಮಗೆ
....
ಯಾಕಿಷ್ಟು ವಿಕೃತನಾಗಿದ್ದಾನೆ ಮನುಷ್ಯ
ಇಂಥ ಚಲುವಿನ ನಡುವೆ?"[೫]

---

೩. ಅದೇ ಸಂಕಲನದ 'ಯಾವ ಹಾಡ ಹಾಡಲಿ?' ಕವನ
೪. ಅದೇ 'ಅವಸ್ಥೆ' ಕವನ
೫. ಅದೇ- 'ಯುಗಾದಿಯ ಚಿಂತನ -೧೯೮೬' ಕವನ

'ಯುಗಾದಿ ಚಿಂತನ ೧೯೮೬' ಕವನದ ಮೇಲಿನ ಸಾಲುಗಳನ್ನು ಗಮನಿಸಿದಾಗ ವಾಸ್ತವಿಕತೆಯ ಪ್ರಜ್ಞೆ, ಮುಕ್ತಛಂದದ ಬಳಕೆ, ವ್ಯಕ್ತಿನಿಷ್ಠ ಶೈಲಿ ಇವೆಲ್ಲವುಗಳು ಒಟ್ಟಾಗಿ ಅಭಿವ್ಯಕ್ತವಾಗಿರುವುದು ಕಂಡು ಬರುತ್ತದೆ. 'ನಾನು ಬರೆಯುತ್ತೇನೆ' ಕವನದ ಕೆಲವು ಸಾಲುಗಳನ್ನು ನೋಡಿ :

'ನಾನು ಬರೆಯುತ್ತೇನೆ
ಕಾಳ ರಾತ್ರಿಗಳಲ್ಲಿ ಕದ ತಟ್ಟುವ
ಧ್ವನಿಗಳನ್ನು ಕುರಿತು
....
ನೆಲದಾಳಗಳಲ್ಲಿ ಮಲಗಿರುವ ಮೂಳೆಗಳ
ನಿಟ್ಟುಸಿರನ್ನು ಕುರಿತು"[೬]

ಇಲ್ಲಿಯ ವ್ಯಕ್ತಿನಿಷ್ಠ ವಿಶ್ಲೇಷಣೆ ಗುಪ್ತವಾಗಿದೆಯಾದರೂ ಸಹೃದಯರು ಭಾವವನ್ನು ಸುಲಭವಾಗಿ ಗುರುತಿಸಬಹುದಾಗಿದೆ.

ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಂಡು ಬರುವ ಆಷಾಢಭೂತಿ ತನವನ್ನು ವಿರೋಧಿಸಿ ಅದರ ನಗ್ನ ಚಿತ್ರಣವನ್ನು ಸಾಹಿತ್ಯದ ಮೂಲಕ ವ್ಯಕ್ತ ಮಾಡುವುದರೊಂದಿಗೆ ಕ್ರಿಯಾತ್ಮಕ ಕ್ರಾಂತಿಯನ್ನು ಹುರಿದುಂಬಿಸಲು ಕನ್ನಡದಲ್ಲಿ ಬಂಡಾಯ ಸಾಹಿತ್ಯದ ಉಗಮವಾಯಿತು. ಸಾಹಿತ್ಯದಲ್ಲಿ ಬಂಡಾಯದ ಅಂಶಗಳು ಬಹು ಹಿಂದಿನಿಂದಲೂ ಕಾಣಿಸಿಕೊಂಡಿವೆಯಾದರೂ, ಬಂಡಾಯ ಸಾಹಿತ್ಯ ತನ್ನ ಸ್ಪಷ್ಟವಾದ ನೆಲೆಯನ್ನು ಗುರುತಿಸಿಕೊಂಡುದು ಈ ಶತಮಾನದ ಎಪ್ಪತ್ತರ ದಶಕದಿಂದೀಚೆಗೆ ಮಾತ್ರ. ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಂಡು ಬರುವ ಶೋಷಣೆಯ ಹಲವಾರು ಸೂಕ್ಷ್ಮ ಮುಖಗಳನ್ನು ಅನುಭವಗಳ ಸಾಕ್ಷಾಧಾರಗಳೊಂದಿಗೆ ಈ ಬಂಡಾಯ ಸಾಹಿತ್ಯದ ಘಟ್ಟವು ಅಭಿವ್ಯಕ್ತಪಡಿಸುತ್ತ ನಡೆದಿರುವುದು ಸರ್ವವಿದಿತವಾಗಿದೆ. ಸಮಾಜದೊಳಗಿನ ಯಜಮಾನವರ್ಗವು ಗುಲಾಮಗಿರಿಯನ್ನು ಎಷ್ಟೊಂದು ನಯ -ನಾಜೂಕಿನಿಂದ ಬೆಳೆಸಿ, ಬಳಸಿಕೊಳ್ಳುತ್ತದೆ ಎಂಬುದಕ್ಕೆ ಈ ಸಾಹಿತ್ಯ ಘಟ್ಟದಲ್ಲಿನ ಸ್ತ್ರೀ ಸಂವೇದನೆ ಮತ್ತು ದಲಿತ ಸಂವೇದನೆಗಳೇ ಸಾಕ್ಷಿ. ಶ್ರೀಮಂತರು, ರಾಜಕಾರಣಿಗಳು, ಅಧಿಕಾರಿಗಳು ಮಾಡುವ ಅನ್ಯಾಯಗಳು, ತೋರುವ ಹುಸಿನಡತೆ ಇಂದಿನ ನಾಟಕೀಯ ಬದುಕಿನ ವಾಸ್ತವಿಕತೆಯೆಂಬುದು ಎಲ್ಲರಿಗೂ ಮನನೀಯವಾದ ಸಂಗತಿಯೇ ಸರಿ. ಇಂಥ 'ಸುಪ್ತ ವ್ಯಕ್ತ' (Open secret) ಸ್ಥಿತಿಯ ಢಂಬಕತೆಯನ್ನು ಅರಿತು ಅರಿತು ಅರಿಯದಂತೆ ನಡೆಯುವದರಿಂದ ಸಾಮಾಜಿಕ ಸ್ವಾಸ್ಥ್ಯಕ್ಕೆ ತಗುಲುವ ಕಳಂಕವನ್ನು ಪ್ರೇರೇಪಿಸಿದಂತಾಗುತ್ತದೆ ಯೆಂಬುದಕ್ಕಾಗಿ ಪ್ರಜ್ಞಾವಂತ ಸಾಹಿತಿಗಳು ಸಾಹಿತ್ಯ ಮುಖೇನವಾಗಿ ಅದನ್ನು ಬಹಿರಂಗಪಡಿಸತೊಡಗಿದರು. ಅಷ್ಟೇ ಅಲ್ಲ, ಅದನ್ನು ವಿರೋಧಿಸತೊಡಗಿದರು. ಇದಕ್ಕಾಗಿ ಕನ್ನಡ ಸಾಹಿತ್ಯವು ಹೊಸದಾದ ಭಾಷೆ- ಪರಿಭಾಷೆಗಳನ್ನು ರೂಪಿಸಿಕೊಳ್ಳಬೇಕಾಯಿತು, ರೂಪಿಸಿಕೊಳ್ಳುತ್ತಿದೆ. ಈ ಬಂಡಾಯ ಸಾಹಿತ್ಯವು ಇನ್ನೂ ಬೆಳೆಯುತ್ತಿರುವುದರಿಂದ ಆವಾವ

---

೬. ಅದೇ -'ನಾನು ಬರೆಯುತ್ತೇನೆ' ಕವನದಿಂದ

ರೂಪ ಪ್ರರೂಪಗಳನ್ನು, ಪ್ರಕಾರ ಪರಿಕರಗಳನ್ನು ಪಡೆದುಕೊಳ್ಳುತ್ತದೆಯೆಂಬುದು ಕಾದು ನೋಡಬೇಕಾಗಿದೆ. ಆದರೆ ಈ ಕಾಲದ ಸಾಹಿತಿಗಳು ಕಾವ್ಯಕ್ಷೇತ್ರದಲ್ಲಿ ಹೆಚ್ಚಿನ ಕೃಷಿಯನ್ನು ಪರಿಣಾಮಕಾರಿಯಾಗಿ ಮಾಡುತ್ತಿರುವುದು ಕಂಡುಬರುತ್ತದೆ. ಶೋಷಣೆಯ ವಿವಿಧ ಮುಖಗಳನ್ನು ಬಹಿರಂಗಪಡಿಸುವುದು ಮತ್ತು ವಿರೋಧಿಸುವುದು ಇಲ್ಲಿಯ ಪ್ರಮುಖ ಅಂಶಗಳಾಗಿವೆ. ಕವಿ ಜಿ. ಎಸ್. ಶಿವರುದ್ರಪ್ಪನವರ `ಪ್ರೀತಿ ಇಲ್ಲದ ಮೇಲೆ' ಕವನ ಸಂಕಲನವು ಬಂಡಾಯ ಸಾಹಿತ್ಯದ ಕಾಲದಲ್ಲಿ ಉದಿಸಿರುವುದರಿಂದ ಇದರಲ್ಲಿ ಬಂಡಾಯ ಮನೋಧರ್ಮದ ವಿಷಯ ವಸ್ತು ವ್ಯಾಪಕವಾಗಿ ಹರಡಿಕೊಂಡಿದೆ. ಇಲ್ಲಿಯ ಕವನಗಳಲ್ಲಿ ಶೋಷಣೆಯ ವಿವಿಧ ಮುಖಗಳು, ಶೋಷಣೆಗೊಳಗಾದವರ ಆಗುತ್ತಿರುವವರ ಮನಮಿಡಿಯುವ ಶಬ್ದ ಚಿತ್ರಗಳು ಕವಿಯ ಬಂಡಾಯ ಮನೋಭಾವದಿಂದ ಯಥಾರ್ಥವಾಗಿ ಮೂಡಿನಿಂತಿವೆ. ಆಷಾಢಭೂತಿತನ ವೆಂದು ಕರೆಯಬಹುದಾದ ಸಹಜತೆಯಿಂದ ವಂಚಿತವಾದ ಸಮಾಜದಲ್ಲಿ ಪ್ರತಿಷ್ಠಿತರೆಂದು ಭಾವಿಸಿಕೊಂಡಿರುವವರ ನಾಟಕೀಯ ಸೋಗಲಾಡಿತನದ ಬದುಕು ಮತ್ತು ಸಮಾಜದ ವಿವಿಧ ಹಂತಗಳಲ್ಲಿ ಕಂಡು ಬರುವ ಜಾತಿ ಮತ-ಭಾಷೆ- ಪಕ್ಷ ಇತ್ಯಾದಿ ಗುಂಪುಗಳಲ್ಲಿನ ಶೀತಲಯುದ್ಧ, ಸಮಯಸಾಧಕ ಮನೋಭಾವ, ರಾಜಕೀಯ ಹೆಸರಿನಲ್ಲಿ ನಡೆಯುವ ರಾಷ್ಟ್ರಘಾತುಕ ಕೃತ್ಯ, ಮೋಸ- ವಂಚನೆಗಳ ಸಾಲು ದೀಪ ಇತ್ಯಾದಿಗಳು ಮನುಕುಲದ ಮಹಾಸತ್ವವೆಂದು ಉಳಿದು ಬಂದಿರುವ ಮಾನವೀಯತೆಯನ್ನು ವಿನಾಶಗೊಳಿಸುತ್ತಿವೆ. ನಮ್ಮ ರಾಷ್ಟ್ರದ ರಾಜಕೀಯವೆಂದರೆ 'ದರೋಡೆ ದರ್ಪಗಳ ಆಗರ'ವೆಂದು ಅರ್ಥೈಸುವ ಮಟ್ಟಿಗೆ ಆ ವ್ಯವಸ್ಥೆ ಹದಗೆಟ್ಟಿದೆ. ಇಂಥ ಚಿಂತಾಜನಕ ಸ್ಥಿತಿಯಲ್ಲಿ ತೊಳಲಾಡುತ್ತಿರುವಾಗ ಸಾಮಾಜಿಕ ಬದುಕಿಗೆ 'ಪ್ರೀತಿ'ಯ ಅವಶ್ಯಕತೆ ಇದೆ. ಆದರೆ ಪರಸ್ಪರರು ಬೆನ್ನಿಗೆ ಬೆನ್ನಾನಿಸಿ ನಡುವೆ ಗೋಡೆ ನಿರ್ಮಿಸಿ ಪ್ರೀತಿಯಿಂದ ವಂಚಿತರಾಗಿದ್ದಾರೆ. ಯಾರೊಬ್ಬರನ್ನು 'ಪ್ರೀತಿ'ಯಿಂದ ಕಾಣುವ ಸಾಮಾಜಿಕ ಮನೋಭಾವ ಮಾಯವಾಗಿದೆ. ಮನಸ್ಸು ಮರಭೂಮಿಯಾಗಿ ಬೆಳೆಯುತೊಡಗಿದೆ. ಇಂಥ ಸ್ಥಿತಿಯ ದ್ಯೋತಕವಾಗಿಯೇ ಕವಿ 'ಪ್ರೀತಿ ಇಲ್ಲದ ಮೇಲೆ' ಕವನವನ್ನು ಭರವಸೆಯ ಆಶೆಯಿಂದ ಬರೆದಿದ್ದಾರೆ.

'ಪ್ರೀತಿ ಇಲ್ಲದ ಮೇಲೆ
ಮಾತಿಗೆ ಮಾತು ಕೂಡೀತು ಹೇಗೆ ?
ಅರ್ಥ ಹುಟ್ಟೀತು ಹೇಗೆ ?
....
....
ಜಾತಿ- ಮತ -ಭಾಷೆ -ಬಣ್ಣಗಳ ಗೋಡೆಯ ನಡುವೆ
ನರಳುವ ಪಾಡು ತಪ್ಪೀತು ಹೇಗೆ ?
....
....
ನಮ್ಮ ನಿಮ್ಮ ಮನಸ್ಸು

ಮರಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ ?"[೭]

-ಇದು ಸಮಕಾಲೀನ ಪ್ರಶ್ನೆ. ಕವಿ ಬೀದಿಗಿಳಿದು ಬಂದು ಅನುಭವ ಸಂಗ್ರಹಿಸಿ ಕಾವ್ಯ ಬರೆದಾಗ ಸಮಕಾಲೀನ ಸಮಾಜವನ್ನು ಎಷ್ಟೊಂದು ವಾಸ್ತವಿಕವಾಗಿ ಚಿತ್ರಿಸುತ್ತಾನೆಂಬುದಕ್ಕೆ ಮೇಲಿನ ಸಾಲುಗಳೇ ಸಾಕ್ಷಿ. ಇಂಥ ಹಸಿ ಅನುಭವವನ್ನು ಕಟ್ಟಿಕೊಡುವ ಬಂಡಾಯ ಸಾಹಿತ್ಯ ನಿಜಕ್ಕೂ ಮೌಲಿಕವಾದುದು.

"ಪ್ರೀತಿ ಇಲ್ಲದ ಮೇಲೆ" ಎಂಬ ಕೃತಿಯ ತಲೆಬರಹವು ಇಡೀ ಕೃತಿಯ ಜೀವನಾಡಿಯಾಗಿ ನಿಂತಿದೆ. ಇಂದಿನ ವಾಸ್ತವಿಕ ಬದುಕಿನ ಚಿತ್ರಣವು ಕಾವ್ಯಮಯವಾಗಿ ಇಲ್ಲಿ ಒಡಮೂಡಿದೆ. ಪ್ರಸಕ್ತ ಸಮಾಜದಲ್ಲಿ ಹಿಂದಿನಂತೆ ಪ್ರೀತಿ, ಸಹಕಾರ, ಸ್ನೇಹಶೀಲತೆಯಿಂದ ಕೂಡಿದ ಪ್ರಾಮಾಣಿಕವಾದ ತುಂಬು ಹೃದಯದ ಜೀವನಕ್ಕೆ ಬದಲಾಗಿ ಅಸೂಯೆ. ಅಸಹಕಾರ, ಮೋಸ, ಆಷಾಢಭೂತಿತನಗಳು ತಾಂಡವವಾಡುತ್ತಿವೆ. ವ್ಯಕ್ತಿ- ವ್ಯಕ್ತಿಗಳ ಮಧ್ಯ ಕಂದಕವಿದೆ. ಈ ಕಂದಕ ದಿನಗಳೆದಂತೆ ಬೆಳೆಯುತ್ತಿದೆ. ಅಪ್ರಮಾಣಿಕತೆ ಮತ್ತು ಅನೈತಿಕತೆಗಳು ಎಲ್ಲೆಡೆಯೂ ಮನೆ ಮಾಡಿಕೊಂಡಿವೆ. ಹೀಗಾಗಿ ಇಂದಿನ ಜಗತ್ತು ದುಷ್ಟರ ಸಂತೆಯಾಗಿದೆ. ಪ್ರೀತಿಯಿಂದ ವಂಚಿತರಾದ ಈ ಜನರು.

"ಕೂಡಿಸಿದರೆ ಕೂಡಲೊಲ್ಲದ
ಹತ್ತಿರವಿದ್ದೂ ಬೆರೆಯಲೊಲ್ಲದ"[೮]

ಪ್ರತಿಷ್ಠೆ ತುಂಬಿದ ಜೋಬ್ರ ಜನರಾಗಿದ್ದಾರೆ. ಛಿದ್ರವಾದ ಹಿತಾಸಕ್ತಿಗಳಿಂದ ಬದುಕು ಅಭದ್ರವಾಗಿದೆ. ಸ್ವಾರ್ಥತೆಯ ಸುಳಿವಿಗೆ ಸಿಕ್ಕ ವ್ಯಕ್ತಿಯ ಬದುಕು ಅಶಾಂತಿಯಲ್ಲಿ ತೊಳಲಾಡುತ್ತಿದೆ. ಲಾಭದ ಆಶೆಯಿಂದ ಲೋಭಿಗಳಾಗಿದ್ದಾರೆ. ಹೀಗಾಗಿ ಯಾವ ಹೀನ ಕೃತ್ಯಗಳಿಗೂ ಹೇಸದ ಇವರು ಹೇಸಿಕೆಯ ಹುಳುಗಳಾಗಿ ತೆವಳುತ್ತಿದ್ದಾರೆ. ಇಂಥ ಜನರನ್ನು ಹೇಗಾದರೂ ಮಾಡಿ ಪರಿವರ್ತಿಸ ಬೇಕೆಂಬುದು ಕವಿಯ ಆಶೆಯಾಗಿದೆ. ಅಂತೆಯೇ ಕವಿ ಶಿವರುದ್ರಪ್ಪನವರು 'ಶೂದ್ರನಿಗೊಂದು ಪತ್ರ' ಎಂಬ ಕವನದಲ್ಲಿ

"ಹೀಗಿರುವೀ ಮಂದೆಯ ಕೂಡಿಸಿ
ಹೊಸ ಹೊಳೆಯಲ್ಲಿವನೆಲ್ಲವ ಮೀಯಿಸಿ
ತೊಳೆಯಬಹುದೇ ಶತಮಾನದ
ಕೊಳೆಯ?
ಏನು ಮಾಡುವುದು, ಹೇಳೋ ಗೆಳೆಯ ?"[೯]

---

೭. ಅದೇ -'ಪ್ರೀತಿ ಇಲ್ಲದ ಮೇಲೆ' ಕವನದಿಂದ

೮. ಅದೇ ಶೂದ್ರನಿಗೊಂದು ಪತ್ರ ಕವನದಿಂದ ಆಯ್ದುಕೊಳ್ಳಲಾಗಿದೆ.

೯. ಅದೇ

ಎಂದು ಆಲಾಪಿಸುತ್ತಾರೆ ಹೌದು, ಕವಿಯ ಚೇತನಾ ಚಿಲುಮೆಯ ಮನಸ್ಸು ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸುವತ್ತ ಚಿಂತಿಸುತ್ತಿದೆ. ಅಳತೆಗೆ ಸಿಗದಂತೆ ಹಾಳಾದ ಈ ವ್ಯವಸ್ಥೆಯನ್ನು ಸುಮಧುರಗೊಳಿಸುವುದು ಹೇಗೆಂದು ಉಪಾಯದ ಹುಡುಕುವಿಕೆಗೆ ಸಹೃದಯರ ಚಿಂತನಾ ಬೆಂಬಲವನ್ನು ಬಯಸುತ್ತಾನೆ ಕವಿ.

ಅಧಿಕಾರ-ಅಂತಸ್ತು, ಜಾತಿ-ಮತ, ಭಾಷೆ-ಬಣ್ಣ, ಸಿರಿ-ಸೀಮೆ ಮುಂತಾದ ಮನೋಭಾವಗಳಿಂದ ಸಂಕುಚಿತಗೊಂಡ ಸಮಾಜದಲ್ಲಿ ಬದುಕು ಭಯಂಕರತೆಯಿಂದ ತುಂಬಿದೆ. ಅಷ್ಟಮದಾದಿ ಹಮ್ಮುಗಳನ್ನು ಅಳವಡಿಸಿಕೊಂಡು ನೆಲನೋಡದೆ ನಡೆದಾಡುವ ಜನರು ಒಂದು ಕಡೆ ಇದ್ದರೆ, ದಾರಿದ್ರ್ಯದ ದೈನ್ಯತೆಯಿಂದ ಬೊಗ್ಗಿದ ಮುಗ್ಧ ಗೋಣುಗಳು ಇನ್ನೊಂದು ಕಡೆ ಹೀಗಾಗಿ ಪರಸ್ಪರರಲ್ಲಿ ಪ್ರೀತಿ -ವಿಶ್ವಾಸಗಳು ಮಾಯವಾಗಿವೆ. ಬದುಕಿನಲ್ಲಿ ನೆಮ್ಮದಿ ಶಾಂತಿ ಪ್ರೀತಿಗಳು ಗಗನ ಕುಸುಮಗಳಾಗಿವೆ. ಇಂಥ ಸ್ಥಿತಿಯ ವೈಜ ಚಿತ್ರಣವು 'ಪ್ರಗತಿ' ಎಂಬ ಕವನದಲ್ಲಿ ಮನೋಜ್ಞವಾಗಿ ಅಭಿವ್ಯಕ್ತವಾಗಿದೆ.

"ಮುಗ್ಧರೆದೆಯ ಗದ್ದೆಗಳಲಿ
ಮತಮೌಢ್ಯದ ಬೀಜವ
ಸದಾಬಿತ್ತಿ ಬೆಳೆಯ ತೆಗೆವ
ಚಾಣಾಕ್ಷರ ವೈಭವ
ಇವರ ನಡುವೆ ಪಠಿಸಬಹುದೆ
ಸರ್ವೋದಯ ಮಂತ್ರವ ?" ೧೦

ಎಂಬ ಸಾಲುಗಳಲ್ಲಿ ಶೋಷಣೆಯ ಶಬ್ದ ಚಿತ್ರಗಳ ನಡುವೆ ಕವಿ ನಿಂತು ಯೋಚಿಸಿದ್ದಾರೆ. ಅರಿತೋ ಅರಿಯದೆಯೋ ಶೋಷಣೆಗೊಳಗಾಗುತ್ತಿರುವ ಮುಗ್ಧ ಬಡವರು ಒಂದು ಕಡೆ, ಅವರನ್ನು ತಮ್ಮ ಸ್ವಾರ್ಥಕ್ಕಾಗಿ ಇಷ್ಟಬಂದಂತೆ ಶೋಷಿಸುವ ಶ್ರೀಮಂತರ ವರ್ಗ ಇನ್ನೊಂದು ಕಡೆ. ಇದು ಇಂದಿನ ನಮ್ಮ ವಾಸ್ತವಿಕ ಸಮಾಜದ ಚಿತ್ರಣ. ಸ್ವಾರ್ಥದ ತುತ್ತತುದಿಗೇರಿದ ಇವರಿಗೆ ಸರ್ವರ ಏಳಿಗೆಯನ್ನು ಸಾರುವ ಗಾಂಧೀಜಿಯವರ ಸರ್ವೋದಯ ಮಂತ್ರವು ಕೇಳಿಸದೆಂಬಂತಾಗಿದೆ. ಕೋಣದ ಮುಂದೆ ಕಿನ್ನರಿ ಬಾರಿಸಿದರೆ ಶಂಭುಲಿಂಗನ ಗುಡಿಯಲ್ಲದೆ?' ಎಂಬಂತಾಗಿದೆ ಸ್ಥಿತಿ.

ಸ್ವಾತಂತ್ರ್ಯದ ನಂತರದಲ್ಲಿ ಸುಖಮಯವಾದ ಜೀವನವನ್ನು ಸಾಗಿಸಬಹುದೆಂದು ನಂಬಿದ್ದ ಜನತೆಯ ಏನೆಲ್ಲಾ ಆಶೋತ್ತರದ ಕನಸುಗಳು ಬರೀ ಕನಸುಗಳಾಗಿ ಉಳಿದುವು. ಪರಕೀಯ ಪಾರತಂತ್ರ್ಯದಿಂದ ಬಿಡುಗಡೆಯಾದ ಜನತೆ ಸ್ವಕೀಯರ ಕುಟಿಲತಂತ್ರಕ್ಕೆ ಗುರಿಯಾದಂತಾಗಿದೆ. ಸ್ವಾರ್ಥ ಮತ್ತು ಭ್ರಷ್ಟಾಚಾರಗಳ ಚರಮೂರ್ತಿಗಳಾದ ನಮ್ಮ ರಾಜಕಾರಣಿಗಳು, ಗರ್ವದ ಗಿರಿಯಲ್ಲಿರುವ ಅಧಿಕಾರಿಗಳು, ಅವಿವೇಕದ ಬಂಡವಾಳದಲ್ಲಿರುವ ಶ್ರೀಮಂತರು -ಉದ್ದಿಮೆದಾರರು ರಾಷ್ಟ್ರದ

---

೧೦. ಅದೇ-' ಪ್ರಗತಿ' ಕವನದಿಂದ

ರಕ್ಷಕರಾಗಿದ್ದಾರೆ. ಇವರು ಅಲ್ಪ ಪ್ರಮಾಣದವರಾಗಿದ್ದರೂ ಕುತಂತ್ರದ ಕುಮೂರ್ತಿಗಳಾಗಿ ಬಹುಸಂಖ್ಯಾತ ಪ್ರಜೆಗಳನ್ನು ಅನೇಕ ಆಶ್ಚರ್ಯಕರವಾದ ರೀತಿಗಳಿಂದ ಶೋಷಿಸುತ್ತಿದ್ದಾರೆ. ಹೀಗಾಗಿ ಜನತೆಗೆ ದೊರಕದ ಸ್ವಾತಂತ್ರ್ಯ ಯಾವುದು ? ಎಲ್ಲಿದೆ ? ಎನ್ನುವಂತಾಗಿದೆ. ಜನತೆಯ ಸಮಸ್ಯೆಗಳ ಸರಮಾಲೆಯನ್ನು ರಾಷ್ಟ್ರದ ಕೊರಳಿಗೆ ಕಟ್ಟಿ ಪುಂಡಪ್ರವಾಚಕರು (ರಾಜಕಾರಣಿಗಳು) ಇವುಗಳನ್ನು ಬಗೆಹರಿಸುವ ನೆಪದಲ್ಲಿ ಬಂಡವಾಳವನ್ನು ನೂರುಗಳ ಕೋಟಿಗಳಲ್ಲಿ ಬಿಡುಗಡೆ ಮಾಡಿಸುತ್ತಾರೆ. ಯೋಜನೆಗಳನ್ನು ಹಾಕುವ ಅವಧಿಯೊಳಗೆ ಕೈವಾಡಕ್ಕೆ ತುತ್ತಾಗಿ ಈ ಬಂಡವಾಳ ಕರಗಿಹೋಗುತ್ತದೆ. ಇನ್ನು ಬಡವರ ಉದ್ಧಾರ ಕನಸಿನ ಮಾತಾಗಿಯೇ ಉಳಿದು, ಸಮಸ್ಯೆಗಳು ನೆನಸಿನಲ್ಲಿಯೇ ಬೆಳೆಯುತ್ತವೆ. ಇಂಥ ಪರಿಸ್ಥಿತಿಯನ್ನು ಕವಿಗಳು ಪ್ರಗತಿಯಲ್ಲಿ :ಎಯಲಿಗೆಳೆದಿದ್ದಾರೆ.

"ಸಾಲು ಸಾಲು ಹಸಿದ ಹೊಟ್ಟೆ
ನಿರಕ್ಷರದ ನಾಲಗೆ
ಸಮೃದ್ಧಿಯ ಹೆಗಲ ಮೇಲೆ
ಭಿಕ್ಷಾನ್ನದ ಜೋಳಿಗೆ,
ಇದೇ ನಮ್ಮ ಪ್ರಗತಿಯೆಂದು
ಭ್ರಮಿಸಬಹುದೆ ತಣ್ಣಗೆ ?"[೧೧]

ಎಂಬ ಸಾಲುಗಳಲ್ಲಿ ಬಹುಸಂಖ್ಯಾತ ಪ್ರಜೆಗಳ ಹೃದಯವಿದ್ರಾವಕ ಸ್ಥಿತಿ ಮತ್ತು ನಿರಾಶೆಯ ಕರಾಳವಾದ ಛಾಯೆ ಹೃದಯಂಗಮವಾಗಿ ಮೂಡಿದೆ. ಇದಕ್ಕೆ ಪ್ರಜೆಗಳದ್ದು ದೋಷದ ಪ್ರಮಾಣವೇನಾದರೂ ಇದ್ದರೆ ಅದು ಅಲ್ಪವೆಂದೇ ಭಾವಿಸಿಕೊಳ್ಳಬೇಕಾಗುತ್ತದೆ. ನಮ್ಮ ದೇಶದ ಪ್ರಜೆಗಳಲ್ಲಿ ದುಡಿಯುವ ಶಕ್ತಿ ಮತ್ತು ದುಡಿಯಲು ಕೆಲಸವಿದ್ದು ಆಲಸಿಗಳಾದವರ ಸಂಖ್ಯೆ ಪರಿಗಣಿಸಿದರೆ ಪ್ರಮಾಣದಲ್ಲಿ ಜಗತ್ತಿನ ಯಾವ ಮುಂದುವರಿದ ರಾಷ್ಟ್ರಕ್ಕಿಂತಲೂ ಕಡಿಮೆಯೆಂದೇ ಹೇಳಬೇಕು. ನಮ್ಮ ಪ್ರಜೆಗಳದು ಪ್ರಯಾಸಕರವಾದ ಶ್ರಮ. ಆದರೆ ಅದಕ್ಕೆ ಪ್ರತಿಫಲವಾಗಿ ದೊರೆಯುವ ಫಲ ಮಾತ್ರ ಹೊಟ್ಟೆ ಬಟ್ಟೆಗೆ ಸಾಲದಷ್ಟು. ಇದನ್ನೇ ಕವಿ ಶಿವರುದ್ರಪ್ಪನವರು -

ಎಷ್ಟು ದುಡಿದರೂ ಏನು ಪಡೆದರೂ
"ಬೆನ್ನಿಗಂಟಿರುವ ಹೊಟ್ಟೆಗಳು
ಭಾರೀ ಮಹಲುಗಳ ಚರಂಡಿಯಂಚಿಗೆ
ತತ್ತರಿಸುವ ಕೊಳಗೇರಿಗಳು"[೧೨]

ಎಂಬ ನಾಲ್ಕು ಚರಣಗಳಲ್ಲಿ ಬಹು ಮಾರ್ಮಿಕವಾಗಿ ಆವೇಶಪ್ರೇರಿತ ಭಾವದೊಂದಿಗೆ ಅಭಿವ್ಯಕ್ತಿಸಿದ್ದಾರೆ. "ಸ್ವಾತಂತ್ರ್ಯೋತ್ಸವ ೯೮೪" ಎಂಬ ಕವನದ ಮೇಲಿನ ಸಾಲುಗಳಲ್ಲಿ 'ವರ್ಗ ವ್ಯವಸ್ಥೆ' ಯ ಪರಿಣಾಮವನ್ನು ಕುರಿತ ಕವಿಯ ಚಿಂತನೆಯು ಬರಿಯ ಪ್ರಗತಿಶೀಲಕ್ಕೆ

೧೧. ಅದೇ 'ಪ್ರಗತಿ' ಕವನ
೧೨. ಅದೇ -'ಸ್ವಾತಂತ್ರೋತ್ಸವ-೯೮೪'

ಸೀಮಿತವಾಗದೆ ಬಂಡಾಯಕ್ಕೆ ಹರಿದು ಬಂದಿರುವುದು ಇಲ್ಲಿ ಗಮನಾರ್ಹ. ಇದು ಬಂಡಾಯಕ್ಕೆ ಸ್ಫೂರ್ತಿಯನ್ನು ನೀಡುವ, ಸಹಕರಿಸುವ ವರ್ಗವನ್ನು ಒದಗಿಸುತ್ತದೆ ಎಂಬುದೇ ಗಮನಾರ್ಹ ವೆನ್ನುವ ಮುಖ್ಯ ಉದ್ದೇಶವಾಗಿದೆ. ನಮ್ಮ ದೇಶ ಅಪಾರವಾದ ಖನಿಜ ಸಂಪತ್ತನ್ನು, ಅತಿ ಹೆಚ್ಚು ಮಾನವ ಸಂಪನ್ಮೂಲವನ್ನು ಹೊಂದಿದ್ದರೂ ಜನತೆಯ ಬೆವರು ಹನಿ ಹೊಳೆಯಾಗಿ ಹರಿದರೂ ಬಡತನದ ತಾಪತ್ರಯ ತಪ್ಪಿಲ್ಲ. ಕೆಲವೆ ಜನರ ಸಂಗ್ರಹ ಪ್ರವೃತ್ತಿಗೆ ತುತ್ತಾಗಿ ಮರೆಯಲ್ಲಿ ಮಲೆಯುತ್ತಿರುವ ರಾಷ್ಟ್ರದ ಮಹಾಸಂಪತ್ತು ದೇಶದ ಬಹುಸಂಖ್ಯಾತ ಪ್ರಜೆಗಳ ಕಮರುವ ಹೊಟ್ಟೆಗಳನ್ನು ಕವರುವಂತೆ ಮಾಡುತ್ತಿದೆ. ಚರಂಡಿಯಂಚಿಗೆ ಇರುವ ಕೊಳಗೇರಿಗಳ ಪಕ್ಕದಲ್ಲಿ ಭಾರೀ ಮಹಲುಗಳ ವಾಸಿಗಳೇ ಆ ಸಂಪತ್ತಿನ ವಾರಸುದಾರರಾಗಿದ್ದಾರೆ. ಬಂಡಾಯದಿಂದ ಆ ಸಂಪತ್ತನ್ನು ಸಮಾಜೀಕರಣಗೊಳಿಸಲು ಸಾಧ್ಯವೆಂಬಂತಿದೆ ಕವಿಯ ಸೂಚ್ಯವಾದ ಆಶಯ.

ಅಧಿಕಾರ-ಸಂಪತ್ತು-ಅಂತಸ್ತು ಇವುಗಳನ್ನು ಯಥೇಚ್ಛವಾಗಿ ಅನುಭವಿಸುವ ಲಾಲಸೆಯನ್ನು ಹೊಂದಿದ `ಮೇಲ್' ವಿಶೇಷಣದಿಂದ ಗುರುತಿಸಿಕೊಳ್ಳುವ ವರ್ಗವೊಂದು ಅಪರಿಮಿತ ಆಶೆಯಿಂದ ಪರೋಕ್ಷವಾಗಿ ತನ್ನೊಳಗೆ ಕಚ್ಚಾಡುತ್ತದೆ. ಅದರ ಪ್ರಭಾವಕ್ಕೆ ಒಳಗಾದ ಕೆಳವರ್ಗವು ಪ್ರತ್ಯಕ್ಷವಾಗಿ ರಕ್ತಸುರಿಸಿ ಹೊಡೆದಾಡುತ್ತದೆ. ಕ್ಷಣಿಕ ಸುಖಕ್ಕಾಗಿ ಹಂಬಲಿಸುವ ಈ ಪ್ರತ್ಯಕ್ಷ ಹೋರಾಟಗಾರರಿಂದ ಪರೋಕ್ಷರಿಗೆ ದೀರ್ಘ ಲಾಭ ಉಂಟಾಗುತ್ತದೆ. ಈ ರೀತಿಯ ಉದ್ದೇಶಕ್ಕಾಗಿ ಉಂಟಾಗುವ ಸ್ಪರ್ಧೆಯು ಸಮಾಜದಲ್ಲಿ ಕಳ್ಳತನ, ದರೋಡೆ, ಸುಲಿಗೆ- ಶೋಷಣೆ, ಹತ್ಯೆ-ಆತ್ಮಹತ್ಯೆ ಮುಂತಾದ ಕರುಣಾಜನಕ ಕಂಬನಿ ಮಿಡಿಯುವ ಚಟುವಟಿಕೆಗಳು ದಿನಬೆಳಗಾಗುವುದರೊಳಗೆ ನಡೆದಿರುತ್ತವೆ. ಪತ್ರಿಕೆಗಳು ಇವುಗಳ ದಾಖಲಾತಿಗಳಂತೆ ಭಾಸವಾಗುತ್ತವೆ ಕೆಲವೊಮ್ಮೆ. ಹೀಗಾಗಿ ಇಂದಿನ ನೈಷ್ಕಿಕರಿಗೆ ಬದುಕೇ ಒಂದು ನರಕಯಾತನೆಯಾಗಿ ಪರಿಣಮಿಸಿದೆ. ಇಂಥ ಭೀಕರವಾದ ಪರಿಸ್ಥಿತಿಯನ್ನು ಕುರಿತು ಕವಿ 'ಭಯಗೀತ' ವನ್ನು ಬರೆದಿದ್ದಾರೆ.

ದಿನಬೆಳಗಾದರೆ ಹತ್ಯಾಕಾಂಡದ
ತತ್ತರಿಸುವ ದುರ್ವಾರ್ತೆಗಳು
ಮೂರು ಬಣ್ಣಗಳ ಧ್ವಜದೆತ್ತರಕೂ
ಹಬ್ಬಿದ ಭೀತಿಯ ಜ್ವಾಲೆಗಳು [೧೩]

ಎಂಬ ಸಾಲುಗಳಲ್ಲಿ ಭಯಾನಕ ಚಿತ್ರಣವಿದೆ. ಇಲ್ಲಿ ರಾಷ್ಟ್ರವಿಭಜನೆಯಂಥ ಭೀಕರ ಸಮಸ್ಯೆಗಳ ಸುಳಿವಿನ ಜೊತೆಗೆ ಅದರ ಹಿಂದಿನ ರಾಜಕೀಯ ತಂತ್ರ -ಕುತಂತ್ರಗಳು ಹಾಗೂ ಕೊಲೆ-ಸುಲಿಗೆ ದರೋಡೆಗಳು ಸುಪ್ತವಾಗಿ ವ್ಯಕ್ತವಾಗುತ್ತವೆ.

ಇಂಥ ದಿನಮಾನಗಳ ಬೆಳಗು -ಸಂಜೆಗಳು ಭಯಾನಕವಾಗಿ ಮೂಡಿ ಮುಳುಗುವುದನ್ನು ಕವಿಯ ಕಲ್ಪನೆ ಕಾಲದ ಸಂದರ್ಭಕ್ಕೆ ಅನುಗುಣವಾಗಿ ಚಿತ್ರಿಸಿದೆ.

---

೧೩. ಅದೇ 'ಭಯಗೀತ' ಕವನದಿಂದ

"ದಿನವೂ ತೆರೆಯುವ ಬೆಳಗಿನ ಬಾನೊಳು
ರಕ್ತದ ಕಲೆಗಳ ಛಾಯೆಯಿದೆ,
ದಿನವೂ ಮುಚ್ಚುವ ಸಂಜೆಗತ್ತಲೊಳು
ನೋವಿನ ದನಿಗಳ ಉಯ್ಯಲಿದೆ" [೧೪]

ಎಂಬ ನಾಲ್ಕು ಚರಣಗಳು ಪ್ರಸಕ್ತ ಸಮಾಜಿಕ ಜೀವನವನ್ನೇ ತೆರೆದಿಟ್ಟಿವೆ. ಬೆಳಗಿನ ಮೂಡಣ ದಿಕ್ಕು ಕವಿಗೆ ರಕ್ತದ ಕಲೆಯಂತೆ ಕಂಡುದು ಇಲ್ಲಿ ವಿಶೇಷ. ಅಂತೆಯೇ ಸಂಜೆಯ ಹೊತ್ತಿನ ಸೂರ್ಯಾಸ್ತ ಸಮಯದ ಹಕ್ಕಿಗಳ ಚಿಲಿಪಿಲಿ ಧ್ವನಿ ಕವಿಗೆ ನೋವಿನ ಧ್ವನಿಗಳ ಉಯ್ಯಲಿನಂತೆ ಕಂಡುದು ಮತ್ತೂ ವಿಶೇಷ. ಏಕೆಂದರೆ, ಈ ಕವಿ ಬರಿ ಬಂಡಾಯ ಘಟ್ಟದಲ್ಲಿ ಉದಿಸಿ, ಬೆಳೆದ ಕವಿಯಲ್ಲ ಈತ ನವೋದಯ, ಪ್ರಗತಿಶೀಲ, ನವ್ಯ ಈ ಎಲ್ಲ ಮಾರ್ಗಗಳನ್ನು ಮನೋನಿಷ್ಠವಾಗಿ ಕ್ರಮಿಸಿ ಬಂದು ಬಂಡಾಯದಲ್ಲಿ ಸಾಗಿರುವ ಸಂಕೀರ್ಣ ಕವಿ. ನವೋದಯದ ಕಾಲದಲ್ಲಿಯೂ ಕವಿಗಳು ಬೆಳಗು ಸಂಜೆಗಳನ್ನು ನೋಡಿದ್ದರು. ಇಲ್ಲಿಯೂ ನೋಡಿದ್ದಾರೆ. ಆದರೆ ಈ ಎರಡೂ ಸಂದರ್ಭಗಳಲ್ಲಿ ನೋಡಿದ ದೃಷ್ಟಿಕೋನ ಮಾತ್ರ ಭಿನ್ನವಾಗಿದೆ. ಅದರ ಹಿಂದೆ ಮನೋಧರ್ಮವೂ ವಿಭಿನ್ನವಾಗಿದೆ. ನವೋದಯದ ಕಾಲದಲ್ಲಿ ಬೆಳಗನ್ನು ಬಹುಸೊಗಸಾಗಿ ಕಂಡಿದ್ದರು. ಸೌಂದರ್ಯಾತ್ಮಕ ದೃಷ್ಟಿಕೋನ ಹಾಗೂ ದಾರ್ಶನಿಕ ಮನೋಧರ್ಮಗಳು ಕವಿಯ ಅಂತರ್ಯದಲ್ಲಿ ತುಡಿಯುತ್ತಿದ್ದುದೇ ಕಾರಣವಾಗಿ ಆ ಬೆಳಗು

ಮೂಡಲ ಮನೆಯಾ ಮುತ್ತಿನ ನೀರಿನ
ಎರಕಾವ ಹೊಯ್ದಾ
ನುಣ್ಣ ನೆರಕವ ಹೊಯ್ದಾ
ಬಾಗಿಲ ತೆರೆದೂ ಬೆಳಕೂ ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೋ ಜಗವೆಲ್ಲಾ ತೊಯ್ದಾ
....
....
ಎಲೆಗಳ ಮೇಲೆ ಹೂಗಳ ಒಳಗೇ
ಅಮೃತದ ಬಿಂದು
ಕಂಡವು ಅಮೃತದ ಬಿಂದು
ಯಾರಿರಿಸಿರುವರು ಮುಗಿಲ ಮೇಲಿಂ
ದಿಲ್ಲಿಗೇ ತಂದು
ಈಗ ಇಲ್ಲೀಗೆ ತಂದು "[೧೫]

---

೧೪. ಅದೇ 'ಭಯಗೀತ' ಕವನ

೧೫. ದ.ರಾ.ಬೇಂದ್ರೆ 'ಬೆಳಗು' ಕವನ, ಸಮಕಾಲೀನ ಕನ್ನಡ ಕವಿತೆಗಳು. ಸಂ. ೧ ಪು. ೬.೬

ಇತ್ಯಾದಿಯಾಗಿ ಕಂಡಿತು. ಅದಕ್ಕೆ ಅಂದಿನ ಕವಿಯ ಮನೋಧರ್ಮವು ಮೆಚ್ಚಿ ಕೊಂಡಿದ್ದ ಸೌಂದರ್ಯಪ್ರಜ್ಞೆಯ ಪ್ರಭಾವಲಯವಿತ್ತು. ಅಂತೆಯೇ ಆ ಕಾಲದ ಸಂಜೆಗೂ 'ರಾಗರತಿಯ ನಂಜು ಏರಿತ್ತು' ಕವಿ ಶಿವರುದ್ರಪ್ಪನವರು ನವೋದಯ ಕಾಲದಲ್ಲಿ ಹಿರಿಯರ ಪ್ರಭಾವಕ್ಕೆ ಒಳಗಾಗಿ ತನ್ಮೂಲಕ ಸೌಂದರ್ಯಕ್ಕೆ ತಲೆದೂಗಿ ಅಂದಿನ ಬೆಳಗು ಸಂಜೆಗಳ ಸೌಂದರ್ಯಗಳನ್ನು ಅನುಭವಿಸಿದವರು. ಆದರೆ ಕಾಲಗತಿಸಿದಂತೆ ಮನೋಧರ್ಮ ಬದಲಾಗಿ ಸಾಹಿತ್ಯವು ಸಮಾಜಮುಖಿಯಾಗುತ್ತಾ ನಡೆಯಿತು. ಅಂತೆಯೇ ಈ ಎಲ್ಲ ಕಾಲಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಂಡ ಕವಿ ಶಿವರುದ್ರಪ್ಪನವರ ಸಂವೇದನೆಯು ಬದಲಾದ ಕಾಲಕ್ಕೆ ಹೆಜ್ಜೆಹಾಕಿ ಬೆಳಗು ಸಂಜೆಗಳನ್ನು ಮೇಲಿನಂತೆ ಭಯಾನಕವಾಗಿ ಕಂಡುದು ಅವರ ಸಂಕೀರ್ಣ ಕವಿತ್ವ ಹಾಗೂ ಸಾಂದರ್ಭಿಕ ಸಂವೇದನೆಗೆ ಹಿಡಿದ ಕನ್ನಡಿಯಾಗಿದೆ.

ಈ ಸಂಕಲನದ 'ಐಕ್ಯಗಾನ' ಎಂಬ ಕವನದಲ್ಲಿ ಕವಿ ಶಿವರುದ್ರಪ್ಪನವರು 'ಸಮಾನತೆ' ಮತ್ತು 'ದೇಶಭಕ್ತಿ' ಯನ್ನು ಸಾರಿದ್ದಾರೆ. "ಬಂಡಾಯ ಮಾಡಿ ಶೋಷಣೆ ತಡೆದು, ಸಾಮಾಜಿಕ ಸ್ವಾಸ್ಥ್ಯವನ್ನು ಸ್ಥಾಪಿಸೋಣ. ಈ ಎಲ್ಲ ಕ್ರಿಯೆಯಲ್ಲೂ ಐಕ್ಯತೆ ಮತ್ತು ರಾಷ್ಟ್ರಭಕ್ತಿಯನ್ನು ಉಳಿಸಿಕೊಳ್ಳೋಣ." ಎಂಬ ವಿಶೇಷವಾದ ಮನೋಭಾವ ಈ ಕವನದಲ್ಲಿದೆ.

> ಒಂದೇ ಒಂದೇ ನಾವೆಲ್ಲರೂ ಒಂದೇ
> ಈ ದೇಶದೊಳೆಲ್ಲಿದ್ದರೂ
> ಭಾರತ ನಮಗೊಂದೆ"[೧೬]

ಎನ್ನುವ ಕಲ್ಪನೆಯ ಮೂಲಕ ಬಂಡಾಯದಲ್ಲಿಯೂ ಕವಿ 'ಐಕ್ಯಗಾನ' ದಂಥ ಮಾನವೀಯ ಅನುಕಂಪ ಮತ್ತು ರಾಷ್ಟ್ರಭಕ್ತಿಯನ್ನು ವ್ಯಕ್ತಮಾಡಿದುದು ಕವಿಯ ವಿಶಿಷ್ಟತೆಯ ಸಂಕೇತವಾಗಿದೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಬಿಸಿ ಉಸಿರಿನ ಬಂಡಾಯಗಾರರ ಸಾಹಿತ್ಯದೃಷ್ಟಿ ಶೋಷಣೆಯ ಮಾರ್ಗಗಳನ್ನು ಹುಡುಕಿ, ವಿರೋಧಿಸುವುದರ ಕಡೆಗೆ ಹೆಚ್ಚಾಗಿರುವುದು ಕಂಡುಬಂದರೆ, ಅನುಭವದಾಳವನ್ನು ಮೈಗೂಡಿಸಿಕೊಂಡ ಶ್ರೀಯುತ ಶಿವರುದ್ರಪ್ಪನವರು ಅದನ್ನು ಒಳಗೊಂಡುದಲ್ಲದೆ ರಾಷ್ಟ್ರಪ್ರೇಮ, ಮಾನವೀಯ ಅನುಕಂಪ, ಸಾಮಾಜಿಕ ಐಕ್ಯತೆ ಇವುಗಳನ್ನು ಸಾಧಿಸುವತ್ತ ಹೆಚ್ಚಿನ ಒಲವು ತೋರಿರುವುದಾಗಿದೆ.

ಒಟ್ಟಿನಲ್ಲಿ "ಪ್ರೀತಿ ಇಲ್ಲದ ಮೇಲೆ" ಕವನ ಸಂಕಲನವು ಯಾವೊಂದು ಘಟ್ಟದ ಪ್ರಾತಿನಿಧಿಕ ಕೃತಿಯಾಗಿ ನಿಲ್ಲದೆ ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಘಟ್ಟಗಳ ಕಾವ್ಯಗಳಿಗೆ ಸಾಂದರ್ಭಿಕ ಸಂವೇದನೆಯಾಗಿ ನಿಲ್ಲುವುದು. ಇದು ಕೃತಿಯ ಸಮಸ್ಯೆಯೂ ಹೌದು; ವಿಶೇಷತೆಯೂ ಹೌದು; ಮಹತ್ವತೆಯೂ ಹೌದು.

ಹಾಗಾದರೆ ಬಂಡಾಯ ಸಾಹಿತ್ಯ ಘಟ್ಟದಲ್ಲಿ ಉಗಮಿಸಿದ ಈ ಕೃತಿ ಉಳಿದ ಬಂಡಾಯ ಕೃತಿಗಳಂತಿರದೆ ಏಕೆ ವೈವಿಧ್ಯಮಯವಾಗಿ ಬೆಳೆದಿದೆ? ಎಂಬುದು ವಿವೇಚನಾರ್ಹ ಪ್ರಶ್ನೆಯೇ ಸರಿ.

---

೧೬. ಜಿ. ಎಸ್. ಶಿವರುದ್ರಪ್ಪ 'ಪ್ರೀತಿ ಇಲ್ಲದ ಮೇಲೆ' ಕವನ ಸಂಕಲನ 'ಐಕ್ಯಗಾನ' ಕವನ ೧೯೮೭

ಇದಕ್ಕೆ ಮೂಲವಾಗಿ ಕವಿಯನ್ನು ಅರಿಯಬೇಕಾಗುತ್ತದೆ. ಕವಿ ಶಿವರುದ್ರಪ್ಪನವರು ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಕಾಲ ಘಟ್ಟಗಳನ್ನು ಕ್ರಿಯಾತ್ಮಕವಾಗಿ ಅನುಭವಿಸಿದವರು. ಕವಿಯಾಗಿ, ವಿಮರ್ಶಕರಾಗಿ ಬೆಳೆದು ಬಂದ ಅವರು ಕಾಲಕ್ಕನುಗುಣವಾದ ಮನೋಧರ್ಮವನ್ನು ಬೆಳೆಸಿಕೊಂಡವರು. ಆಯಾ ಕಾಲಘಟ್ಟದ ಸಾಮಾಜಿಕ, ರಾಜಕೀಯ, ಸ್ಥಿತಿ ಗತಿಗಳನ್ನು ತೆರೆದ ಹೃದಯದಿಂದ ಅರಿತವರು. ಸಮಕಾಲೀನ ಸಾಂಸ್ಕೃತಿಕ ಸಂಧಾನಗಳೊಂದಿಗೆ ಸಂಬಂಧವನ್ನು ಬೆಳೆಸಿಕೊಂಡು ಬಂದವರು. ನವೋದಯಕಾಲವು ಮುಗಿದು ನವ್ಯಕಾಲವು ಮುನ್ನಡೆಯುತ್ತಿರುವ ಸಂದರ್ಭದಲ್ಲಿ ಈ ಕವಿಯನ್ನು ಇನ್ನೊಬ್ಬ ಇವರಷ್ಟೇ ಮಹತ್ವದ ಕವಿಯಾದ ಶ್ರೀಯುತ ಚೆನ್ನವೀರ ಕಣವಿಯವರೊಂದಿಗೆ 'ಸಮನ್ವಯ ಕವಿ' ಯೆಂದು ಗುರುತಿಸಲಾಯಿತು. ಏಕೆಂದರೆ ಇವರೀರ್ವರೂ ನವೋದಯದ ಕವಿಗಳೂ ಹೌದು, ನವ್ಯ ಕವಿಗಳೂ ಹೌದು ಎಂಬುದಾಗಿ ಅವರ ಗ್ರಹಿಕೆಯಾಗಿತ್ತು. ಇವರು ಆ ಎರಡೂ ಸಾಹಿತ್ಯ ಸಂದರ್ಭಗಳಿಗೆ ಸಮಾನವಾಗಿ ಸಂವೇದನೆ ತೋರಿಸಿದ್ದರಿಂದ ಹಾಗೆ ಗುರುತಿಸಿದ್ದು ಸಮಂಜಸವೂ ಆಗಿತ್ತು. ಆ ಮಾತನ್ನು ಈಗ ನಿಂತು ಪರಾಮರ್ಶಿದಾಗ ಇನ್ನೂ ವಿಸ್ತೃತವಾಗಿ ಅದನ್ನು ಪರಿಗಣಿಸಬೇಕೆನಿಸುತ್ತದೆ. ಏಕೆಂದರೆ ಇವರು ಆ ಎರಡೇ ಸಂದರ್ಭಗಳಿಗೆ ಸೀಮಿತವಾಗಿ ನಿಲ್ಲದೆ ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿಯೂ ಮೊದಲಿನಂತೆ ಯಥೋಚಿತವಾಗಿ ಕ್ರಿಯಾತ್ಮಕವಾಗಿ ಪಾಲ್ಗೊಂಡಿರುವುದರಿಂದ ಅವರ 'ಸಮನ್ವಯತೆ' ಇದುವರೆಗಿನ ಸಮಗ್ರವಾದ ಆಧುನಿಕ ಕನ್ನಡ ಸಾಹಿತ್ಯಕ್ಕೆ ಅನ್ವಯಿಸುತ್ತದೆ ಎಂದು ಹೇಳಬೇಕಾಗುತ್ತದೆ. ಈ ಕಾಲದಲ್ಲಿ ಬೆಳೆದುಬಂದ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಘಟ್ಟಗಳ ಕಾವ್ಯಕ್ಷೇತ್ರಗಳಲ್ಲಿ ಕವಿ ಶಿವರುದ್ರಪ್ಪನವರು ಪಾಲ್ಗೊಂಡಿದ್ದಾರೆ. ಯಾವೊಂದು ಘಟ್ಟಕ್ಕೆ ಸೀಮಿತಗೊಳ್ಳದ ಅವರ ಈ ಸಂಕೀರ್ಣ ಕವಿತ್ವದ ಶಿವರುದ್ರಪ್ಪನವರನ್ನು 'ಸಂಕೀರ್ಣ ಕವಿಯ' ನ್ನಾಗಿಸಿದೆ. ಅವರು ಆಧುನಿಕ ಕನ್ನಡ ಕಾವ್ಯದ ಎಲ್ಲ ಸ್ತರಗಳನ್ನು ಸಮರ್ಥವಾಗಿ ಪ್ರತಿನಿಧಿಸಿದ್ದಕ್ಕಾಗಿ ಅವರ ಕಾವ್ಯಸಂವೇದನೆಯು 'ಸಾಂದರ್ಭಿಕ ಸಂವೇದನೆ' ಯಾಗಿದೆ. ತನ್ಮೂಲಕವಾಗಿ ಅವರ 'ಪ್ರೀತಿ ಇಲ್ಲದ ಮೇಲೆ' ಕವನ ಸಂಕಲನವು ಸಂಕೀರ್ಣ ಕವಿಯ ಸಾಂದರ್ಭಿಕ ಸಂವೇದನೆಯ ಸಂಗಮ ವಾಗಿದೆಯೆಂದು ಹೇಳಬಹುದಾಗಿದೆ.

●●

ವಿಶ್ವಧರ್ಮಕ್ಕೆ ಪಂಡಿತ ಪ್ರಭಾನಂದರ ಕೊಡುಗೆ*

ಡಾ. ಚಂದ್ರಮೌಳಿ ನಾಯ್ಕರ

ಇದೇ ಶತಮಾನದಲ್ಲಿ ಬದುಕಿದ ಪಂಡಿತ ಪ್ರಭಾನಂದರು ರಾಯಚೂರು ಜಿಲ್ಲೆಯ ಕಾಡಕುಂದ ಎಂಬ ಊರಿನವರು. ರಾಚಮ್ಮ ಮತ್ತು ವೀರಭದ್ರಯ್ಯ ಹಿರೇಮಠವೆಂಬ ದಂಪತಿಗಳ ಉದರದಲ್ಲಿ ಜನಿಸಿದವರು. ಮೊದಲು ಸಿದ್ಧರಾಮಯ್ಯ ಎಂದು ಹೆಸರಿಸಲ್ಪಟ್ಟ ಇವರು ಬಾಲ್ಯದಲ್ಲಿಯೇ ತ್ರಿಭಾಷಾ ಕವಿತಾಶಕ್ತಿ ಪಡೆದ ಪುಣ್ಯಶಾಲಿಗಳು. ಕಾಶಿಯಲ್ಲಿ ವೇದಾಂತ, ಸಾಹಿತ್ಯ, ಮೊದಲಾದವುಗಳನ್ನು ಅಧ್ಯಯನ ಮಾಡಿ ಉತ್ತಮವರ್ಗದಲ್ಲಿ ಉತ್ತೀರ್ಣರಾಗಿ ಪಾರಿತೋಷಕಗಳನ್ನು ಪಡೆದವರು. ವೀರಶೈವದಲ್ಲಿ ಪ್ರಸಿದ್ಧವಾದ ಶಿವಾಚಾರಪದಕ್ಕೆ ಅಧಿಕಾರಿಗಳಾಗಿ ನೈಷ್ಠಿಕ ಬ್ರಹ್ಮಚರ್ಯವನ್ನು ಪಾಲಿಸಿಕೊಂಡು ಬಂದು, ವೇದ, ದರ್ಶನ, ವೇದಾಂತಗಳ ಆಳವಾದ ಅಧ್ಯಯನ ಮಾಡಿದರು. ಅನಂತರ ಧ್ಯಾನ ಯೋಗದ ಸಾಧನೆ ಮಾಡಿ, ಆತ್ಮವು ಜ್ಞಾನಸಾಗರವೆಂಬುದನ್ನು ಅನುಭವಿಸಿ ಶಾಸ್ತ್ರ ಗ್ರಂಥರಾಶಿಯನ್ನು ತೊರೆದುಬಿಟ್ಟರು. ಆನಂತರ ಅನೇಕ ರಾಜ್ಯಗಳಲ್ಲಿ ಸಂಚರಿಸಿ ಲೋಕದ ಆಚಾರ ವಿಚಾರವನ್ನು ಅರಿತುಕೊಂಡರು. ಆಮೇಲೆ ನೈಷ್ಠಿಕ ಬ್ರಹ್ಮಚರ್ಯವನ್ನು ಪ್ರಕೃತಿಗೆ ಅಸಂಗತವಾದುದೆಂದು ಬಗೆದು ಗೃಹಸ್ಥಧರ್ಮವನ್ನು ಸ್ವೀಕರಿಸಿದರು. ಆಮೇಲೆ ರಾಜಯೋಗವನ್ನು ಸಾಧಿಸುತ್ತ ಚಿತ್‌ಪ್ರಭೆಯ ದರ್ಶನದಿಂದ ಉಂಟಾದ ವಿರಳ ಆನಂದವನ್ನು ಅನುಭವಿಸಿ ಆ ಪ್ರಭೆಯೇ ತಾನೆಂಬ ಐಕ್ಯಭಾವನೆಯನ್ನು ಅನುಭವಿಸಿ ಪ್ರಭಾನಂದನೆಂಬ ಹೊಸ ಹೆಸರನ್ನಿಟ್ಟುಕೊಂಡರು.

ಅನುಭವದ ಹಿನ್ನೆಲೆಯಲ್ಲಿ ಅನೇಕ ಕೃತಿಗಳನ್ನು ಬರೆಯುತ್ತ `ಮುಕ್ತಿ ದರ್ಶನ' ವೆಂಬ ದರ್ಶನಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿ ಅಗತ್ಯವಾದ ಕನ್ನಡಾನುವಾದವನ್ನು ನೀಡಿದ್ದಾರೆ.

'ಮುಕ್ತಿದರ್ಶನ'ದಲ್ಲಿ ಒಟ್ಟು ಹದಿಮೂರು ಅಧ್ಯಾಯಗಳಿದ್ದು, ಅವುಗಳಲ್ಲಿ 'ಧರ್ಮಾತೀತತತ್ವ ನಿರೂಪಣಾಧ್ಯಾಯ'ವೆಂಬುದು ಒಂದು. ಈ ಅಧ್ಯಾಯದಲ್ಲಿ ವಿಶ್ವಧರ್ಮಕ್ಕೆ ಅವರು ಕೊಡಮಾಡಿದ ಕೊಡುಗೆಯನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಧರ್ಮಜಿಜ್ಞಾಸೆಯು ತತ್ತ್ವಶಾಸ್ತ್ರದ ಒಂದು ಅಂಗವಾಗಿದೆ. ಇಲ್ಲಿ ತತ್ತ್ವಶಾಸ್ತ್ರವೆಂದರೆ 'ತತ್' ಅದು 'ತ್ವ' ತನ ಎಂಬ ಎರಡು ಭಾಗಗಳನ್ನುಳ್ಳ 'ತತ್ತ್ವ' ವೆಂಬ ಸಂಸ್ಕೃತ ಪದಕ್ಕೆ 'ಸಾರ',

---

* ದಿ. ೩. ೪. ೯೭ ರಂದು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಹುಲ್ಲಂಬೆ ಗ್ರಾಮದಲ್ಲಿ ಏರ್ಪಡಿಸಲಾದ ಪಂಡಿತ ಪ್ರಭಾನಂದರ ಮುಕ್ತಿದರ್ಶನ ಕುರಿತು ವಿಚಾರ ಸಂಕಿರಣದಲ್ಲಿ ಮಂಡಿಸಿದ ಲೇಖನ.

'ಸತ್ವ' ಮತ್ತು 'ಸತ್ಯ' ಎಂಬ ಅರ್ಥಗಳು ತಿಳಿದುಬರುತ್ತವೆ. ತತ್ತ್ವವೆಂಬುದಕ್ಕೆ ಯಾವುದೇ ರೀತಿಯ ಸಿದ್ಧಾಂತವೆಂದು ಸಾಮಾನ್ಯವಾಗಿ ಹೇಳಬಹುದು.

ಧರ್ಮವನ್ನು ವಿಚಾರ ಮತ್ತು ಆಚಾರವೆಂದು ವಿಭಾಗಿಸುವ ವಾಡಿಕೆಯಿದೆ. ಈಶ್ವರನೇ ಸೃಷ್ಟಿಕರ್ತ. ಆತ್ಮವು ದೇಹಕ್ಕಿಂತ ಭಿನ್ನವಾದದ್ದು. ಮೋಕ್ಷವೆಂಬುದು ಎಲ್ಲರಿಗೂ ಸಾಧ್ಯವೆಂಬ ನಂಬಿಕೆಗಳೆಲ್ಲ ತತ್ತ್ವ ಅಥವಾ ಸಿದ್ಧಾಂತವೆನಿಸಿಕೊಳ್ಳುವವು. ಈ ನಂಬಿಕೆಗಳನ್ನು ತಿಳಿಸುವ ಗ್ರಂಥವೇ ತತ್ತ್ವಶಾಸ್ತ್ರ ಗ್ರಂಥವೆಂದು ನಾವು ತಿಳಿಯಬಹುದಾಗಿದೆ. ಅಂದರೆ ಧಾರ್ಮಿಕ ಸಿದ್ಧಾಂತಗಳನ್ನು ಅಧ್ಯಯನ ಮಾಡುವ ಶಾಸ್ತ್ರವೇ ತತ್ತ್ವಶಾಸ್ತ್ರವೆಂದು ಕೆಲವರು ತಿ ಳಿಯುತ್ತಾರೆ. ಆದರೆ ಎಲ್ಲದಕ್ಕೂ ಸಮರ್ಥನೆ ಬೇಕೆಂಬುದನ್ನು ನಾವು ಗಮನಿಸಿದಾಗ ಈ ಮೇಲೆ ಹೇಳಿದ ತಿಳಿವಳಿಕೆ ತಪ್ಪಾಗ ಬಹುದು. ಇದು ಚರ್ಚಾಸ್ಪದ ವಿಷಯವಾದ್ದರಿಂದ ಹೆಚ್ಚಿಗೆ ಇಲ್ಲಿ ಹೇಳಲು ಸಾಧ್ಯವಿಲ್ಲ. ಆದರೆ ನಿಷ್ಪಕ್ಷಪಾತವಾದ ಚರ್ಚೆ ತತ್ತ್ವಶಾಸ್ತ್ರದ ಲಕ್ಷಣಗಳಲ್ಲಿ ಒಂದೆಂಬುದನ್ನು ನಾವು ಅಲಕ್ಷಿಸಲಾಗದು.

ತತ್ತ್ವವನ್ನು ಭೌತ ಹಾಗೂ ಜೀವವಿಜ್ಞಾನಗಳ ಸಿದ್ಧಾಂತಗಳಿಗೂ, ಅರ್ಥಶಾಸ್ತ್ರ, ರಾಜಕೀಯ ಶಾಸ್ತ್ರ ಮೊದಲಾದ ಸಮಾಜ ವಿಜ್ಞಾನಗಳ ಸಿದ್ಧಾಂತಗಳಿಗೂ ಅನ್ವಯಿಸುವು ದುಂಟು.

ತತ್ತ್ವವೆಂಬ ಪದಕ್ಕೆ ನೀತಿ ನಿಯಮವೆಂದೂ ನಾವು ಬಳಸುವ ವಾಡಿಕೆಯಿದೆ. ಆದರೆ ಇದು ಇದರ ನಿಜವಾದ ಅರ್ಥವಲ್ಲ. ತತ್ತ್ವಶಾಸ್ತ್ರಕ್ಕೆ ದರ್ಶನವೆಂದೂ ಕರೆಯಲಾಗಿದೆ. ದರ್ಶನವೆಂದರೆ ತೋರಿಸಿಕೊಳ್ಳುವುದು, ನೋಡುವುದು ಎಂಬ ಅರ್ಥಗಳಿದ್ದರೂ ಯೋಗಿಯು ಮಾತ್ರ ಯೋಗ ಪ್ರತ್ಯಕ್ಷದಲ್ಲಿ ತನ್ನ ಒಳಗಣ್ಣಿನಿಂದ ನೋಡಿದ್ದಕ್ಕೆ ಮಾತ್ರ ದರ್ಶನವೆಂದು ಕರೆದ ಅರ್ಥ ಸಮರ್ಪಕ ವಾಗುವುದು. ದಾರ್ಶನಿಕನು ತನ್ನ ಇಂದ್ರಿಯಾನುಭವವನ್ನು ಅವಲಂಬಿಸಬೇಕಾಗುತ್ತದೆ. ವಿಜ್ಞಾನಿ ತನ್ನ ಅವಲೋಕನ ಮತ್ತು ಪ್ರಯೋಗಗಳಿಗೆ ಅವಲಂಬಿಸಬೇಕಾಗುತ್ತದೆ. ಹೀಗಾಗಿ ದಾರ್ಶನಿಕನು ಒಟ್ಟಾರೆಯಾಗಿ ಚಿಂತನೆಗೆ ಒತ್ತುಕೊಡುತ್ತಾನೆ.

> "Philosophy is (the way of) thinking;
> Yoga is (the way of) doing;
> Realization is (the way of) undoing"

ಎಂದು ಒಬ್ಬ ಮಹಾದಾರ್ಶನಿಕರು ಹೇಳಿದ್ದನ್ನು ಸ್ಮರಿಸಬಹುದು.

ಭಯಂಕರ ಬಿರುಗಾಳಿ, ಚಂಡಮಾರುತ, ಅಸಂಖ್ಯಾತ ನಕ್ಷತ್ರ, ಪ್ರಕೃತಿಯ ವಿಚಿತ್ರ ವಿಸ್ಮಯ, ಸೂರ್ಯಾಸ್ತ, ಸೂರ್ಯೋದಯ, ಕಾಮನಬಿಲ್ಲು, ಸುಖ -ದುಃಖಗಳ ಅನುಭವವನ್ನು ಕಂಡಾಗ ನಮ್ಮ ಜೀವನ ಹಾಗೂ ವಿಶ್ವದ ಬಗೆಗೆ ನಮಗೆ ಎಲ್ಲಿಲ್ಲದ ಕುತೂಹಲ ವುಂಟಾಗುವುದು. ಆಗ ವಿಶ್ವವೆಂದರೇನು? ಧರ್ಮವೆಂದರೇನು? ವಿಶ್ವಾರ್ಥವೆಂದರೇನು? ಇದೆಲ್ಲ ಯಾಕೆ ಇವೆ ? ಇದು ಹೇಗೆ ನಡೆಯುತ್ತದೆ? ನಮ್ಮ ಜೀವನದ ಉದ್ದೇಶವೇನು? ಮುಂತಾದ ನೂರಾರು ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ.

ವಿಶ್ವದ ರಹಸ್ಯ, ಮೂಲಗಳನ್ನು ತಿಳಿಯಲಾಗದು. 'ನ ಮನೋ ಗಚ್ಛತಿ ನ ವಾಕ್' ಪಶ್ಯತ್ಯಚಕ್ಷುಃ ಮೊದಲಾಗಿ ಆ ಶಕ್ತಿಯನ್ನು ವಿವರಿಸಲಾಗಿದೆ.

ಯಾವುದಾದರೂ ವಿಷಯವನ್ನು ತಲೆಗೆ ಹಚ್ಚಿಕೊಂಡರೆ ತ್ರಾಸು. ಯಾವುದಾದರೂ ವಿಷಯವನ್ನು ತಲೆಗೆ ಹಚ್ಚಿಕೊಳ್ಳದಿದ್ದರೆ ಆರಾಮ ಇರಬೇಕು, ಇಲ್ಲದಂತಿರಬೇಕು. ಈಸಬೇಕು, ಜಯಿಸಬೇಕು ಇತ್ಯಾದಿ ನುಡಿಗಳನ್ನು ಕೇಳುತ್ತೇವೆ. ಇರಲಿ.

ಧರ್ಮವೆಂದರೇನು ? ಧರ್ಮವೆಂಬುದು ಒಂದು ದೇಶದ ಆಡಳಿತವಲ್ಲ. ಧರ್ಮವೆಂದರೆ ಮಾನವ ಜೀವನದ ಒಂದು ಬಹು ಮುಖ್ಯವಾದ ಅವಿಭಾಜ್ಯ ಅಂಗ. ಧರ್ಮವೆಂದರೆ ಕರ್ತವ್ಯ, ಮಾಡಬೇಕಾದ ಕೆಲಸ. ನಾವು ಅದನ್ನು ಮಾಡಿದರೆ ಅದು ನಮ್ಮನ್ನು ರಕ್ಷಿಸುತ್ತದೆ. 'ಧರ್ಮೋ ರಕ್ಷತಿ ರಕ್ಷಿತಃ ' ವೆಂದು ಸಾರಿದೆ.

ಸ್ವರ್ಗದ ಆಸೆ, ನರಕದ ಭಯಗಳಲ್ಲಿ ಹುಟ್ಟುವುದೇ ಧರ್ಮ. ಇದು ಬೋಧಿಸುವ ಮಹಾನ್ ತತ್ವಗಳಿಂದಾಗಿ ಅದು ಶ್ರೇಷ್ಠವೆನಿಸಿಕೊಳ್ಳುವುದೇ ಹೊರತು ಬಹಳ ಜನ ಅದನ್ನು ಅನುಸರಿಸುವರೆಂಬ ಕಾರಣದಿಂದ ಅದು ಶ್ರೇಷ್ಠಧರ್ಮವಾಗಲಾರದು. ಇದು ಚರ್ಚಾಸ್ಪದ ವಿಷಯ. ಆದರೂ ಆಚಾರನಿಷ್ಠರಾಗಿ ಪಾಲಿಸಿ ಶ್ರೇಷ್ಠ ಧ್ಯೇಯದತ್ತ ಸಾಗಬಲ್ಲುದೇ ಶ್ರೇಷ್ಠ ಧರ್ಮವೆಂದು ಸಾಮಾನ್ಯವಾಗಿ ಹೇಳಬಹುದು.

ಧರ್ಮವೆಂಬುದಕ್ಕೆ, ಹೋಲಿಕೆಯನ್ನು ಕೊಡಲಾಗಿದೆ. 'ಸಿಹಿಯಾಗಿರುವುದು ಸಕ್ಕರೆಯ ಧರ್ಮ,' 'ಸುಡುವುದು ಬೆಂಕಿಯ ಧರ್ಮ' ಹೀಗೆ ಅನೇಕ ಪದಾರ್ಥಗಳು ತಮ್ಮ ಗುಣಧರ್ಮವನ್ನು ವ್ಯಕ್ತಗೊಳಿಸುವುದೇ ಧರ್ಮವೆಂದು ಅರಿಯಲಾಗಿದೆ.

ಈ ಧರ್ಮದಲ್ಲಿ ಅಥವಾ ಪ್ರತಿಯೊಂದು ಧರ್ಮದಲ್ಲಿ ಒಂದು ಸ್ಪಷ್ಟವಾದ ಅಥವಾ ಅಸ್ಪಷ್ಟವಾದ ವಿಶ್ವದೃಷ್ಟಿಯಿರುತ್ತದೆಯೆಂದು ಬಹು ಜನರು ತಿಳಿಯುತ್ತಾರೆ ಅಥವಾ ನಂಬುತ್ತಾರೆ.

ನಂಬಿಕೆ ಬಹು ದೊಡ್ಡ ಧರ್ಮ. ಮಗನ ತಂದೆಯ ವಿಷಯದಲ್ಲಿ ತಾಯಿಯು ಹೇಳುವ ವಿಷಯವೇ ನಂಬಿಕೆ.

ಜೇಮ್ಸ್ ಮಾರ್ಟಿನೊ, 'ಪ್ರಪಂಚವನ್ನು ನಿಯಂತ್ರಿಸುವ ಹಾಗೂ ಮಾನವನೊಡನೆ ನಿತ್ಯಾತ್ಮಕವಾದ ಸಂಬಂಧಗಳನ್ನು ಇಟ್ಟುಕೊಂಡಿರುವ ಬುದ್ಧಿ ಹಾಗೂ ಸಂಕಲ್ಪವುಳ್ಳ ಶಾಶ್ವತವಾದ ಈಶ್ವರನಲ್ಲಿ ನಂಬಿಕೆಯೇ ಧರ್ಮ' ಎಂದು ಹೇಳಿದರು.

ಹರ್ಬರ್ಟ್ ಸ್ಪೆನ್ಸರ್, 'ಎಲ್ಲ ವಸ್ತುಗಳೂ ನಮ್ಮ ಬುದ್ಧಿಗೆ ನಿಲುಕದ ಶಕ್ತಿಯೊಂದ ರಿಂದಾಗಿ ವ್ಯಕ್ತವಾಗಿವೆ ಎಂಬ ಅರಿವೇ ಧರ್ಮ' ಎಂದು ಹೇಳಿದರು.

ಮ್ಯಾಕ್ಸ್ ಮ್ಯೂಲ್ಲರ್, 'ಅನಂತವನ್ನು ಗ್ರಹಿಸಲು ಮನುಷ್ಯನಿಗೆ ಸಹಾಯಕವಾಗುವ ಒಂದು ಮಾನಸಿಕ ಶಕ್ತಿ ಅಥವಾ ಮಾನಸಿಕ ಸ್ಥಿತಿಯೇ ಧರ್ಮ' ಎಂದು ಹೇಳಿದರು.

ಜೆ. ಜೆ. ಫ್ರೀಜರ್ 'ಪ್ರಕೃತಿಯ ಹಾಗೂ ಮಾನವ ಜೀವನದ ಗತಿಗೆ ಮಾರ್ಗದರ್ಶನ ನೀಡುವ ಹಾಗೂ ಅವುಗಳನ್ನು ನಿಯಂತ್ರಿಸುವ ಯಾವ ಮಾನವಾತೀತ ಶಕ್ತಿಗಳಿವೆಯೋ ಅವುಗಳನ್ನು ಸುಪ್ರೀತಗೊಳಿಸುವ ಅಥವಾ ಅವುಗಳೊಡನೆ ರಾಜಿ ಮಾಡಿಕೊಳ್ಳುವ ಕಾರ್ಯಕ್ಕೆ ಧರ್ಮವೆಂದು' ಕರೆಯಬಹುದು ಎಂದು ಹೇಳಿದ್ದಾರೆ.

ಇಮ್ಯಾನುಲಿಲ್ ಕಾಂಟೆ, 'ನಮ್ಮ ಪ್ರತಿಯೊಂದು ಕರ್ತವ್ಯವನ್ನು ಈಶ್ವರನ ಆಜ್ಞೆಯೆಂದು ಮನಗಾಣುವುದೇ ಧರ್ಮ' ಎಂದು ಮೊದಲಾಗಿ ಅನೇಕರು ಅನೇಕ ರೀತಿಯಾಗಿ ಹೇಳಿದ್ದಾರೆ.

ಪ್ರತಿ ಧರ್ಮದಲ್ಲಿಯೂ ಜ್ಞಾನ (ನಂಬಿಕೆ), ನೀತಿ (ಮೌಲ್ಯ) ಮತ್ತು ಭಾವ (ಸಂವೇಗ)ಗಳೆಂಬ ಮೂರು ಅಂಶಗಳನ್ನು ಗುರುತಿಸಬಹುದು.

ಈಶ್ವರನು ವಿಶ್ವಾತೀತನಷ್ಟೇ ಅಲ್ಲ, ಅಂತರ್ಯಾಮಿಯೂ ಹೌದು. ಅವನನ್ನು ಸೇವಿಸುವುದೇ ವಿಶ್ವಧರ್ಮ.

ಈಶ್ವರನ ಪ್ರಾಪ್ತಿಗಾಗಿ ವಿಶಿಷ್ಟ ವಸ್ತುಗಳನ್ನು, ಸ್ಥಳಗಳನ್ನು ಪವಿತ್ರವೆಂದು ಭಾವಿಸುವುದೇ ಧರ್ಮದ ಶ್ರೇಷ್ಠ ಆದರ್ಶ.

ಈಶ್ವರನ ಪ್ರಾಪ್ತಿಗಾಗಿ ಪೂಜೆಗಳಿಗೆ ಮಹತ್ವವಿದೆ. ಈಶ್ವರನ ಪ್ರಾಪ್ತಿಗಾಗಿ ನೈತಿಕ ಆಚರಣೆಗೆ ಮಹತ್ವವಿದೆ. ಪಡೆದವ ಕಳೆದುಕೊಂಡವ ಇಬ್ಬರೂ ಅಸಂತುಷ್ಟಿಗಳಾಗುವರು.

ಈಶ್ವರನ ಪ್ರಾಪ್ತಿಗೆ ಧಾರ್ಮಿಕ ಗ್ರಂಥಗಳು ಮಹತ್ವವಾಗುತ್ತವೆ. ಇನ್ನು ವಿಶ್ವಧರ್ಮದ ಕೆಲವು ಅಂಶಗಳನ್ನು ನಾವಿಲ್ಲಿ ಗಮನಿಸಬಹುದು.

ವಿನಾಶದ ಹಾದಿಯತ್ತ ಸಾಗುತ್ತಿದ್ದ ಹಳೆಯ ಧರ್ಮವನ್ನು ಸುಧಾರಿಸಲು ಧರ್ಮ ಜಿಜ್ಞಾಸುಗಳು ಮಾಡಿದ ಪ್ರಯತ್ನದ ಫಲವೇ ವಿಶ್ವಧರ್ಮ.

೧. Love is god ಪ್ರೀತಿಯೇ ಈಶ್ವರನೆಂದು ಕ್ರೈಸ್ತ ಧರ್ಮ ಹೇಳಿದೆ.
   Brotherhood is God- ಸಹೋದರ ಭಾವನೆಯೇ ದೇವರು ಎಂದು ಕ್ರೈಸ್ತಧರ್ಮ ಹೇಳಿದೆ.

೨. ಅಲ್ಲಾಹನೇ ಶ್ರೇಷ್ಠವೆಂದು ಏಕೇಶ್ವರ ವಾದವನ್ನು ಮಹಮ್ಮದ ಪೈಗಂಬರ ಸಾರಿದರು. ಅದನ್ನು ಇಸ್ಲಾಂ ಮತೀಯರು ಒಪ್ಪಿದರು.

೩. ಈಶ್ವರನು ಜಗದೊಡೆಯನಾದ್ದರಿಂದ ಒಂದು ಬಣಕ್ಕೆ ಅಥವಾ ರಾಷ್ಟ್ರಕ್ಕೆ ಸೀಮಿತಗೊಳಿಸಲಾಗದು. ವಿಶ್ವಧರ್ಮಕ್ಕೆ ಭೌಗೋಳಿಕ ಸೀಮೆಯಿಲ್ಲ.

೪. ಜನಸೇವೆಯೇ ಜನಾರ್ಧನ ಸೇವೆ ಎಂಬ ಸಿದ್ಧಾಂತವು ಭಕ್ತಿಯ ಅಂಗವಾಗಿ ಬೆಳೆದು ವಿಶ್ವ ಧರ್ಮದ ಜೀವಾಳವಾಯಿತು.

೫. ವೈಯಕ್ತಿಕ ಅಧ್ಯಾತ್ಮಿಕ ಪ್ರಗತಿ ವಿಶ್ವಧರ್ಮದ ಪ್ರಮುಖ ಲಕ್ಷಣ.

೬. ಪರಲೋಕ ಸುಖ(ಸ್ವರ್ಗದ ಸುಖ)ವೇ ನಮ್ಮ ಧಾರ್ಮಿಕ ಜೀವನದ ಗುರಿಯಾಗಿದೆಯೆಂಬುದು ಶ್ರೇಷ್ಠರ ವಿಶ್ವಧರ್ಮದ ಸಿದ್ಧಾಂತವಾಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ 'ಮುಕ್ತಿದರ್ಶನ' ದ ಕೃತಿಕಾರರಾದ ಪಂಡಿತ ಪ್ರಭಾನಂದರು ವಿಶ್ವಧರ್ಮದ ವಿಚಾರವಾಗಿ ಈ ರೀತಿ ಹೇಳಿ ತಮ್ಮ ಕೊಡುಗೆ ನೀಡಿದ್ದಾರೆ.

ಇವರ 'ದರ್ಶನ' ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸಿದ ತಾತ್ವಿಕ, ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಕಲುಷಿತಗೊಂಡ ಮೌಲ್ಯಗಳನ್ನು ಕಿತ್ತೆಸೆದ ಒಂದು ಆಂದೋಲನಕಾರಕ ಕೃತಿಯಾಗಿದೆ.

ಮಾನವಜಾತಿ ಒಂದೇ ಆಗಿದೆ. ಮಾನವಧರ್ಮ ಒಂದೇ ಆಗಿದೆ. ಜಾತಿ ಭೇದ, ವರ್ಣಭೇದ, ವರ್ಗಭೇದ, ಧರ್ಮಭೇದ, ದೇಶಭೇದರಹಿತವಾಗಿರುವ ವಿಶ್ವಧರ್ಮ ಸ್ವರೂಪ ವಾಗಿದೆ. ಈ 'ಮುಕ್ತಿ ದರ್ಶನ' ಕೃತಿ ಅವರ ಕೊಡುಗೆ.

ಏಕಾಂತವಾಸಿಗಳಾಗಿದ್ದ ಶ್ರೀಸಿದ್ಧರಾಮಯ್ಯನವರು ತ್ರಿಭಾಷಾ ಪಂಡಿತರಾಗಿದ್ದು ವೀರಶೈವ ಮತದ ಶಿವಾಚಾರ ಪದ್ಧತಿಯ ಪ್ರಕಾರ ನೈಷ್ಠಿಕ ಬ್ರಹ್ಮಚರ್ಯವನ್ನು ಪಾಲಿಸಿಕೊಂಡು ಬಂದು ವೇದ, ದರ್ಶನ, ವೇದಾಂತಗಳ ಅಧ್ಯಯನ ಮಾಡಿ ಧ್ಯಾನಯೋಗ ಸಾಧನೆ ಮಾಡಿ ಆತ್ಮವು ಜ್ಞಾನಸಾಗರವೆಂಬುದನ್ನು ಅನುಭವಿಸಿ, ಅನಂತರ ಲೋಕದ ಇರುವನ್ನು ಅರಿತು ನೈಷ್ಠಿಕ ಬ್ರಹ್ಮಚರ್ಯವು ಪ್ರಕೃತಿಗೆ ಅಸಂಗತವಾದುದೆಂದು ಬಗೆದು ಗೃಹಸ್ಥಧರ್ಮವನ್ನು ಸ್ವೀಕರಿಸಿ, ರಾಜಯೋಗವನ್ನು ಆಚರಿಸಿ ಚಿತ್ಪ್ರಭೆಯ ದರ್ಶನದಿಂದುಂಟಾದ ಅಲೌಕಿಕಾನಂದವನ್ನು ಅನುಭವಿಸಿ ಪ್ರಭಾನಂದವೆಂದು ಹೆಸರಿಸಿಕೊಂಡರು.

ಇವರೊಬ್ಬ ಕ್ರಾಂತಿಕಾರಿ ಕವಿಗಳು. ಸಾಮಾಜಿಕ ಸಮತಾದರ್ಶನದ ತತ್ತ್ವ ಎತ್ತಿ ಹಿಡಿದರು. ಜಾತಿ, ಮತ, ಕುಲ, ಗೋತ್ರಗಳನ್ನು ಪುಡಿ ಪುಡಿ ಮಾಡಿ ಮಾನವೀಯ ಧರ್ಮವನ್ನು ಸಾಧಿಸಿದ ಅವರ ಕೊಡುಗೆ ವಿಶ್ವಮಾನ್ಯ. ಆದ್ದರಿಂದ ಅವರೊಬ್ಬ 'ವಿಶ್ವಧರ್ಮಿ'ಯೆಂದು ಸ್ವೀಕಾರಾರ್ಹರಾಗಬಲ್ಲರು. ಆ ಮೂಲಕ ಧರ್ಮಾತೀತ ತತ್ತ್ವವನ್ನು ಸಾರಬಲ್ಲವರೆಂದು ಹೇಳಬಹುದಾಗಿದೆ.

ಓಂ ತತ್‌ಸತ್, ಸತ್ಯಂ ಶಿವಂ ಸುಂದರಮ್, Love is God ಜೀವನೊಬ್ಬ ನಾಮ ಹಲವು, ಲಾ ಇಲಾಹೆ ಇಲ್ಲಲ್ಲಾಹ, ಜ್ಞಾನಮೇವ ಗುರುಃ ಸಾಕ್ಷಾತ್ ಸಾಮರಸ್ಯ ಜೀವನಂ, ಓಂ ಶಾಂತಿಃ ಶಾಂತಿಃ ಶಾಂತಿಃ - ಈ ಮಂತ್ರವು ವಿವಿಧ ಧರ್ಮಗ್ರಂಥಗಳಿಂದ ಆಯ್ದ ಪ್ರಮುಖ ವಾಕ್ಯಗಳ ಸಂಕಲನವಾಗಿದೆಯಾದರೂ ಇಲ್ಲಿ ನವೀನತೆಯಿದೆ. ದೇಶ ಭೇದ, ಭಾಷಾಭೇದ, ಜಾತಿಭೇದ ಮತ್ತು ವರ್ಗಭೇದಗಳನ್ನು ತೆಗೆದುಹಾಕಿದ ಉದ್ದೇಶವಿಲ್ಲಿದೆ.

ಮಾನವರೆಲ್ಲರೂ ತಮ್ಮ ಬಾಂಧವರು ಮತ್ತು ಪ್ರಪಂಚವೆಲ್ಲ ತಮ್ಮ ಮನೆಯೆಂದು (ವಸುದೈವ ಕುಟುಂಬಕಂ) ನಂಬಿದ ವಿಶ್ವಕುಂಟುಂಬಗಳು "ನ ಹಿಂದುರ್ನಜೈನಶ್ಚ ನ ಬೌದ್ಧೋ ನಾಪಿ ಮುಸ್ಲಿಮಃ ಕ್ರೈಸ್ತೋ ನಾಪಿ ನ ಚಾರ್ವಾಕೋ ಧರ್ಮಾತೀತೋ ನರೋತಿಸ್ತ್ವಹಮ್" ನಾನು

ಹಿಂದು ಧರ್ಮದವನಲ್ಲ, ಜೈನನಲ್ಲ, ಬೌದ್ಧನಲ್ಲ, ಮುಸಲ್ಮಾನನಲ್ಲ, ಕ್ರೈಸ್ತನಲ್ಲ ಮತ್ತು ನಾಸ್ತಿಕನಾದ ಚಾರ್ವಾಕನೂ ಅಲ್ಲ. ಆದರೆ ಧರ್ಮಾತೀತ ಮನುಷ್ಯನಾಗಿದ್ದೇನೆ.

ನಾಹಂ ಶೈವೋ ನ ಶಾಕ್ತಶ್ಚ ನ ಸ್ಮಾರ್ತೋ ನೈವ ವೈಷ್ಣವಃ ।
ತ್ಯಕ್ತ್ವಾ ವಿವಾದ ಬೇಜಾನಿ ಮತಾನ್ಯಸ್ಮಿ ಮತಾತಿಗಃ ॥

ನಾನು ಶೈವನಲ್ಲ, ಶಾಕ್ತನಲ್ಲ, ಸ್ಮಾರ್ತನಲ್ಲ, ವೈಷ್ಣವನೂ ಅಲ್ಲ. ಮತಗಳ ವಿವಾದಾತ್ಮಕ ಬೀಜಗಳನ್ನು ಮೀರಿದ ಮತಾತೀತನು.

ಮಾನವಾ ಮಾಯಕಾಸ್ಸರ್ವೇ ಸರ್ವೇಕ್ಷಾಮಹಮಸ್ಮಿ ಚ ।
ಮಮಾಸ್ತಿ ನ ಪರಃ ಕಚ್ಚಿತ್ ಪರಶ್ಚಾಹಂ ಕಸ್ಯಚಿತ್ ॥

ಮನುಷ್ಯರೆಲ್ಲರೂ ನನ್ನವರು. ನಾನು ಎಲ್ಲರವನು. ನನಗೆ ಪರರಾರೂ ಇಲ್ಲ. ಯಾರಿಗೂ ನಾನು ಪರನಲ್ಲ 'ಎಲ್ಲರಿಗೂ ನನಗಾಗಿ, ನಾನು ಎಲ್ಲರಿಗಾಗಿದ್ದೇನೆ'.

ಬಾಂಧವಾಹಿ ನರಾಸ್ಸರ್ವೇ ವಿಶ್ವಂ ಚೈತದ್ ಗ್ರಹಂ ಮಮ ।
ಇತಿ ಭಾವಯತೋನಾಸ್ತಿ ಲೋಕಸ್ವಾನ್ಯತೆ ಕಲ್ಪನಾ ॥

ಮಾನವರೆಲ್ಲ ನನಗೆ ಬಂಧುಗಳು. ಸಮಸ್ತ ವಿಶ್ವವೇ ನನ್ನ ಮನೆ. ಹೀಗೆ ಭಾವಿಸುವ ನನಗೆ ಈ ಲೋಕದಲ್ಲಿ ನನ್ನವರು ಪರರು ಯಾರೂ ಇಲ್ಲ.

ಧರ್ಮ ಗ್ರಂಥಾಶ್ಚ ಸರ್ವೇವೈ ಸರ್ವೇಧರ್ಮಪ್ರವರ್ತಕಾಃ ।
ವಿಭಿನ್ನ ಧರ್ಮ ವರ್ಗೀಯಾ ಮಾಮಕಾ ಇತಿ ಭಾವಯೇತ್ ॥

ಬೇರೆಬೇರೆ ಧರ್ಮ ಗ್ರಂಥಗಳೂ ಮತ್ತು ಅವುಗಳ ಪ್ರವರ್ತಕರೂ ಬೇರೆ ಬೇರೆ ಧರ್ಮರೂಪ ವರ್ಗದವರೂ ನನ್ನವರೆಂದು ಭಾವಿಸಬೇಕು. (ವಿಶ್ವ ಬಂಧುತ್ವದ ನುಡಿ.)

ಕದಾಪಿ ತೇಷು ಕುರ್ವೀತ ನಾಧರ್ಮೋತ್ತಮ ಭಾವನಾಮ್ ।
ಪರಂ ತದುದಿತಾನ್ ಧರ್ಮಾನೆ ಮುಕ್ತಿದರ್ಶನ ಸಮ್ಮತಾನ್ ॥
ಬುಧ್ಯಾ ವಿವಚ್ಯಾ ಗ್ರಹ್ನೀಯಾನ್ನ ವಿರುದ್ಧಾನ್ ಕದಾಚನ

ಧರ್ಮಪ್ರವರ್ತಕರಲ್ಲಿ ಇವರು ಅಧಮರು, ಉತ್ತಮರೆಂದು ಭೇದವೆಣಿಸಬಾರದು. ಮುಕ್ತಿದರ್ಶನಕ್ಕೆ ಸಮ್ಮತವಾದ ಧರ್ಮ ಇಲ್ಲವೆ ಆಚಾರ ವಿಚಾರಗಳನ್ನು ತನ್ನ ಬುದ್ಧಿಯಿಂದ ನಿರ್ಧರಿಸಿ ಗ್ರಹಿಸಬೇಕು.

ಅಧರ್ಮವೆಂಬುದನ್ನು ಹೇಳಲು ಮತ್ತೆರಡು ನುಡಿಗಳನ್ನು (ಪುಟ ೩೪೨) ಅವರು ಹೇಳಿದ್ದಾರೆ. ಅದರ ಉಲ್ಲೇಖ ಬೇಡ ಈಗ.

ಸಮಷ್ಟಿರುತ್ಯತೇ ಧರ್ಮಸ್ಸದಾಚಾರ ವಿಚಾರಯೋಃ ।
ತಮೇವ ಜಾತಿಂ ವರ್ಗಂ ವಾ ಮನ್ಯತೇ ಮೂರ್ಖ ಮಾನವಾಃ ॥

ಸದಾಚಾರ ವಿಚಾರಗಳ ಸಮಷ್ಟಿಯೇ ಧರ್ಮವೆಂದು ಹೇಳಲ್ಪಟ್ಟಿವೆ. ಅದನ್ನೇ ಮೂರ್ಖರು ಜಾತಿಯೆಂತಲೂ ವರ್ಗವೆಂತಲೂ ತಿಳಿಯುತ್ತಾರೆ.

ಪಾರಿಶುದ್ಧ್ಯಮಹಿಂಸಾ ಚ ಸತ್ಯನಿಷ್ಠಾ ಪರಿಗ್ರಹಃ ।
ಆಸನಂ ಪ್ರಾಣರೋಧಶ್ಚ ಸಂಯಮಃ ಶ್ರಮಜೀವನಮ್ ॥
ದಾನಂ ಚ ವಿನಯೋಧ್ಯೈರ್ಯಮಾತ್ಮಜ್ಞಾನಂ ಚ ಚಿಂತನಮ್ ।
ಪರೋಪಕೃತಿರಿತ್ಯೇಷಾಂ ಸಮಷ್ಟಿರ್ಧರ್ಮ ಉಚ್ಯತೆ ॥

ಪರಿಶುದ್ಧತೆ, ಅಹಿಂಸಾ, ಸತ್ಯನಿಷ್ಠೆ, ಅಪರಿಗ್ರಹ, ಅಸನ್ತ, ಪ್ರಾಣಾಯಾಮ, ಸಂಯಮ, ಶ್ರಮಜೀವನ, ದಾನ, ವಿನಯ, ಧೈರ್ಯ, ಆತ್ಮಜ್ಞಾನ ಚಿಂತನ, ಪರೋಪಕಾರ ಇವೇ ಸಮಷ್ಟಿ ಧರ್ಮವೆಂದು ಹೇಳಲಾಗುತ್ತದೆ.

ಸದಾಚಾರ ಸದ್ವಿಚಾರಗಳ ಸಮಷ್ಟಿಯೇ ಧರ್ಮವೆಂಬುದು ಇಲ್ಲಿ ಹೇಳಲಾಗಿದೆ. ಅನೇಕ ಇಂಥ ಮಾತುಗಳನ್ನು ಹೇಳಿದ್ದಾರೆ.

'ಅರಿವೇ ಗುರುವು ಮತ್ತು ಅರಿವೇ ದೇವರು'
'ನರನು ನರನಿಗೆ ಗುರುವಲ್ಲ, ಮಾರ್ಗದರ್ಶಕನು'
'ಗುರು ಪದವು ದೇವರಿಗೆ ಮಾತ್ರ ಮೀಸಲಾದದ್ದು'
'ಅರುರೂಪ ಪರಮಾತ್ಮನೇ ಗುರುವು ಸರ್ವಾಂತರ್ಯಾಮೀ'
'ಜ್ಞಾನರೂಪನಾಗಿ ಸಕಲರ ಹೃದಯದಲ್ಲಿ ವಾಸವಾಗಿದ್ದಾನೆ'
'ಜೀವರಾಶಿಗಳು ಪರಮಾತ್ಮನ ಅವತಾರಗಳು'
'ಕಾಲಿಲ್ಲದೇ ಚಲಿಸುತ್ತಾನೆ, ಕಣ್ಣಿಲ್ಲದೇ ನೋಡುತ್ತಾನೆ,
ಕೈಯಿಲ್ಲದಿದ್ದರೂ ಕೊಡುತ್ತಾನೆ, ಕಿವಿಯಿಲ್ಲದೇ ಕೇಳುತ್ತಾನೆ,
ಮನವಿಲ್ಲದೇ ಅರಿಯುತ್ತಾನೆ, ಪ್ರಾಣಹೀನನಾದರೂ ಜೀವಿಸಿರುತ್ತಾನೆ'

ಎಂದೆಲ್ಲ ಅನೇಕವಾಗಿ ಹೇಳಿದ್ದಾರೆ.

'ರಾಷ್ಟ್ರಂ ರಕ್ಷತಿ ಶುದ್ಧಾತ್ಮ ಯೋಗಿಜಯತಿ ಲೌಕಿಕಮ್'

ಶುದ್ಧಾತ್ಮನಾದ ಯೋಗಿಯು ರಾಷ್ಟ್ರವನ್ನು ರಕ್ಷಿಸುತ್ತಾನೆ ಮತ್ತು ಲೌಕಿಕ ವ್ಯವಹಾರವನ್ನು ಗೆಲ್ಲುತ್ತಾನೆ ಎಂದು ಹೇಳಿದ ಮಾತು ಮಹತ್ವದ್ದಾಗಿದೆ.

ಗೃಹಸ್ಥನಾದ ಕಾಯಕಜೀವಿಗೆ ಬೇಗನೇ ಯೋಗಸಿದ್ಧಿಯು ದೊರೆಯುವುದು. ಆ ಮೂಲಕ ಅವನಿಗೆ ವಿಶ್ವಾತ್ಮಭಾವವು ಮೂಡುವುದು.

ಭುವನಂ ಭವನಂ ಮೇ ತು ಬಾಂಧವಾ ಸರ್ವಮಾನವಾಃ ।
ಇತ್ಯೇವಂ ಬಾವಯನ್ ಮರ್ತ್ಯೋ ಯೋಗಸಿದ್ಧಿಮವಾಪ್ಯತಿ ॥

-ಹೀಗೆ ಅವರು ಗೃಹಸ್ಥರೂ, ಕಾಯಕಜೀವಿಗಳೂ ಆಗಿ ಯೋಗಸಿದ್ಧಿ ಪಡೆದು ಆ ಮೂಲಕ ವಿಶ್ವಾತ್ಮಭಾವವನ್ನು ಹೊಂದಿದ್ದರು, ವಿಶ್ವಧರ್ಮೀಯರಾಗಿದ್ದರು. ವಿಶ್ವಧರ್ಮಕ್ಕೆ ತಮ್ಮ ಕಾಣಿಕೆ ನೀಡಿದರು.

ಅವರ ಮುಕ್ತಿದರ್ಶನದ ತತ್ತ್ವದ ಸಾಕ್ಷಾತ್ಕಾರಕ್ಕೆ ಧ್ಯಾನಯೋಗವೇ ಸೋಪಾನ. ಲಿಂಗಭೇದ, ಜಾತಿಭೇದ ಇಲ್ಲಿಲ್ಲ.

ಪಂಡಿತರು ಸಮಸ್ತ ಧರ್ಮಗಳ ಸಾರಾಂಶವನ್ನು ಗ್ರಹಿಸಿ 'ವಿಶ್ವಧರ್ಮ' ವೆಂಬ ಉತ್ತಮ ಮಹಾಗ್ರಂಥವನ್ನು ರಚಿಸಬೇಕೆಂದು ಸೂಚಿಸಿದರು. ಈ ನುಡಿಯಲ್ಲಿ

ವಿಶ್ವರ್ಮಿಣೀಯ ಸದ್ಗ್ರಂಥ ಸಾರಮಾದಾಯ ಪಂಡಿತಾಃ
ರಚಯೇಯುರ್ಮಹಾಗ್ರಂಥಂ ವಿಶ್ವಧರ್ಮಾಖ್ಯಮುತ್ತಮಮ್

ಲೋಕಕಲ್ಯಾಣವನ್ನು ಬಯಸುವ ಸರ್ವರೂ ಧರ್ಮಾತೀತರಾಗಬೇಕೆಂದು ಕೈಯೆತ್ತಿ ಪುನಃ ಪುನಃ ಸಾರಿ ಹೇಳುತ್ತೇನೆಂದರು.

ಅತೋಹಂ ಹಸ್ತಮದ್ಯಮ್ಯ ಘೋಷಯಾಮಿ ಪುನಃ ಪುನಃ
ಸರ್ವೇಧರ್ಮಾತಿಗೈರ್ಭಾವ್ಯಂ ಲೋಕಕಲ್ಯಾಣಂ ಕಾಂಕ್ಷಿಭೇಃ

ಹೀಗೆ ಪಂಡಿತರೂ ಆದ ಪ್ರಭಾನಂದರು 'ವಿಶ್ವಧರ್ಮಿಗಳು' ವಿಧವೆಯನ್ನು ಮದುವೆಯಾಗಿ ಆ ತಾಯಿಗೆ ಮುತ್ತೈದೆಯ ಭಾಗ್ಯ ನೀಡಿದ ಮಹಾಪುರುಷರು, ಆದರ್ಶ ಪುರುಷರು. ಲೋಕಕಲ್ಯಾಣಪುರುಷರು 'ಮುಕ್ತಿಯ ದರ್ಶನ' ವನ್ನು ನೀಡಲು 'ಮುಕ್ತಿದರ್ಶನ' ಗ್ರಂಥ ನೀಡಿದ ಪುಣ್ಯಪುರುಷರು.

●●

ಜಾವಳಿಯವರ ಕಾವ್ಯದಲ್ಲಿ ಸ್ತ್ರೀ

ಡಾ. ವಿಜಯಶ್ರೀ ಸಬರದ

ಹೈದರಾಬಾದ ಕರ್ನಾಟಕದ ಪ್ರಮುಖ ಕವಿಗಳಲ್ಲಿ ಶ್ರೀ ಶಿವಶರಣ ಪಾಟೀಲ ಜಾವಳಿಯವರು ಒಬ್ಬರಾಗಿದ್ದಾರೆ. ವಚನಕಾರರ ವಿಚಾರಗಳಿಗೆ ಪ್ರಭಾವಿತರಾದ ಹಾಗೂ ಚಾರಿತ್ರಿಕ ಒತ್ತಡಕ್ಕೆ ಒಳಗಾದ ಇವರ ಮನಸ್ಸು ಸೃಜನಶೀಲತೆಯ ಮಾರ್ಗವನ್ನು ಕಂಡುಕೊಂಡಿದೆ. ಸಮಕಾಲೀನ ಬದುಕಿಗೆ ಸ್ಪಂದಿಸಿದ ಕವಿಯ ಮೃದು ಮನಸ್ಸು ಕಾವ್ಯದಲ್ಲಿ ಗಟ್ಟಿಗೊಂಡಿದೆ. ಸೃಜನಶೀಲತೆ ಇವರ ಏಳು ಕವನ ಸಂಕಲನಗಳಲ್ಲಿ ಅರಳಿ ನಿಂತಿದೆ. ತಮ್ಮ ಸಮಕಾಲೀನ ಸಾಮಾಜಿಕ, ರಾಜಕೀಯ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ನೊಂದು ಹೊರಹಾಕಿದ ನಿಟ್ಟುಸಿರಿನ ನುಡಿಗಳೇ ಕವನಗಳಾಗಿ ರೂಪತಾಳಿವೆ. ಇವರ ಕವನಗಳಲ್ಲಿ ಬದುಕಿನ ಹಲವು ಮಗ್ಗಲುಗಳ ದರ್ಶನವಿದೆ. ಭ್ರಷ್ಟ ವ್ಯವಸ್ಥೆಯ ಬಗ್ಗೆ ಸಿಡಿದೇಳುವ ಕಾವುಯಿರದೆ ತಣ್ಣನೆಯ ಪ್ರತಿಭಟಿಸುವ ಭಾವವಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಬದುಕುವ ಹೆಣ್ಣಿನ ಬದುಕಿನ ಒಳನೋಟಗಳನ್ನು ಕವಿ ಗುರುತಿಸದೆ, ಸಾಂಪ್ರದಾಯಿಕ ಸಮಾಜವು ಪರಂಪರಾಗತವಾಗಿ ಹೆಣ್ಣಿನಲ್ಲಿ ನಿರೀಕ್ಷಿಸುವ ಗುಣ ಸ್ವಭಾವಗಳನ್ನೇ ಚಿತ್ರಿಸಿದ್ದಾರೆ. ಹೆಣ್ಣಿನ ಬಗ್ಗೆ ಮಿಡಿಯುವ ಕವಿಯ ಮನಸ್ಸು ಅವಳ ಅಂತರಂಗದ ತುಡಿತಗಳಿಗೆ ತೆರೆದುಕೊಳ್ಳುವದಿಲ್ಲ. ಇವರ ಕಾವ್ಯದಲ್ಲಿ ಹೆಣ್ಣು ದೇವತೆ, ಮಾತೆ, ಆರಾಧನೆಯ ಮೂರ್ತಿಯಾಗಿ ಕಂಗೊಳಿಸಿದ್ದಾಳೆ.

ಹೆಣ್ಣಿನ ಬಗೆಗಿರುವ ಕಪ್ಪು -ಬಿಳುಪಿನ ಸಿದ್ಧ ಮಾದರಿಯ ಮೌಲ್ಯಗಳನ್ನೇ ತಮ್ಮ ಕಾವ್ಯದಲ್ಲಿ ಪ್ರತಿಪಾದಿಸಿದ್ದಾರೆಯೇ ಹೊರತು ಹೆಣ್ಣನ್ನು ಹೆಣ್ಣಾಗಿ ಕಾಣುವ ಕಾಳಜಿ ಇವರ ಕಾವ್ಯದಲ್ಲಿ ಅಷ್ಟಾಗಿ ಕಂಡು ಬಂದಿಲ್ಲ. ಇವರ ಸ್ತ್ರೀ ಪರಿಕಲ್ಪನೆ ಭಾರತೀಯ ಕೌಟುಂಬಿಕ ಚೌಕಟ್ಟಿನೊಳಗೆ ಚಾಚಿಕೊಂಡಿದೆ. ಇದರ ಹರವು ಮುಖ್ಯವಾಗಿ 'ಕಾಮಧೇನುವಿನ ಧಾರೆಗಳು' ಎಂಬ ಕವನ ಸಂಕಲನದಲ್ಲಿ ಹಬ್ಬಿಕೊಂಡಿರುವದನ್ನು ಕಾಣಬಹುದಾಗಿದೆ.

ಜಾವಳಿಯವರ ಕಾವ್ಯದ ಕುರಿತು ವಿವೇಚಿಸುವ ಮೊದಲು ಪ್ರಾಚೀನ- ಮಧ್ಯಕಾಲೀನ ಹಾಗೂ ಹೊಸಗನ್ನಡಕಾಲದ ಕಾವ್ಯದಲ್ಲಿ ವ್ಯಕ್ತವಾದ ಹೆಣ್ಣಿನ ಪರಿಕಲ್ಪನೆಗಳನ್ನಿಲ್ಲಿ ಗಮನಿಸಬಹುದು. ಪ್ರಾಚೀನ ಕಾವ್ಯಗಳಲ್ಲಿ ಹೆಣ್ಣಿನ ಪರಿಕಲ್ಪನೆ ಅವಳ ಗುಣ ವಿಶೇಷಣೆಗಳಿಗೆ ಹಾಗೂ ಅವಳ ಬಾಹ್ಯ ಸೌಂದರ್ಯವನ್ನು ವರ್ಣಿಸುವುದಕ್ಕೆ ಮಾತ್ರ ಸೀಮಿತವಾದರೆ, ನಡುಗನ್ನಡದ ಕಾವ್ಯಗಳಲ್ಲಿ ಹೆಣ್ಣಿನ ಪರಿಕಲ್ಪನೆಯನ್ನು ಅವಳ ಅಂತಃಸತ್ವಕ್ಕೆ ಸಂಬಂಧಿಸಿದಂತೆ ವರ್ಣಿಸಲಾಗಿದೆ. ಸ್ವತಂತ್ರತೆ, ಸಮಾನತೆಯ ಮನೋ ಧರ್ಮದ ನೆಲೆಯಲ್ಲಿ ಸುಧಾರಿತಭಾವದ ಸ್ತ್ರೀ ಪಾತ್ರಗಳ ಚಿತ್ರಣವನ್ನು

ಕಾಣ ಬಹುದಾಗಿದೆ. ಇದಕ್ಕೆ 'ಕುಮಾರವ್ಯಾಸ ಭಾರತ' ಕಾವ್ಯದ ದ್ರೌಪತಿಯ ಪಾತ್ರವನ್ನು ಹಾಗೂ ವನನಕಾರ್ತಿಯರ ವಚನಗಳನ್ನು ಉದಾಹರಿಸಬಹುದು.

ಪ್ರಾಚೀನ ಕಾವ್ಯಗಳಲ್ಲಿ ಹೆಣ್ಣನ್ನು ದೇವತೆ ಮಾತೆ - ವೀರವನಿತೆ - ತ್ಯಾಗಮಯಿ- ಪ್ರೇಮಮಯಿ ಎಂದು ಹಾಗೂ ಸಹನಶೀಲೆಯಾಗಿ, ಪತಿವ್ರತೆಯಾಗಿ- ನರ್ತಕಿಯಾಗಿ- ಸಂಗೀತಗಾರಳಾಗಿ, ವೇಶ್ಯೆಯಾಗಿ, ಚಿತ್ರಿಸಲ್ಪಟ್ಟಿದ್ದಾಳೆ. ಹೀಗೆ ಹಲವು ಮುಖದ ಹೆಣ್ಣಿನ ಪರಿಕಲ್ಪನೆಗಳು ಪ್ರಾಚೀನ ಕಾವ್ಯಗಳಲ್ಲಿ ಕಂಡು ಬಂದರೆ, ನಡುಗನ್ನಡ ಕಾವ್ಯಗಳಲ್ಲಿ ಹೆಣ್ಣನ್ನು ಸಾಕ್ಷಾತ್ 'ಕಪಿಲಸಿದ್ಧ ಮಲ್ಲಿಕಾರ್ಜುನ'ಯೆಂದು, ಶಕ್ತಿರೂಪಿಣಿಯೆಂದು ಚಿತ್ರಿಸಿದ್ದಾರೆ. ಇದಕ್ಕೆ ಹರಿಹರನ ರಗಳೆಗಳು ಹಾಗೂ ಗಿರಿಜಾಕಲ್ಯಾಣ ಕಾವ್ಯವನ್ನು ಉದಾಹರಿಸಬಹುದಾಗಿದೆ.

ಹೊಸಗನ್ನಡ ಸಾಹಿತ್ಯದ ನವೋದಯ ಸಂದರ್ಭದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಅನೇಕ ಅನಿಷ್ಠ ಪದ್ಧತಿಗಳ ವಿರೋಧದೊಂದಿಗೆ ಸುಧಾರಿತ ಮನೋಭಾವದ ಸ್ತ್ರೀ ಪಾತ್ರದ ಚಿತ್ರಣವನ್ನು ಕಾಣಬಹುದಾಗಿದೆ, ಹಾಗೂ ಭಾರತೀಯ ಕೌಟುಂಬಿಕ ಮೌಲ್ಯಗಳ ಹಿನ್ನೆಲೆಯಲ್ಲಿ ಹೆಣ್ಣನ್ನು ಚಿತ್ರಿಸಿದ್ದಾರೆ. ನವ್ಯ ಸಂದರ್ಭದ ಸಾಹಿತ್ಯದಲ್ಲಿ ಹೆಣ್ಣಿನ ಪರಿಕಲ್ಪನೆ ನೈತಿಕ ಮಡಿವಂತಿಕೆಯನ್ನು ಮೀರಿ ಲೈಂಗಿಕ ಸಮಾನತೆಯನ್ನು ಪಡೆಯುವಲ್ಲಿ ಅನುಭವಿಸಿದ ಸೋಲನ್ನು ಕುರಿತು ಚಿತ್ರಿಸಿದ್ದಾರೆ. ನವ್ಯ ಸಾಹಿತ್ಯ ಹೆಣ್ಣನ್ನು ಕೇವಲ ಭೋಗದ ವಸ್ತುವನ್ನಾಗಿ ಪರಿಗಣಿಸಿತು. ದಲಿತ-ಬಂಡಾಯ ಸಾಹಿತ್ಯದಲ್ಲಿ ಹೆಣ್ಣಿನ ಪರಿಕಲ್ಪನೆ ಪ್ರಗತಿಪರ ಧೋರಣೆಯಿಂದ ಕೂಡಿದೆ. ದಲಿತ-ಬಂಡಾಯದ ಕವಿಗಳು ಹೆಣ್ಣನ್ನು ಹೂ, ತಾರೆಯೆಂದು ಸರ್ವಶಕ್ತಿದಾಯಿಣಿಯೆಂದು ಬಣ್ಣಿಸುವುದರ ಜೊತೆಗೆ ಅವಳ ಅಂತರಂಗದ ಸೌಂದರ್ಯದ ಕುರಿತು ಹಾಗೂ ಅವಳ ಸಾಧ್ಯತೆ ಕುರಿತು ವಿಶ್ಲೇಷಿಸಿದ್ದಾರೆ. ಕನ್ನಡ ಸಾಹಿತ್ಯದ ಉದ್ದಕ್ಕೂ ಹಂತ-ಹಂತವಾಗಿ ಚಿತ್ರಿಸಲ್ಪಟ್ಟ ಹೆಣ್ಣಿನ ಪರಿಕಲ್ಪನೆಯ ಆಶಯಗಳ ಪ್ರಭಾವದಿಂದಾಗಿ, ಹಾಗೂ ಬದುಕಿನ ದಟ್ಟ ಅನುಭವದಿಂದಾಗಿ ಜಾವಳಿಯವರು ಹೆಣ್ಣನ್ನು ಕುರಿತು ಆಲೋಚಿಸಿದ್ದಾರೆ. ಇದಕ್ಕೆ ಅವರ ಸಮಗ್ರ ಕಾವ್ಯವೇ ಸಾಕ್ಷಿಯಾಗಿದೆ.

ಜಾವಳಿಯವರಿಗೆ 'ಹೆಣ್ಣು' ಸೌಂದರ್ಯದ ಬೊಂಬೆಯಂತೆ ಕಾಣುವುದರ ಜೊತೆಗೆ ಪ್ರೇಯಸಿಯಾಗಿ, ಪತ್ನಿಯಾಗಿ, ತಾಯಿಯಾಗಿ, ಶಕ್ತಿ ದೇವತೆಯಾಗಿ, ರಾಜಕಾರಣಿಯಾಗಿ, ಸಂಸಾರದ ಸಾರಥಿಯಾಗಿ ಕಾಣುತ್ತಾಳೆ. ಸ್ತ್ರೀತ್ವವೇ ಹೆಣ್ಣಿನ ಸೌಂದರ್ಯವನ್ನು ಹೆಚ್ಚಿಸುವಂತಹದು ಎನ್ನುವ ನಂಬಿಕೆ ಕವಿಯದಾಗಿದೆ. ಸ್ತ್ರೀತ್ವದ ಮೌಲ್ಯಗಳೊಂದಿಗೆ ಹೆಣ್ಣು ಬೆಳೆಯಬೇಕೆಂಬ ಕವಿಯ ಕಾಳಜಿ ಅರ್ಥಪೂರ್ಣವಾಗಿದೆ. ವರದಕ್ಷಿಣೆಯಂತಹ ಸಮಸ್ಯೆಗಳಿಗೆ ಬಲಿಯಾಗುವ ಹಾಗೂ ಬೀದಿ ಕಾಮಣ್ಣರ ನೋಟಕ್ಕೆ ಗುರಿಯಾಗುವ, ಬಲತ್ಕಾರ, ದೌರ್ಜನ್ಯದಂತಹ ಹಿಂಸೆಗೆ ಒಳಗಾಗುವ ಹೆಣ್ಣಿನ ಬಗ್ಗೆ ಕವಿ ಕನಿಕರವನ್ನು ವ್ಯಕ್ತಪಡಿಸಿದ್ದಾರೆ. ಈ ಮೊದಲಾದ ಆಶಯಗಳನ್ನು ಒಳಗೊಂಡ ಕವಿಯ ಹೆಣ್ಣಿನ ಪರಿಕಲ್ಪನೆಗಳನ್ನು ೧. ಹೆಣ್ಣು ಮತ್ತು ಪ್ರೇಯಸಿ ೨. ಹೆಣ್ಣು ಮತ್ತು ದಾಂಪತ್ಯ ೩. ಹೆಣ್ಣು ಮತ್ತು ಲೈಂಗಿಕತೆ ೪. ಹೆಣ್ಣು ಮತ್ತು ತಾಯಿ ೫. ಹೆಣ್ಣು ಮತ್ತು ರಾಜಕೀಯ ೬. ಹೆಣ್ಣು ಮತ್ತು ಸಾಮಾಜಿಕ - ಎಂದು ಆರು ನೆಲೆಗಳಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

೧. ಹೆಣ್ಣು ಮತ್ತು ಪ್ರೇಯಸಿ

ಹೆಣ್ಣನ್ನು ಪ್ರೇಯಸಿಯನ್ನಾಗಿ ಅಥವಾ ಮನದನ್ನೆಯನ್ನಾಗಿ ಕಾಣುವ ಕವಿಯ ಭಾವ ಕಲಾತ್ಮಕವಾಗಿ ಅವರ ಮುಕ್ತಕಗಳಲ್ಲಿ ಮೂಡಿಬಂದಿದೆ. 'ಚಿಕ್ಕೆಗಳ ವಲಸೆ' ಎಂಬ ಮಿನಿಗವನದಲ್ಲಿ ಕವಿ ಪ್ರೇಯಸಿಯ ಕುರಿತು ಕಾವ್ಯಾತ್ಮಕವಾಗಿ ಚಿತ್ರಿಸಿದ್ದಾರೆ. ಪ್ರೇಯಸಿಯ ಬಳೆಯ ದನಿಯನ್ನು ಬಿಸಮಿಲ್ಲಾಖಾನರ ಶಹನಾಯಿ ಧ್ವನಿಗೆ ಹಾಗೂ ಕಾಮಧೇನುವಿನ ಕೊರಳ ಗಂಟೆಯ ನಾದಕ್ಕೆ ಹೋಲಿಸಿದ್ದಾರೆ.

"ಬ್ಲೌಜಿನ ತೆಳು ಬಟ್ಟೆಯಲಿ /ಎದ್ದು ಕಾಣುವ ಇವಳ / ಎದೆಯ ಮೃದು ಭಾಗಗಳು / ಕನ್ನಡಿಯ ಗಾಜಿನಲ್ಲಿ ಹಾಕಿಸಿದ / ಸ್ವರ್ಗದ ಸುಂದರ ಚಿತ್ರಗಳು" ಹಾಗೂ "ಪ್ರಾಣಿಗಳಲ್ಲೇ ಇವಳಿಗೆ ಚೆಲುವಿಕೆಯ ಖ್ಯಾತಿ; / ಏಕೆಂದರೆ ಇವಳದು/ ಸಸ್ತನೀ ಜಾತಿ" ಎನ್ನುವಲ್ಲಿ ಮತ್ತು "ಹಿಂಭಾರ ಮುಂಭಾರಗಳ /ಸಮತೋಲನದ ಒಜ್ಜೆ ; / ತಪ್ಪಬಾರದೆಂದು / ಇಡುತ್ತಾಳೆ / ಇವಳು ಕಿರುಹೆಜ್ಜೆ" ಎನ್ನುವಲ್ಲಿ ಕವಿ ಹೆಣ್ಣಿನ ಬಾಹ್ಯ ಸೌಂದರ್ಯವನ್ನು ಕುರಿತು ಚಿತ್ರಿಸಿದ್ದಾರೆ. ಹೆಣ್ಣಿನ ಸೌಂದರ್ಯದ ಕುರಿತು ಸಾಮಾನ್ಯ ವ್ಯಕ್ತಿಗೆ ಇರುವ ಸಹಜಭಾವಗಳೇ ಇಲ್ಲಿಯ ಕಾವ್ಯದಲ್ಲಿ ಕಂಡು ಬರುತ್ತವೆ. ಇಂತಹ ಕವಿತೆಗಳಲ್ಲಿ ಹೆಣ್ಣಿನ ಬಾಹ್ಯ ಸೌಂದರ್ಯದ ವರ್ಣನೆಯೊಂದಿಗೆ ಅವಳ ಅಂತರಂಗದ ಸೌಂದರ್ಯವನ್ನು ಗುರುತಿಸಬಹುದಾದ ಕಾವ್ಯ ಸೂಕ್ಷ್ಮತೆಗಳು ಕಂಡು ಬರುವುದಿಲ್ಲ.

"ಸೃಷ್ಟಿಯಲಿ
ಹೆಣ್ಣೊಂದು ಇರದೇ ಹೋಗಿದ್ದರೆ
ಈ ಭೂಮಿ
ಸೂರ್ಯ ಗೋಲಾಗಿ ಕಾರುತ್ತಿತ್ತು ಬರೀ ಬೆಂಕಿ."

(ಕಾಮಧೇನುವಿನ ಧಾರೆಗಳು)
ಕವನ ಸಂಕಲನ

ಎನ್ನುವಲ್ಲಿ ಹಾಗೂ

"ನೆಲ ಕಲ್ಲು ಗೋಡೆ
ಕಂಭ, ಬೋದುಗೆ
ತೊಲೆ ಜಂತಿಗಳು
ಗಟ್ಟಿಯೆನಿಸಿಕೊಳ್ಳುವ
ಸಿಮೆಂಟು ಕಾಂಕ್ರೀಟು
ಮನೆ ಅಲ್ಲ
ಮನೆ ಈಕೆ"

(ಕಾಮಧೇನುವಿನ ಧಾರೆಗಳು)
ಕವನ ಸಂಕಲನ

ಎನ್ನುವಲ್ಲಿ ಹೆಣ್ಣಿನ ಹಿರಿಮೆಯ ಕುರಿತು ಹಾಗೂ ಅವಳ ಅಸ್ತಿತ್ವದ ಕುರಿತು ವ್ಯಕ್ತಪಡಿಸಿರುವ ಕವಿಯ ಭಾವವು ವಿಶಿಷ್ಟವಾಗಿದೆ. ಪುರುಷನ ಏಳಿಗೆಗೆ ಮತ್ತು ಸೃಷ್ಟಿಯ ಚಲನಶೀಲತೆಗೆ ಹೆಣ್ಣೇ ಕಾರಣ ಎಂಬುದು ಕವಿಯ ಸ್ಪಷ್ಟ ನಿಲುವಾಗಿದೆ. " ಕಲ್ಪವೃಕ್ಷದ ಹಣ್ಣು

ಕೆಳಗೆ ಬಿತ್ತು; ನೆಲದ ಮಣ್ಣನು ಸೋಂಕಿ ಹೆಣ್ಣಾಯಿತು" ಎಂದು ಹೆಣ್ಣಿನ ಸಾಮರ್ಥ್ಯವನ್ನು ಗುರುತಿಸುವ ಕವಿ ಅವಳ 'ತ್ಯಾಗ' ಸ್ವಭಾವವನ್ನು 'ಪ್ರತಿಧ್ವನಿ' ಎಂಬ ಮಿನಿಗವನದಲ್ಲಿ ಚಿತ್ರಿಸಿದ್ದಾರೆ. ಹೆಣ್ಣಿನ ಹಿರಿಮೆ-ಗರಿಮೆಗಳನ್ನು ಕಂಡ ಕವಿ "ಹುಣ್ಣಿಮೆಯು ಹೆರಗೆಯಲಿ, ಹೊರಬಂದಂತೆ ಹೊಳೆಯುವ ಮುಖ; ಕೈಮುಗಿದು ಆರಾಧಿಪುದೆ ಪರಮ ಸುಖ" ಎಂದು ಧನ್ಯತಾಭಾವವನ್ನು ವ್ಯಕ್ತಪಡಿಸಿದ್ದಾರೆ.

ಹೆಣ್ಣು ಮತ್ತು ಲೈಂಗಿಕತೆ

ಕವಿ ಹೆಣ್ಣನ್ನು ಪೂಜ್ಯಭಾವನೆಯಿಂದ ಮತ್ತು ಆರಾಧನೆಯ ದೃಷ್ಟಿಯಿಂದ ನೋಡುವುದರ ಜೊತೆಗೆ ಲೈಂಗಿಕ ದೃಷ್ಟಿಯಿಂದಲೂ ಕಂಡಿದ್ದಾರೆ. "ಮಡದಿಯರ ಮೊಲೆಗಳಲ್ಲೇ / ಕಾಮ ಯಾವತ್ತು/ ಮೆತ್ತಗೆ ಮಲಗಿಕೊಳ್ಳುತ್ತಾನೆ;/ ಒಂದಿಷ್ಟು ತಟ್ಟಿದರಾಯ್ತು / ಎಚ್ಚೆತ್ತು ಬಾಣ ಬಿಡುತ್ತಾನೆ." (ಕಾ.ಧಾ) ಎಂದು ಕವಿಯು ಲೈಂಗಿಕ ಭಾವನೆಯನ್ನು ಕಾಮಶಾಸ್ತ್ರದ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. ಹೆಣ್ಣು ಹುಟ್ಟಿರುವುದೇ ಪುರುಷನ ಭೋಗ ಸುಖಕ್ಕಾಗಿ ಪರಂಪರಾಗತ ಮೌಲ್ಯವನ್ನು 'ಬೊಗಸೆ' ಎಂಬ ಮುಕ್ತಕದ ಮೂಲಕ ವ್ಯಕ್ತಪಡಿಸಿದ್ದಾರೆ.

"ಸಂಸಾರದ ನೂರು ತೆವಲುಗಳು । ಹಳವಂಡಕೆ ಬಿದ್ದು
ನಿತ್ಯ ನಿತ್ಯ ಈ ಪುರುಷ ಹೆಣವಾಗಬಾರದೆಂದು
ಭಗವಂತ ಸೃಜಿಸಿದ್ದಾನೆ/ಶಯ್ಯಾಗೃಹದಲ್ಲೊಂದು
ಸಂಜೀವಿನಿ"

- ಎಂದು ಹೇಳುವ ಕವಿಗೆ ಶಯ್ಯಾಗೃಹ ಕಾಮಲೀಲೆಯ ಮಂದಿರವಾಗದೆ ಪ್ರೀತಿ- ವಿಶ್ವಾಸದ ಬೆಸುಗೆಯ ಮಂದಿರವಾಗಿದೆ. ಕವಿ ಕಾಮದ ಬಗ್ಗೆ ಹೇಳುವಾಗ ನವೋದಯ ಕವಿಗಳಂತೆ ಮುಜುಗರಗೊಳ್ಳದೆ ನವ್ಯದವರಂತೆ ಸ್ವಚ್ಛಂದಕ್ಕೆ ಹೋಗದೆ ನೈತಿಕ ನೆಲೆಯಲ್ಲಿ ಕಾಮದ ಮಹತ್ವವನ್ನು ಕುರಿತು ಹೇಳಿದ್ದಾರೆ. ಕಾಮವನ್ನು ಬದುಕಿನ ಒಂದು ಭಾಗವನ್ನಾಗಿ ಕಂಡಿದ್ದಾರೆ.ಈ ವಿಚಾರವು ಅಹಲ್ಯ ಎಂಬ ಮುಕ್ತಕದಲ್ಲಿ ವ್ಯಕ್ತವಾಗಿದೆ.

"ಬತ್ತಲೆಗೆ / ಬತ್ತಲೆ ತಾಕಿದಾಗ / ಗೊತ್ತಾದುದಹಲ್ಯೆಗೆ ;
ಝಾಡಿಸಿ ಒದೆಯ /ಬೇಕೆಂಬಷ್ಟರಲಿ / 'ಕಾಮರೂಪಿ'
ತಾ ರೋಮ ರೋಮದಲಿ / ಬಾಣ ನೆಟ್ಟಿದ್ದ"

ಎನ್ನುವಲ್ಲಿ ಪರಪುರುಷನ ಮೋಸವನ್ನು ತಿಳಿದು ವಿರೋಧಿಸಲಾಗದ ಅಹಲ್ಯಳ ಅಸಹಾಯಕತೆಯನ್ನು ಸಹಜವಾಗಿ ಚಿತ್ರಿಸಿದ್ದಾರೆ. ಮನುಷ್ಯನ ದೌರ್ಬಲ್ಯವನ್ನು ಕುರಿತು ಸೂಕ್ಷ್ಮವಾಗಿ ಗ್ರಹಿಸುವ ಕವಿಯ ವಿಚಾರ ಮಾನವ ಪರವಾಗಿದೆ. ಅಹಲ್ಯೆಯನ್ನು ಕವಿ ಆರೋಪಿಸದೆ ಅವಳ ಸಂದಿಗ್ಧ ಪರಿಸ್ಥಿತಿಯನ್ನು ಕಂಡು ಕಳವಳ ಪಟ್ಟಿದ್ದಾರೆ.

"ಒಂದೊಂದು ಸಲ / ಯಾರದೋ ಸುಖಕ್ಕೆ / ಮತ್ತಾರೋ
ಅನುಭವಿಸ/ಬೇಕಾಗುತ್ತದೆ ಶಿಕ್ಷೆ/ ಹಾಗೇಂದೇ / ಕಲ್ಲಾದಳಹಲ್ಯೆ/
ಯುಗಯುಗದ ತುಂಬ" (ಕಾ.ಧಾ.) - ಎನ್ನುವಲ್ಲಿ

ಪುರುಷನ ಕಾಮಕ್ಕೆ ಮತ್ತು ಶಾಪಕ್ಕೆ ಬಲಿಯಾದ ಹೆಣ್ಣಿನ ಚಿಂತಾಜನಕ ಸ್ಥಿತಿಯನ್ನು ಕುರಿತು ಹಾಗೂ ಅವಳಿಗಾಗುತ್ತಿರುವ ಅನ್ಯಾಯವನ್ನು ಕುರಿತು ನೊಂದು ನುಡಿಯುವ ಕವಿ, ಪುರುಷ ಪ್ರಧಾನ ವ್ಯವಸ್ಥೆಯ ದ್ವಂದ್ವ ನೀತಿಯ ಕುರಿತು ಮೂಲಭೂತವಾಗಿ ಆಲೋಚಿಸುವುದಿಲ್ಲ. ಆದರೆ " ಗಂಡನ ಹಿಂಸೆಗೆ ಬಲಿಯಾಗುತ್ತಿರುವ ಬಾಲೆಯರೆ! ಇದಿಗೋ ಈ ಮಾತು; ಧಿಕ್ಕರಿಸಿ ಹೊರ ಬಂದು; ಆಡಿಕೊಳ್ಳುವವರ ಬಾಯ ಮೇಲೊದೆಯುತ್ತ ನಿಮಗೆ ಬೇಕಾದಂತೆ ಬದುಕಿ ಸುಖಿಸಿರಿ ಬದುಕಿರಿ" (ಕಾ.ಧಾ) - ಎನ್ನುವಲ್ಲಿ ಬಲತ್ಕಾರದ ವಿರುದ್ಧ ಪ್ರತಿಭಟಿಸಲು ಹೇಳುವ ಕವಿಯ ವಿಚಾರ ಪ್ರಗತಿಪರವಾಗಿದೆ ಹಾಗೂ ಈ ಮೇಲಿನ ಕವನದ ಭಾವವು ಸ್ತ್ರೀವಾದದ ಪರವಾಗಿದೆ.

ಹೆಣ್ಣು ಮತ್ತು ದಾಂಪತ್ಯ

ಗಂಡ - ಹೆಂಡತಿಯರಲ್ಲಿ ಪರಸ್ಪರ ಅನ್ಯೋನ್ಯತೆ, ಆತ್ಮೀಯತೆ, ಪ್ರೀತಿ -ವಿಶ್ವಾಸವಿದ್ದಾಗ ಬದುಕು ಸ್ವರ್ಗಕ್ಕಿಂತಲೂ ಮಿಗಿಲಾಗಿರುತ್ತದೆ, ಸಮರಸಭಾವವೇ ದಾಂಪತ್ಯ ಸುಖಕ್ಕೆ ಸೋಪಾನವೆಂಬುದು ಜಾವಳಿಯವರ ಕಾವ್ಯದ ಆಶಯವಾಗಿದೆ.

ಸಂಪ್ರದಾಯ ವ್ಯವಸ್ಥೆಯಲ್ಲಿ ಹೆಂಡತಿಗೆ ಗಂಡನು ದೇವರಾಗಿದ್ದಾನೆ.ಆದರೆ ಜಾವಳಿಯವರು ಈ ವಿಚಾರಕ್ಕೆ ತದ್ವಿರುದ್ಧವಾಗಿ ಆಲೋಚನೆ ಮಾಡಿದ್ದಾರೆ. " ಹಸಿಮಣೆಯ ಮೇಲೆ ನಿಂತು ಕೈ ಹಿಡಿದು ಬಂದಿರುವ ಈಕೆ ಕಾಮದಧ್ಯಾತ್ಮದಲ್ಲಿ ನನ್ನ ದೇವರು"(ಕಾ.ಧಾ) ಎನ್ನುವಲ್ಲಿ ಗಂಡನಿಗೆ ಹೆಂಡತಿಯೇ ದೇವರಾಗಿದ್ದಾಳೆ. ಕವಿಗೆ ಕಾಮ ಕೇವಲ ದೈಹಿಕ ತೃಪ್ತಿಗಾಗಿ ನಡೆಯುವ ಕ್ರಿಯೆಯಾಗದೆ ಆತ್ಮತೃಪ್ತಿಯನ್ನು ನೀಡುವಂಥ ಕ್ರಿಯೆಯಾಗಿದೆ.

ಹೆಣ್ಣು -ಗಂಡಿಗೆ, ಗಂಡು- ಹೆಣ್ಣಿಗೆ ಸೋಲುವುದರಲ್ಲೇ ದಾಂಪತ್ಯದ ಸುಖ ಅಡಗಿರುವ ವಿಚಾರವನ್ನು "ದಾಂಪತ್ಯ ಸೌಖ್ಯ" ಎಂಬ ಮಿನಿಗವನದಲ್ಲಿ ವ್ಯಕ್ತಪಡಿಸಿದ್ದಾರೆ. ಸೋಲು ಗೆಲುವುಗಳಿಗಿಂತಲೂ ದಂಪತಿಗಳು ಪರಸ್ಪರ ಅರ್ಥ ಮಾಡಿಕೊಂಡು ಬದುಕಬೇಕೆಂಬ ಕವಿಯ ಕಾಳಜಿ "ನಿಕ್ಷೇಪ" ಎಂಬ ಮಿನಿಗವನಗಲ್ಲಿ ಅರ್ಥಪೂರ್ಣವಾಗಿ ಮೂಡಿ ಬಂದಿದೆ. ದಂಪತಿಗಳು ರೂಪದಲ್ಲಿ ಭಿನ್ನವಾಗಿದ್ದರೂ ಭಾವದಲ್ಲಿ ಒಂದಾಗಿದ್ದ ವಿಚಾರವನ್ನು "ಬದುಕಿದ್ದೇವೆ" ಎಂಬ ಕಿರುಗವನದಲ್ಲಿ ತಿಳಿಸಿದ್ದಾರೆ. ದಾಂಪತ್ಯದ ಪರಿಪಕ್ವತೆಯ ಭಾವವು "ಬದುಕಿದ್ದೇವೆ" ಮತ್ತು "ಸಂಸಾರ ಕಡಲ" ಎಂಬ ಮಿನಿಗವನಗಳಲ್ಲಿ ವ್ಯಕ್ತವಾದ ಬಗೆ ಗಮನಾರ್ಹವಾಗಿದೆ. ಭಾರತೀಯ ಕೌಟುಂಬಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ಕವಿ ದಾಂಪತ್ಯದ ಬದುಕಿನ ಕುರಿತು ಹೇಳಿರುವ ವಿಚಾರಗಳು, ವಿವಾಹ ವಿಚ್ಛೇದನಗಳೇ ಹೆಚ್ಚಾಗಿ ನಡೆಯುತ್ತಿರುವ ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ತುಂಬಾ ಮುಖ್ಯವಾಗುತ್ತವೆ.

ಹೆಣ್ಣು ಮತ್ತು ತಾಯಿ

ಜಗತ್ತಿನ ಪ್ರತಿಯೊಂದು ದೇಶದ ಸಂಸ್ಕೃತಿಯಲ್ಲಿ ತಾಯಿಗೆ ಮಹತ್ವದ ಸ್ಥಾನವಿದೆ. ಒಂಬತ್ತು ತಿಂಗಳು ಹೊತ್ತು, ಹೆತ್ತು, ವಾತ್ಸಲ್ಯ ಧಾರೆ ಎರೆದು ತನ್ನ ಮಕ್ಕಳನ್ನು ಬೆಳೆಸುವ ಹೆಣ್ಣಿನ ತಾಯ್ತನದ ಕುರಿತು ಕವಿ ಕೃತಜ್ಞತಾಭಾವದಿಂದ ಹಾಡಿ ಹೊಗಳಿದ್ದಾರೆ.

ಹೆಣ್ಣಿನ ತಾಯ್ತನದ ವಿಶಿಷ್ಟತೆಯನ್ನು ಕವಿ ಗೌರವದಿಂದ ಹಾಗೂ ಅಭಿಮಾನದಿಂದ ಚಿತ್ರಿಸಿದ್ದಾರೆ. ಮಾತೃತ್ವದ ಮಡಲಿನಲ್ಲಿ ಅರಳುವ ಮಕ್ಕಳು ಯಾವ ಜನ್ಮದಲ್ಲಿಯೂ ತಾಯಿಯ ಋಣದಿಂದ ಮುಕ್ತರಾಗಲು ಸಾಧ್ಯವಿಲ್ಲ. ತಾಯಿಯ ಆಶ್ರಯವಿಲ್ಲದವನ ಬದುಕು ಬರಡಾಗುವುದು, ತಾಯಿಯ ಪ್ರೀತಿಯನ್ನು ಕಳೆದುಕೊಂಡ ತಬ್ಬಲಿಗಳ ಪಾಡನ್ನು ಕವಿ ಸಾಂಕೇತಿಕವಾಗಿ "ಒಂದು ಕೋಗಿಲೆ" ಎಂಬ ಕವನದಲ್ಲಿ ಚಿತ್ರಿಸಿದ್ದಾರೆ.

"ಹಡೆದವ್ವ" ಎಂಬ ಕವನದಲ್ಲಿ ಹೆಣ್ಣಿನ ಮಾತೃತ್ವದ ಕಲ್ಪನೆ ಸಹಜವಾಗಿ ಮೂಡಿ ಬಂದಿದೆ. "ನಾಲಿಗೆಯ ರುಚಿ ತಿಳಿದು / ತಾಟು ಬಟ್ಟಲು ತುಂಬಿ / ನೀಡಿದಳೆದುರಲ್ಲೇ ಕೂತು\ ಊರು ಕೇರಿಗೆ ಹೊರಟು ನಿಲೆ / 'ಜೋಕೆ ಜತ್ತನ' ವೆಂದು / ಹೇಳಿದಳು ನೂರುಸಾವಿರ ಮಾತು ದೇಹ ಜೀವಗಳ ನಿಂತು ಕಾಪಿಟ್ಟ ಹಡೆದವ್ವಗಾರು ಸಾಟಿ? ನೆನೆದಸಲಕ್ಕೊಮ್ಮೆ / ಎದ್ದು ನಿಲುವುದು ಸುತ್ತ । ಭದ್ರಕಲ್ಲಿನ ಕೋಟೆ " ಎನ್ನುವಲ್ಲಿ ತಾಯಿಯ ಪ್ರೀತಿ ಮನುಷ್ಯನ ಬದುಕಿಗೆ ಭದ್ರಕಲ್ಲಿನ ಕೋಟೆ ಇದ್ದಂತೆ ಎಂದು ಕವಿ ಹೇಳುವುದರಲ್ಲಿ ಸತ್ಯಾಂಶವಿದೆ. ಕವಿ ತನ್ನ ಹೆತ್ತ ತಾಯಿಯಲ್ಲಿ ಕಾಣುವ ವಾತ್ಸಲ್ಯದ ಸೆಲೆಯನ್ನು ಉಳಿದ ಹೆಣ್ಣು ಮಕ್ಕಳಲ್ಲಿಯೂ ಕಾಣುತ್ತಾರೆ. "ಈ ತಾಯಂದಿರು" ಎಂಬ ಕವನದಲ್ಲಿ ನನ್ನ ಪ್ರೀತಿಯ ಪುತ್ರಿಯರ ನಾನೆಂದೂ/ ಹೆಸರು ಹಿಡಿದು ಕರೆದುದಿಲ್ಲ / ಯಾವತ್ತು "ಅವ್ವ" ಎಂದೇ ಕರೆಯುವುದು" ಎಂದು ಕವಿ ಹೇಳಿಕೊಳ್ಳುವುದರಲ್ಲಿ ಅವರ ಬದುಕಿನ ಉನ್ನತ ಸಂಸ್ಕಾರವನ್ನು ಕಾಣಬಹುದಾಗಿದೆ.

ಹೆಣ್ಣು ಮತ್ತು ರಾಜಕೀಯ

ರಾಜಕೀಯ ಪ್ರಜ್ಞೆಯಿಂದ ರಚನೆಗೊಂಡ 'ಪರಿಸ್ಥಿತಿಯ ೨೦,೫ ಕವಿತೆ' ಎಂಬ ಕವನ ಸಂಕಲನದಿಂದ ಜಾವಳಿಯವರು ಹೈದ್ರಾಬಾದ ಕರ್ನಾಟಕ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದು ಕೊಂಡಿದ್ದಾರೆ. ರಾಜಕೀಯ ಭ್ರಷ್ಟತೆಯನ್ನು ಸಹಿಸದ ಕವಿ ಗಂಡಾಗಿರಲಿ - ಹೆಣ್ಣಾಗಿರಲಿ ಅವರ ಕುಹಕತನವನ್ನು ಮುಲಾಜಿಲ್ಲದೆ ಬಯಲಿ ಗೆಳೆಯುತ್ತಾರೆ. ಹೆಣ್ಣಿನ ಬಗ್ಗೆ ಗೌರವಭಾವನೆಯುಳ್ಳ ಕವಿ ಇಂದಿರಾಗಾಂಧಿಯ ೨೦ ಅಂಶಗಳನ್ನು ಕುರಿತು ವಿಡಂಬಿಸುವುದರ ಮೂಲಕ ಲಿಂಗಭೇದವನ್ನು ಮೀರಿ ವೈಚಾರಿಕವಾಗಿ ಬೆಳೆದಿದ್ದಾರೆ. " ಪವಾಡಪುರುಷರೋ" ಮತ್ತು "ಗಂಡರೋ-ಷಂಡರೋ" ಎಂಬ ಕವನಗಳಲ್ಲಿ ಇಂದಿರಾಗಾಂಧಿಯನ್ನು ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ. ಸಮಕಾಲೀನ ರಾಜಕೀಯ ಪರಿಸ್ಥಿತಿಗೆ ಸ್ಪಂದಿಸುವ ಜಾವಳಿಯವರ ಕಾವ್ಯ ಸಾರ್ವಕಾಲಿಕ ಮಹತ್ವವನ್ನು ಪಡೆಯುತ್ತದೆ.

ಹೆಣ್ಣು ಮತ್ತು ಸಮಾಜ

ಹೆಣ್ಣು ತನ್ನ ವಯಸ್ಸಿಗೆ ಅನುಗುಣವಾಗಿ ಹಂತ ಹಂತವಾಗಿ ಬೆಳೆದಂತೆ ಕುಟುಂಬ ಮತ್ತು ಸಮಾಜದಿಂದ ಹೇಗೆ ನಿರ್ಲಕ್ಷಕ್ಕೆ ಒಳಗಾಗುತ್ತಾಳೆ ಎಂಬುದನ್ನು ಕವಿ ವೈಜ್ಞಾನಿಕ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. 'ಬೆಳವಣಿಗೆ' ಎಂಬ ಮಿನಿಗವನದಲ್ಲಿ ಹೆಣ್ಣಿನ ಬೆಳವಣಿಗೆ ಕುರಿತು ಕವಿ ತುಂಬಾ ಸುಂದರವಾಗಿ ಚಿತ್ರಿಸಿದ್ದಾರೆ. "ಬಳುಕುವ ಈ ಬಳ್ಳಿಗೆ/ಅಡಿಕೆಯಾಗುತ್ತವೆ/ಲಿಂಬೆಯಾಗುತ್ತವೆ/ ಕೊನೆಗೆ ಹಾಲು / ಜೆಲ್ಲನೆ ಸಿಡಿಸಿ / ದಾಹ ಹಿಂಗಿಸುವ / ತೆಂಗೂ ಆಗುತ್ತವೆ." (ಕಾ. ಧಾ) ಎಂದು ಕವಿ ಹೆಣ್ಣಿನ ಶಾರೀರಿಕ ಬೆಳವಣಿಗೆಯನ್ನು ವೈಜ್ಞಾನಿಕ ನೆಲೆಯಲ್ಲಿ ಚಿತ್ರಿಸಿದ್ದಾರೆ. ಆದರೆ ಹೆಣ್ಣಿನ

ಅಂತರಂಗಿಕ ಬೆಳವಣಿಗೆಯ ಕುರಿತಾಗಲಿ ಅಥವಾ ಸಾಮಾಜಿಕವಾಗಿ ಹೆಣ್ಣಿನ ಸಮಸ್ಯೆಗಳನ್ನು ಕುರಿತಾಗಲಿ ಕವಿ ಏನನ್ನೂ ಹೇಳದೆ ಮೌನ ತಾಳಿದ್ದಾರೆ.

'ಒಂದು ಗಿಡದ ಕಥೆ 'ಎಂಬ ಕವನದಲ್ಲಿ ಕವಿ ಹೆಣ್ಣಿನ ಬದುಕಿನ ದುರಂತದ ಬಗೆಗೆ ಮನಮಿಡಿಯುವಂತೆ ಚಿತ್ರಿಸಿದ್ದಾರೆ. ಹೆಣ್ಣಿನ ಹುಟ್ಟು, ಬೆಳವಣಿಗೆ, ವರದಕ್ಷಣೆ, ಮದುವೆ, ಆನಂತರದ ಹಿಂಸೆ, ಸಾವು ಎಲ್ಲವನ್ನು ಧ್ವನಿಸುವ ಕವಿತೆಯಿದು. ಕಾಲಮಾನದ ಕವಿತೆಗಳು (ಪು. ೮೨) ಹೆಣ್ಣು ಹುಟ್ಟಿನಿಂದ ಸಾಯುವವರೆಗೆ ಒಂದಿಲ್ಲ ಒಂದು ರೀತಿಯಲ್ಲಿ ಹಿಂಸೆಗೆ, ಶೋಷಣೆಗೆ ಒಳಗಾಗುತ್ತಿರುವುದನ್ನು ಕಂಡ ಕವಿಯ ಮನಸ್ಸು ಕರಗಿ ನೀರಾಗಿ ಹರದಿರುವುದನ್ನು ಅವರ 'ವಸ್ತ್ರಾಪಹರಣ' ಮತ್ತು 'ಧಾರವಾಹಿ' ಹಾಗೂ 'ಈ ಪರಿಸರ' ಎಂಬ ಮಿನಿಗವನಗಳಲ್ಲಿ ಕಾಣಬಹುದಾಗಿದೆ. "ಬತ್ತಲೆಯಾದ ಪ್ರತಿಸಲ/ ಕೌರವಜ್ಞಾತಿಗಳ ಅಟ್ಟಹಾಸದ ನಗೆ ಅಕ್ಷಯಾಂಬರಕೆ ದ್ವಾಪರದ ಗಡಿ/ ವಸ್ತ್ರಾಪಹರಣಕೆಲ್ಲಿಯ ಗಡು"? ಎಂದು ಪ್ರಶ್ನಿಸುತ್ತಾರೆ. ಇದೇ ರೀತಿಯಲ್ಲಿ 'ಈ ಪರಿಸರ' ಎಂಬ ಮಿನಿ ಕವನದಲ್ಲಿ ಬೀದಿ ಕಾಮಣ್ಣರ ಕುರಿತು 'ಹಾದಿ ಬೀದಿಯ ತುಂಬ / ಹಸದಿರುವ ಕಣ್ಣುಗಳು /ಮನೆದಾಟಿ ಹೇಗೆ ಹೆಜ್ಜೆ /ಇಡಬೇಕು ಈ ಹೆಣ್ಣುಗಳು' ಎಂದು ಪ್ರಶ್ನಿಸುತ್ತಲೇ "ದಿನಾ ಬೆಳಗೆದ್ದರೆ /ವರದಕ್ಷಣೆಯ /ಕ್ರೌರ್ಯಕ್ಕೆ ಹೆಣ್ಣು ಬಲಿಯಾಗುವ/ ಪತ್ರಿಕಾ ವರದಿಗಳು / ನನ್ನ ತಂಗಿಯದೋ/ ಮಗಳದೋ/ ಆ ಮಾಲಿಕೆಯಲ್ಲಿ ಬರುವ ಮುಂದಿನ / ಹೆಸರು" (ಕಾ.ಧಾ. 'ಧಾರವಾಹಿ') ಎಂದು ಕಳವಳ ಪಡುತ್ತಾರೆ. ಹೆಣ್ಣಿನ ಹೊರನೋಟದ ಸಮಸ್ಯೆಗಳ ಕುರಿತು ಆಲೋಚಿಸುತ್ತಾರೆ. ಹೆಣ್ಣಿನ ಬಾಳಿನ ಗೋಳನ್ನು ಕಂಡು ಕನಿಕರ ಪಡುತ್ತಾರೆ. ಆದರೆ ಸಮಸ್ಯೆಗಳ ಪರಿಹಾರಕ್ಕಾಗಿ ಸೈದ್ಧಾಂತಿಕವಾಗಿ ಆಲೋಚಿಸುವುದಿಲ್ಲ. ಹೆಣ್ಣಿನ ಈ ಅಸಮಾನತೆಗೆ ಹಾಗೂ ಶೋಷಣೆಗೆ ಕಾರಣವಾಗಿರುವ ವ್ಯವಸ್ಥೆಯ ವಿರುದ್ಧ ಸೂಕ್ಷ್ಮ ಪ್ರತಿಭಟನೆಗಳಿಲ್ಲ. ಹೀಗಾದಾಗ ಹೆಣ್ಣಿನ ಬಗೆಗೆ ಇವರ ಕಾವ್ಯ ಕೇವಲ ಕನಿಕರದ ಹಂತಕ್ಕೆ ನಿಲ್ಲುತ್ತದೆಯೆ'? ಎಂಬ ಅನುಮಾನ ಪ್ರಾರಂಭವಾಗುತ್ತದೆ.

'ಅನಾಗರಿಕರ ನಾಗರಿಕತೆ' ಮತ್ತು 'ಹಾಲು ತೊರೆಯಿಂದ ಉಪ್ಪು ನೀರಿಗೆ' ಎಂಬ ಕವನಗಳಲ್ಲಿ ಕವಿ ಹೆಣ್ಣಿನಲ್ಲಿವುಂಟಾಗುವ ಬದಲಾವಣೆ-ಬೆಳವಣಿಗೆಯ ಕ್ರಿಯೆ -ಪ್ರತಿಕ್ರಿಯೆಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ.

'ಹಣೇಬಾರದ ಹಾಡು' ಎಂಬ ಕವನದಲ್ಲಿ ಕವಿ ಕೆಳವರ್ಗದ ಹೆಣ್ಣಿನ ಬದುಕಿನ ಅನಿವಾರ್ಯತೆ ಮತ್ತು ಅಸಹಾಯಕತೆಯ ಕುರಿತು ಚಿತ್ರಿಸಿದ್ದಾರೆ.

ಜೋಗತೀ ನಿಂಗೀ ಮಗಳು
ಬಸವಿಯಾದದ್ದು
ಪಾಡೇವಾರ ಯಲ್ಲ್ಯಾನ ತಂಗಿ
ಮುಲ್ಲಾ ಹುಸೇನಿ ಕೂಡಾ ಓಡಿ ಹೋದದ್ದು
ಹೊಲೇರ ಗಿರ‍್ಯಾನ ಸೂಸಿ ಕೂಡಾ
ಎಲ್ಲರೆದುರಿನಲ್ಲೇ ತಳವಾರ ಸಾಯಬಣ್ಣ,

ಸಂಬಂಧವಿಟ್ಟು ಕೊಂಡದ್ದು
ಸಮಗಾರ ಹಣಮ್ಯಾನ ಹೆಣತಿ
ಹಸವೀ ತಡೀಲಾರದೆ ಮಕ್ಕಳ ಕಟಗೊಂಡು
ಬಾವಿಗೆ ಬಿದ್ದದ್ದು"

-('ಹಣೇಬಾರದ ಹಾಡು' -ಪುಟ ೩.')

ಎಂಬಂತಹ ನುಡಿಗಳನ್ನು ಅವಲೋಕಿಸಿದಾಗ, ಲೈಂಗಿಕ ಪಾವಿತ್ರ್ಯದ ಪರಿಕಲ್ಪನೆಯನ್ನು ಮೀರಿ, ನೈತಿಕ ಮೌಲ್ಯಗಳನ್ನು ಗಾಳಿಗೆ ತೂರಿ ಬದುಕುವ ರೀತಿಯನ್ನು ಕಾಣಬಹುದಾಗಿದೆ. "ಸಮಗಾರ ಹಣಮ್ಯಾನ ಹೆಣತಿ ಹಸವೀ ತಡೀಲಾರದೆ ಮಕ್ಕಳ ಕಟಗೊಂಡು ಬಾವಿಗೆ ಬಿದ್ದದ್ದು" ಎನ್ನುವಲ್ಲಿ ಕರುಣಾಜನಕ ಸ್ಥಿತಿ ಗೋಚರವಾಗುತ್ತದೆ. ಇಲ್ಲಿ ಆರ್ಥಿಕ ವ್ಯವಸ್ಥೆಯಲ್ಲಿರುವ ಅಸಮಾನತೆಯನ್ನು ಎತ್ತಿ ತೋರಿಸುವ ಕಾಳಜಿ ಮೌಲಿಕವಾಗಿದೆ.

ಕವಿ ಹೆಣ್ಣಿನ ಸೌಂದರ್ಯವನ್ನು ಕಂಡು ಸಂಭ್ರಮಿಸುವುದರ ಜೊತೆಗೆ ಅವಳಲ್ಲಿರುವ ಪ್ರೀತಿ-ವಾತ್ಸಲ್ಯ-ಸ್ನೇಹ-ಆತ್ಮೀಯ ಸ್ವಭಾವಗಳನ್ನು ಅಭಿಮಾನದಿಂದ ಚಿತ್ರಿಸಿದ್ದಾರೆ ಹಾಗೂ ಅವಳ ಸ್ವಾಭಿಮಾನ -ಆತ್ಮಾಭಿಮಾನ ಪ್ರತೀಕಾರದ ಭಾವಗಳನ್ನು ಮುಚ್ಚುಮರೆಯಿಲ್ಲದೆ ಚಿತ್ರಿಸಿದ್ದಾರೆ. ಇದಕ್ಕೆ 'ಫಣಿ' ಮತ್ತು 'ಕಣ್ಣು' ಎಂಬ ಮಿನಿಗವನ ಉದಾಹರಣೆಯಾಗಿವೆ.

ಒಂದು ಕಡೆಗೆ ಹೆಣ್ಣಿನಿಂದಲೇ ಸರ್ವಸ್ವ ಎಂದು ಚಿತ್ರಿಸುವ ಕವಿ ಇನ್ನೊಂದು ಕಡೆಗೆ ಹೆಣ್ಣಿನಿಂದಲೇ ಅಳಿವು ಎಂಬ ಭಾವವನ್ನು 'ಒಲಿದರೆ ನಾರಿ ಮುನಿದರೆ ಮಾರಿ' ಎಂಬ ವಿಚಾರದ ಹಿನ್ನೆಲೆಯಲ್ಲಿ ವ್ಯಕ್ತಪಡಿಸಿದ್ದಾರೆ. ಕವಿ ಹೆಣ್ಣನ್ನು ಒಮ್ಮೆ ವಚನ ಕಾರರಂತೆ ಸಮಾನತೆಯ ದೃಷ್ಟಿಯಿಂದ ಕಂಡರೆ ಮತ್ತೊಮ್ಮೆ ಸಾಂಪ್ರದಾಯಿಕ ನೆಲೆಯಲ್ಲಿ ಕಾಣುತ್ತಾರೆ.

ಸಮಾರೋಪ

ರಜಾಕಾರಹಾವಳಿಯ ತೀವ್ರತೆಯನ್ನು ಕಂಡಿದ್ದ ಹಾಗೂ ಬರಗಾಲದಂತಹ ಬವಣೆಯ ಅನುಭವವನ್ನು ಪಡೆದಿದ್ದ ಜಾವಳಿಯವರಿಗೆ, ಹೆಣ್ಣಿನ ಬದುಕಿನ ಅನೇಕ ಸಾಧ್ಯತೆಗಳನ್ನು ಕುರಿತು ಚಿತ್ರಿಸುವ ಅವಕಾಶವಿತ್ತು. ಹೀಗೆ ಕವಿಗೆ ಹೆಣ್ಣಿನ ಬದುಕನ್ನು ಕುರಿತು ಚಿತ್ರಿಸುವ ಅನೇಕ ಸಾಧ್ಯತೆಗಳಿದ್ದರೂ ಅವರು ಉದಾರದೃಷ್ಟಿಯಿಂದ ಮತ್ತು ಮಾನವೀಯ ದೃಷ್ಟಿಯಿಂದ ಹಾಗೂ ಆದರ್ಶದ ದೃಷ್ಟಿಯಿಂದ ಚಿತ್ರಿಸಿದ್ದಾರೆ.

ಜಾವಳಿಯವರ ಕಾವ್ಯ ವಸ್ತುನಿಷ್ಠ ಮತ್ತು ಭಾವನಿಷ್ಠವಾಗಿದೆ. ಇವರು ಕಾವ್ಯ ಬಂಧದ ಬಗ್ಗೆ ಹೆಚ್ಚಿನ ಮಹತ್ವಕೊಡಲಿಲ್ಲವೆನಿಸುತ್ತದೆ. ಇವರ ಕಾವ್ಯದಲ್ಲಿ ವಿಚಾರ ಪ್ರಧಾನವಾದಾಗ ಕಾವ್ಯ ಬಂಧದಲ್ಲಿ ಸಡಿಲತೆ ಉಂಟಾಗುವುದು ಸಹಜವಾಗುತ್ತದೆ. ಆದರೂ ಕವಿ ಪ್ರತಿಮೆ- ಸಂಕೇತಗಳನ್ನು ಬಳಸಿಕೊಂಡು ರಚಿಸಿರುವ ಕವನಗಳು ಗಮನಾರ್ಹವಾಗಿವೆ. ಇವರ ಕಾವ್ಯ ಎಂದೂ ಕ್ಲಿಷ್ಟವಾಗಿಲ್ಲ. ಸರಳವಾದ ನೇರ ನುಡಿಗಳಲ್ಲಿ ತಮ್ಮ ಅನುಭವವನ್ನು ವ್ಯಕ್ತಪಡಿಸುತ್ತಾ ಹೋಗುತ್ತಾರೆ.

ತುರ್ತು ಪರಿಸ್ಥಿತಿಯಂತಹ ಕವನಗಳನ್ನು ರಚಿಸಿರುವವರ ಮೂಲಕ ಹಾಗೂ ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವಂತಹ ಅಜರಾಮರವಾಗಿ ಉಳಿಯುತ್ತಾರೆ.

ಬಂಡಾಯ

ಮರಾಠಿ ಮೂಲ : **ಪ್ರೇಮಾನಂದ ಗಜವಿ**
ಅನುವಾದ : **ಡಾ. ರಾಮಕೃಷ್ಣ ಮರಾಠೆ**

ದೃಶ್ಯ -೧

[ಡಾ. ಅಂಬೇಡ್ಕರ್, ಸೋಸಿಯಲ್ ಸರ್ವಿಸ್ ಲೀಗಿನ ಕಾರ್ಯಾಲಯದ ಒಂದು ಕೋಣೆಯಲ್ಲಿ ಕುರ್ಚಿಯ ಮೇಲೆ ಕುಳಿತಿದ್ದಾರೆ. ಕಣ್ಣು ಮುಚ್ಚಿ ವಿಚಾರ ಮಗ್ನರಾಗಿದ್ದಾಗ ಗೋವಿಂದರಾವ್ ಬರುತ್ತಾರೆ]

ಗೋವಿಂದರಾವ್ : ಆಫೀಸಿನ ಕೋಣೆಯ ಬಾಗಿಲಾ ತೆರೆದಿಟ್ಕೊಂಡು ಹಾಂಗ ಕಣ್ಣು ಮುಚ್ಚಿ ಯಾವುದೊ ವಿಚಾರದಾಗ ಮಗ್ನರಾದ್ಹಾಂಗ ಕಾಣಸ್ತದಲ್ಲಾ?

ಅಂಬೇಡ್ಕರ್ : (ಕಣ್ಣು ತೆರೆದು) ಬರ್ರಿ ಕೂಡ್ರಿ ಗೋವಿಂದರಾವ್

ಗೋವಿಂದರಾವ್ : ನಿಮಗ್ ಸೋಸಿಯಲ್ ಸರ್ವಿಸ್ ಲೀಗಿನ ಈ ರೂಮು ಕೊಟ್ಟಿದೀನಿ ಬಾಗಲಾ ನೂಕೊಂಡು ಬರೊ ತೊಂದರೆ ಆಗಬಾರದಂತ ಹಂಗತೆರೆದ ಕೊಂಡ ಕೂತಿರಲ್ಲ. ಐದು ನಿಮಿಷದಿಂದ ಬಾಗಿಲಾದಾಗ ನಿಂತ ಕೊಂಡಿದಿನಿ. ನನ್ನ ಸುಳಿವು ಕೂಡಾ ಗೊತ್ತಾಗಬಾರದಾ? ಅದೆಂಥಾ ವಿಚಾರ ದಲ್ಲಿ ಇಷ್ಟೊಂದು ಮುಳುಗಿ ಹೋಗಿದ್ರಿ?

ಅಂಬೇಡ್ಕರ್ : ವಿಚಾರ ಮಾಡದೆ ಮತ್ತೇನ್ ಮಾಡ್ಲಿ? ನಮ್ಮ ಜನ್ಮ ಕೂಡಾ ಹಿಂಗ್ ವಿಚಾರ ಮಾಡ್ಕೊಂತನ ಆಗಿರಬೇಕು.

ಗೋವಿಂದರಾವ್ : ಅಗದಿ ಖರೇ ಅದ ನಿಮ್ಮ ಮಾತು. ಇಂಥ ವಿಚಾರ ಸರಣಿಯಿಂದ ಎಂ. ಎ., ಪಿಎಚ್.ಡಿ, ಡಿ. ಎಸ್.ಸಿ., ಬಾರ್, ಎಟ್.ಲಾ ಈ ಎಲ್ಲ ಪದವಿಗಳ ಮಾಲೀಕರಾಗಿರಿ ಇಷ್ಟೆಲ್ಲ ಪದವಿ ಗಳಿಸಾಕ ನಿಮ್ಮ ವಿಚಾರ ಶಕ್ತಿನೇ ಕಾರಣ ಅನಬೇಕು.

ಅಂಬೇಡ್ಕರ್ : ಹೌದು ಗೋವಿಂದರಾವ್ ಲಂಡನ್ನಿನಲ್ಲಿ ಕಲಿಯುವಾಗ ಲೈಬ್ರರಿ ಯೊಳಗ ಎಲ್ಲರಿಗಿಂತ ಮೊದಲ ಬರುವ ಮಾತು ಎಲ್ಲರಿಗಿಂತ ಕಡಗಿ ಹೋಗುವ ವಿದ್ಯಾರ್ಥಿ ಅಂದ್ರ ನಾನೊಬ್ಬನೆ. ಹಸಿವು ತಾಳಿಕೊಂಡು ಬ್ರೆಡ್ಡಿನ ತುಕಡಿ ಮತ್ತು ಹಪ್ಪಳಾ ತಿಂದು ಈ ಪದವಿ ಗಳಿಸಿದೀನಿ ನೋಡ್ರಿ.

ಗೋವಿಂದರಾವ್ : ಅಗದಿ ಖರೇ ಅದ. ಆದ್ರ ಹೀಂಗ್ ಒಬ್ಬರ್ ಕೂತುಕೊಂಡ ಕಣ್ಣು ಮುಚ್ಚಿ ಚಿಂತಿ ಮಾಡ್ತಾ ಇರೋದಂದ್ರ.

ಅಂಬೇಡ್ಕರ್ : ಚಿಂತಿ ಅಲ್ಲಾ ವಿಚಾರ ಮಾಡತಾ ಇದ್ದೆ.

ಗೋವಿಂದರಾವ್ : ನನಗೂ ವಿಚಾರ ಅನ್ನೋದಿತ್ತು. ಸುಮ್ಮನ ಮಾತಿನೊಳಗ ಸಿಗಬ್ಯಾಡ್ರಿ ಡಾಕ್ಟರ ನಾ, ಬಂದದ್ದು ಕೂಡಾ ಗೊತ್ತಾಗಲಿಲ್ಲ. ಅಂಥಾ ಯಾವ ವಿಚಾರದೊಳಗ್ ಮುಳುಗಿದ್ರಿ ?

ಅಂಬೇಡ್ಕರ್ : ನೀರಿನ ವಿಚಾರದಾಗ ಮುಳುಗಿ ಹೋಗಿದ್ದೆ.

ಗೋವಿಂದರಾವ್ : ನೀರಿನ? ಅಂದ್ರ? ಇಲ್ಲಿ ನಿಮಗ ಯಾರಾದ್ರೂ ಅಪಮಾನ ಮಾಡಿದ್ರೇನು ?

ಅಂಬೇಡ್ಕರ್ : ಅದಂತೂ ನಮಗ ಹುಟ್ಟಿದ ಐದೇಶಿದಿಂದ ಚಾಲೂ ಅದ. ಆದ್ರ ಈ ಹೊತ್ತಿನ್ಯಾಗ ನಾ ವಿಚಾರ ಮಾಡ್ತಾ ಇರೋದು ಭಾಳ ಮಹತ್ವದ್ದು ಅದ. ರಾವ್ ಬಹದ್ದೂರ್ ಅವರ ಮಾತಿನೊಳಗಿಂದ ಮಹಾತಾದ ಚವದಾರಿ ಕೆರೆಯ ಬಾಯಿ ತೆರೆಕೊಂಡದ.

ಗೋವಿಂದರಾವ್ : ಅದು ನನಗ ಗೊತ್ತದ. ಆದರ ಡಾಕ್ಟರ ಕೆರೆ ಬಾಯಿ ತೆಗೆಯುದರ ನಿರ್ಣಯವಾಗಿ ಉಪಯೋಗವೇನು? ಅದನ್ನು ಅನುಷ್ಠಾನದಾಗ ತರವರು ಯಾರು ? ಒಬ್ಬ ದಲಿತನಾದರೂ ಆ ಕೆರಿ ನೀರು ಸಾದಾ ಬೊಗಸಿಯೊಳಗ ತೊಗೊಂಡು ಕುಡಿಯು ಧೈರ್ಯ ತೋರಿಸಲಿಲ್ಲ.

ಅಂಬೇಡ್ಕರ್ : ಧೈರ್ಯ ತೋರಿಸುದಾದರೂ ಹ್ಯಾಂಗ್ ? ಅಸ್ಪೃಶ್ಯರ ಜೀವನ ನಿಮಗಿನ್ನೂ ಪರಿಚಯವಾಗಿಲ್ಲ. ಗೋವಿಂದರಾವ್, ಆ ಬಡಪಾಯಿ ಜನಾ ತಮ್ಮ ಸ್ವಂತದ ನೆರಳಿಗೆ ಹೆದರತಾರ ! ಅವರ ಮೈಯಾಗ ಶಕ್ತಿನS ಇಲ್ಲ.

ಗೋವಿಂದರಾವ್ : ನೀವು ಆ ಶಕ್ತಿ ತುಂಬಬಹುದು ಡಾಕ್ಟರ್

ಅಂಬೇಡ್ಕರ್ : ಏನಿದ್ರೂ ನಾನು ಒಬ್ಬನೆ... ನನಗೆ ನಿಮ್ಮ ನೆರವು ಬೇಕು.

ಗೋವಿಂದರಾವ್ : ಯಾವ ನೆರವು ಬೇಕು ಹೇಳ್ರಿ ಕೊಡತೀನಿ.

ಅಂಬೇಡ್ಕರ್ : ಅಸ್ಪೃಶ್ಯರ ಬಗ್ಗೆ ನಿಮ್ಮ ಮನಸ್ಸಿನ್ಯಾಗ ಖರೇ ಕಳಕಳಿ ಐತಿ.

ಗೋವಿಂದರಾವ್ : ಸೇವಾ ಭಾವದಿಂದ ನಡೆಕೊಳತೀನಿ ಹೇಳ್ರಿ.

ಅಂಬೇಡ್ಕರ್ : ನನಗ ಬೇಕಾಗಿರೋದು ಇಂಥ ಭಾವನೆಯೆ.

ಗೋವಿಂದರಾವ್ : ಆಯಿತು ಅಗತ್ಯವಾಗಿ ಕೊಡತೀನಿ.

ಅಂಬೇಡ್ಕರ್ : ನಾನು ನಿಮ್ಮಿಂದ ಇದನ್ನೇ ಬಯಸಿದ್ದೆ ನಾವು ಲಗೂನ ಮಹಾಡಕ ಹೋಗಬೇಕಾಗ್ತದ

ಗೋವಿಂದರಾವ್ : ಯಾವುದಕ್ಕಾಗಿ ?

ಅಂಬೇಡ್ಕರ್ : ರಾವಬಹದ್ದೂರ ಭೋಲೆಯವರು ನಿರ್ಣಯದ ಚೌಕಸಿ ಮಾಡಲಿಕ್ಕಾಗಿ

ಗೋವಿಂದರಾವ್ : ಏನು ?

ಅಂಬೇಡ್ಕರ್ : ಗಾಬರಿ ಯಾಕೆ? ನೀವು ಅಗರಕರವಾದಿ ಬ್ರಾಹ್ಮಣನಾಗಿದ್ದು. ಕೂಡ ಅಂಜುದ?

ಗೋವಿಂದರಾವ್ : ಇಲ್ಲ ಡಾಕ್ಟರ್ ಅಂಬೇಡ್ಕರ್, ನಾನು ಗಾಬರಿಯಾಗಲಿಲ್ಲ. ನಿಮ್ಮ ಬಾಯಿಂದ ಈ ಸುದ್ದಿ ಕೇಳಿ ಆಶ್ಚರ್ಯ ಆಯಿತು. ನೀವು ಅಗದಿ ಮಹತ್ವದ ಹೆಜ್ಜಿನ ಇಡಾಕ ಹತ್ತೀರಿ.

ಅಂಬೇಡ್ಕರ್ : ಈ ಹೆಜ್ಜೆ ಇಡೋರು ಸಂಭಾಜಿ ಗಾಯಕವಾಡ, ಶಿವರಾಮ ಜಾಧವ, ರಾಮಚಂದ್ರ ಮೋರೆ, ನಾನು ಅವರು ಎತ್ತಿದ ಪಲ್ಲಕ್ಕಿಗೆ ಬರಿ ಹೆಗಲು ಕೊಡುವವ.

ಗೋವಿಂದರಾವ್ : ನಿಮ್ಮ ಹೆಗಲಿನ ಜೊತಿಗಿ ನಮ್ಮದು ಹೆಗಲ ಅದ.

ಅಂಬೇಡ್ಕರ್ : ನಿಮ್ಮ ಈ ಮಾತಿನಿಂದ ನನ ಅರ್ಧಾ ಬಾರ ಕಡಿಮೆಯಾಯ್ತು ಗೋವಿಂದರಾವ್.

ಗೋವಿಂದರಾವ್ : ಆದರ ನಂದು ಹೆಚ್ಚಾತು ಡಾಕ್ಟರ.

ಅಂಬೇಡ್ಕರ್ : ಅಂದರೆ ?

ಗೋವಿಂದರಾವ್ : ನಾನು ಬಂದಾಗ ನೀವು ಯಾವ ವಿಚಾರ ಮಾಡತಿದ್ರಿ? ಆ ವ್ಯಾಳ್ಯಾದಾಗ ನಿಮ್ಮ ಮುಖದ ಮ್ಯಾಲ ಬದಲಾಗುತಿದ್ದ ಭಾವನೆಗಳನ್ನು ನೋಡಿ ಕುಸಿದ ಹೋಗಿದ್ದೆ.

ಅಂಬೇಡ್ಕರ : ವಿಚಾರದ ಸುಳಿಯೊಳಗೆ ಮುಳುಗಿ ಹೋಗಿದ್ದೆ ಜೀವಾ ಹಿಂಡೊ ಆ ತಳಮಳದ ಬಾಣ ಮುಖದ ಮ್ಯಾಲ ಮೂಡದೆ ಇರಲಿಕ್ಕೆ ಸಾಧ್ಯ ಅದ ಏನು? ಕಾಲ ಕೆಳಗ ಶಾಂತ ಸರೋವರ ಆದರೆ ಅದರೊಳಗಿನ ಬೊಗಸೆ ನೀರು ಸಹಿತ ಕುಡೀಲಿಕ್ಕ ಆಗತಾ ಇಲ್ಲ. ಈ ವೇದನಾ ನನ್ನಂಥ ಅಸ್ಪೃಶ್ಯನಿಗೆ ಮಾತ್ರ ಗೋತಾಗತದ. ರಾವಬಹದ್ದೂರ ಭೋಲೆಯವರ ನಿರ್ಣಯ ಅನುಷ್ಠಾನವಾಗಬೇಕು. ಈ ಪಣ ತೊಟ್ಟುಕೊಂಡೆ ಮಹಾಡದ ಕಾರ್ಯಕರ್ತರು ಬಂದಿದ್ದರು. ನಾನು ಬರಬೇಕಂತ ವಚನ ತಗೊಂಡು ಹೋದರು. ಅದೇ ಹೊತ್ತಿನ್ಯಾಗ ನನ್ನೊಳಗಿನ ಏಕಾಂಗಿ ಮನಸ್ಸು ಹಳೆಯ ನೆನಪುಗಳಿಂದ ಕೊರಿಲಿಕ್ಕ ಹತ್ತಿತು. ಒಂಬತ್ತು ವರುಷದವನಿದ್ದಾಗಿನ ಮಾತು, ತಾಯಿಗಿ ಭೆಟ್ಟಿಯಾಗಲಿಕ ಹೋಗುವಾಗ ರೊಟ್ಟಿ ಇದ್ದು, ವಸತಿ ಇದ್ದ ಊರೊಳಗ ರಾತ್ರಿ ಉಪವಾಸ ಕಳಿಯಬೇಕಾಯಿತು. ಕಾರಣ ಇಷ್ಟೆ

ಮೇಲ್ಜಾತಿಯ ಜನರಲ್ಲಿ ಒಬ್ಬನೂ ನೀರು ಕುಡುಲು ತಯಾರಿರಲಿಲ್ಲ. ಶಾಲೆಯೊಳಗೂ ನೀರಿಗೆ ಮುಟ್ಟುವಂತಿರಲಿಲ್ಲ. ಸಿಪಾಯಿ ನನ್ನ ಬೊಗಸೆಗೆ ನೀರು ಚಲ್ಲುತಿದ್ದ. ಅಷ್ಟರಾಗ ನನ್ನ ನೀರಡಿಕೆ ಹಿಂಗತಿತ್ತು. ತಾಸುಗಟ್ಟಲೆ ನೀರಿಗಾಗಿ ಮಿಡುಕಾಡಬೇಕಾಗತಿತ್ತು. ಗೋವಿಂದರಾವ್ ಆ ಜೀವ ಹಿಂಡುವ ನೆನಪುಗಳು [ಅಂಬೇಡ್ಕರರ ಮುಖದ ಮೇಲೆ ನೋವು ಕ್ರೋಧ ಹೆಚ್ಚುವದು]

ಗೋವಿಂದರಾವ್ : ಶಾಂತರಾಗರಿ, ಡಾಕ್ಟರ ಶಾಂತರಾಗಿರಿ,

ಅಂಬೇಡ್ಕರ್ : ಹಾಂಗ್ಯ ಶಾಂತಾಗಲಿ ಗೋವಿಂದರಾವ್ ಹ್ಯಾಂಗ್ ?---------------

[ಕಣ್ಣು ಹನಿಗೂಡತ್ತವೆ ಗಂಟಲು ಬಿಗಿಯುತ್ತದೆ. ಗೋವಿಂದರಾವ್ ಬೆನ್ನು ಸವರುತ್ತಾರೆ. ಕತ್ತಲು]

ದೃಶ್ಯ -೨

[ಸಾವಿರಾರು ಧ್ವನಿ, ಗೊಂದಲ ಆ ಗೊಂದಲದಲ್ಲಿ ಕೇಳಿ ಬರುವ ಧ್ವನಿ]

ಗೋದಾಬಾಯಿ : ಭಾಗಾಬಾಯಿ ಬಂದರೇನು ಅಂಬೇಡ್ಕರ್ ?

ಭಾಗಾಬಾಯಿ : ನಾನು ಇಲ್ಲೆ ನೀನೂ ಇಲ್ಲೆ, ಬಂದರೂ ಇಲ್ಲೋ ಹ್ಯಾಂಗ ಗೊತ್ತಾಗ ಬೇಕು? ಮುಂಜಾನಿಯಿಂದ ದಾರಿ ನೋಡ್ಲಿಕತ್ತೀನಿ ಕಣ್ಣು ನೋಯಿಸಲಿಕ್ಕ ಹತ್ಯಾವ ಕಣ್ಣಿನ ಯವಿ ಮಾತ್ರ ಕೂಡತಾ ಇಲ್ಲ.

ಗೋದಾಬಾಯಿ : ನಾ ಈಗಷ್ಟ ಬಂದಿಲ್ಲೇನು ?

ಭಾಗಾ : ಬಂದಿರಬೇಕು ನನ್ನ ರಾಜಾಗ ಯಾವಾಗ ಕಣ್ಣು ತುಂಬ ನೋಡೇನು ಅನುವಂಗ ಆಗೇದ.

ಗೋದಾ : ಭಾಳ ಕಲತಾನಂತ ಬ್ಯಾಲಿಸ್ಟರ ಏನದು ? ಇಂಗ್ಲಂಡಿನ್ಯಾಗ ಕಲತಿದ್ನು.

ಭಾಗಾ : ನೋಡಲಿಕ ಬೆಳ್ಳಗ ಅದಾನಂತ ರಾಜಾನ್ನಂಗ ಹೌದಲ್ಲೋ [ಡಾ. ಅಂಬೇಡ್ಕರ್ ಜಯವಾಗಲಿ ಎಂಬ ಘೋಷಣೆ ಕೇಳಿ ಬರುತ್ತದೆ] ಗೋದಾ. ಗೋದಾ ಬಂದ ನೋಡ ನಮ್ಮ ರಾಜಾ ಎಲ್ಲರಿಗಿಂತ ಮುಂದ ಕಂದ ಬಣ್ಣ, ಅಗಲ ಹಣಿ,

ಗೋದಾ : ನಾನಂತೂ ಸೂಟ-ಬೂಟ ಹಾಕ್ಕೊಂಡಿರ್ತಾನಂತ ಮಾಡಿದ್ದೆ. ಆದರ ಇವಾ ಧೋತರಾ, ಅಂಗಿ, ಮ್ಯಾಲ ಕೋಟ ಹಾಕ್ಕೊಂಡಂಗ ಕಾಣಸ್ತದ.

ಭಾಗಾ : ಆದರೂ ರಾಜಾನ ರೂಪ ಮುಚ್ಚತಾದೇನು? ಕೂಸು ಗೋದಾ ಕೆಳಗ ಕೂಡು. ಕಣ್ತುಂಬಾ ನೋಡಿದೆ ತೊಂದರಿ ಆದರೂ ಚಿಂತಿ ಇಲ್ಲ.

[ಡಾಕ್ಟರ್ ಅಂಬೇಡ್ಕರ ಜಿಂದಾಬಾದ್, ಡಾಕ್ಟರ್ ಅಂಬೇಡ್ಕರ್ ಜಿಂದಾಬಾದ ನಮ್ಮ ಹೋರಾಟ ಯಾವುದಕ್ಕಾಗಿ ? ಮಾನುಷ್ಯತ್ವದ ಹಕ್ಕುಗಳಿಗಾಗಿ- ಡಾ. ಅಂಬೇಡ್ಕರ ಅವರಿಗೆ ಜಯವಾಗಲಿ.... ಎಂಬ ಘೋಷಣೆ ಏರುತ್ತ ಹೋಗುತ್ತದೆ]

ಅಂಬೇಡ್ಕರ	:	ನನ್ನ ಸೋದರ ಸೋದರಿಯರೆ ತಾವು ನನಗೆ...
ಭಾಗಾ	:	ಡಾಕ್ಟರ್ ಸಾಹೇಬ ಮಾತಾಡತಾರೇನ ಗೋದಾ?
ಗೋದಾ	:	ಧನಿ ಭಾಳ ಸವಿ ಅದ ಮನಸ್ಸಿನೊಳಗ ಮುಚ್ಚಿ ಇಟಕೋಬೇಕು ಅನಸ್ತದ.
ಭಾಗಾ	:	ನನಗಿಷ್ಟು ಕೇಳಾಕ ಬಿಡಲ್ಲಾ, ನಿಂದ ಹಚ್ಚಿದೆಲ್ಲ ಪುರಾಣಾ
ಗೋದಾ	:	ಕೇಳ ನನ್ನವ್ವ ಕೇಳು,
ಅಂಬೇಡ್ಕರ	:	ಈ ವೇದಿಕೆಯ ಮೇಲೆ ಕಾಲಿಟ್ಟಾಗ ತಾವೆಲ್ಲ ಕೈಯಲ್ಲಿಯ ಕೋಲುಗಳನ್ನೆತ್ತಿ, ನಮಸ್ಕಾರ ಮಾಡಿದಿರಿ. ನಾನದಕ್ಕೆ ಪೂರ್ತಿ ಆಭಾರಿಯಾಗಿದ್ದೇನೆ. ನಿಮ್ಮ ಕೈಯೊಳಗಿನ ಕೋಲುಗಳ ಮಹಿಮೆ ಹ್ಯಾಂಗ್ ಹೇಳೊದು ? ಸಮಗಾರರಿಗೆ ರೆಂಪಿ, ವಡ್ಡರಿಗೆ ಸುತಗಿ, ರೈತರಿಗಿ ನೇಗಿಲಾ ಇದ್ದಾಂಗ ಹರಿಜನರಿಗೆ ಕೋಲುಗಳು. ಇಂಥ ಕೋಲುಗಳಿಗೆ ಬೆತ್ತಗಳಿಗೆ ಗೆಜ್ಜೆಯಾಕ ಬೇಕು ? ಕೋಲು ಚಂದ ಕಾಣಬೇಕೆಂತೇನು? ಇಲ್ಲ ಇದು ಅಸ್ಪೃಶ್ಯರಾದ ನಿಮ್ಮ ಗುರುತು ನೀವು ದಾರಿಯೊಳಗ ಕೋಲು ಅಪ್ಪಳಿಸುತ್ತ ನಡೀಬೇಕು. ಗೆಜ್ಜಿ ಸಪ್ಪಳದಿಂದ ಹೋಗು ಬರುವ ಸವರ್ಣಿಯರಿಗೆ ಹೊಲೆಯರು ಬಂದರೆಂದು ಗೊತ್ತಾಗುತ್ತಿತ್ತು. ಮೈಲಿಗೆ ಆಗಬಾರದಂಥ ವಿಚಾರ ಮಾಡೋದು. ಇಂಥ ಕೋಲುಗಳನ್ನೆತ್ತಿ ನನಗ ಗೌರವ ಸಲ್ಲಿಸಿದಿರಿ ಆ ಕೋಲುಗಳು ಗೆಜ್ಜೆಯ ಧ್ವನಿ ಶಂಖದ ಧ್ವನಿ ಹಾಂಗ ನನ್ನ ಕಿವಿಗಿ ಕೇಳಸಾಕ ಹತ್ಯಾದ. ಹರಿದು ಒಗೆಯಿರಿ ಆ ಗುಲಾಮಗಿರಿ ಗುರತಾ. ಅದು ನಿಮ್ಮ ಜೊತೆಗಿದ್ದರ ಮನುಷ್ಯರೊ ಎಂಬ ಪ್ರಗ್ನ್ಯಾ ಜಪಿಸುತ್ತಿರಬೇಕಾಗತದ ನೀವೆಲ್ಲ ಹೆಚ್ಚು ಹೆಚ್ಚು ಕಲಿಯಬೇಕು ಒಂದು ಸಾವಿರ ಮಕ್ಕಳು ನಾಲ್ಕನೆ ಇಯತ್ತೆ ಪಾಸಾಗುವದಕ್ಕಿಂತ ಒಬ್ಬ ಹುಡುಗ ಪದವೀಧರನಾದರೂ ನಡೆದೀತು. ಅದಕ್ಕಾಗಿ ಉಚ್ಚ ಶಿಕ್ಷಣದ ಕಡೆಗೆ ಲಕ್ಷ್ಯ ಕೊಡಬೇಕು. ನನ್ನ ಪರಿಚಯ ರಾಮಚಂದ್ರ ಮೋರೆ ಮಾಡಿಕೊಟ್ರು. ನಾನು ಉಚ್ಚ ಶಿಕ್ಷಣ ಪಡೆದೀನಿ. ಆದರ ಹೊಲೆಯ ಇಷ್ಟು ಕಲಿಯ ತಾನೇನು? ಅಂತ ಸವರ್ಣಿಯರಿಗೆ ನಂಬಿಕೆ ಇಲ್ಲ. ಶಿಕ್ಷಣ ಕೇವಲ ಬ್ರಾಹ್ಮಣರಿಗೆಂಬ ಸ್ವಾರ್ಥ, ವಿಚಾರದ ಫಲ. ನೀವೂ ಕಲಿಯಿರಿ. ಹೆಚ್ಚು ಹೆಚ್ಚು ಕಲಿಯಿರಿ. ನೌಕರಿಗಳನ್ನು ಹಿಡಿಯಿರಿ. ಆಗ ಮಾತ್ರ ನಿಮ್ಮ ಉದ್ಧಾರಾಗಬಹುದು. ನಾವೆಲ್ಲ ಸರ್ಕಾರಕ ಅನುಕೂಲಸ್ಥರಾಗಿ ಇರ್ತೀನಿ ಅದಕ್ಕಾಗಿ ಸರಕಾರ ನಮ್ಮನ್ನು ನಿರ್ಲಕ್ಷ್ಯ ಮಾಡತದ. ಸರಕಾರ ಕೊಟ್ಟದ್ದು ತೆಗೆದುಕೊಳ್ಳದು.

ಹೇಳಿದ್ದನ್ನು ಕೇಳುದು ನಮ್ಮ ಗುಲಾಮಗಿರಿಗಿ ಈಡು ಮಾಡ್ಯಾವ. ಆದ್ದರಿಂದ ಸ್ವಾಭಿಮಾನಿಗಳಾಗಿರಿ ನಿಮ್ಮ ಶಕ್ತಿಯ ಅರಿವು ನಿಮಗಾಗ ಬೇಕು. ಬಿಳಿ ಬಟ್ಟೆಯ ಪ್ರತಿಷ್ಠಿತ ಜನ ನಮ್ಮನ್ನು ಕಂಡು ಆದರದಿಂದ ನಮಸ್ಕಾರ ಮಾಡೋ ಸುಸಂಸ್ಕೃತರಾಗಬೇಕು.

ಮನುಷ್ಯತ್ವದ ಹಕ್ಕಿಗಾಗಿ ನಾವೆಲ್ಲ ಇಲ್ಲಿ ಕೂಡದೀವಿ. ಮಹಾಡದ ಈ ಚೌದಾರ ಕೆರಿ ಅಸ್ಪೃಶ್ಯರಿಗಾಗಿ ತರದದ. ನಾವು ಮುಕ್ತ ಮನಸ್ಸಿನಿಂದ ನೀರಿನ ಸ್ವಾದ ಸವಿಬೇಕು. ಹೆದರೊ ಕಾರಣ ಇಲ್ಲ. ನೀವಷ್ಟೇ ಅಲ್ಲ. ಗೋವಿಂದರಾವ್ ಚಿತ್ರಯರಂಥ ಸವರ್ಣೀಯ ಜನ ನಿಮ್ಮ ಹೆಗಲಿಗೆ ಹೆಗಲು ಕೊಟ್ಟು ಜೊತೆಗಿದ್ದಾರೆ.

ಚಿತ್ರೆ : ಹೌದು ನಾವು ನಿಮ್ಮ ಜೊತೆಗಿದ್ದೇವಿ. ನಾವೆಲ್ಲ ಮಹಾಡ ಸಭೆಯ ನಿರ್ಣಯ ಜಾರಿಗೆ ತರೋಣ ಬನ್ನಿ ಡಾಕ್ಟರ ಸಾಹೇಬ.

ಅಂಬೇಡ್ಕರ : ಶಹಬಾಶ್ ಚಿತ್ರೆ, ನಡೆಯಿರಿ ಗೋವಿಂದರಾವ್, ಎದ್ದೇಳಿರಿ ಗೆಳೆಯರೆ ಇಚ್ಛೆಯುಳ್ಳವರು ನಮ್ಮ ಜೊತೆಗೆ ಬರಬೇಕು. ಎಲ್ಲರೂ ಒಂದಾಗಿ ಶಿಸ್ತಿನಿಂದ ಹೋರಾಡ ಬೇಕಾಗಿದೆ. ನಡೀರಿ.

[ಡಾಕ್ಟರ ಅಂಬೇಡ್ಕರರಿಗೆ ಜಯವಾಗಲಿ ಘೋಷಣೆ]

['ಮೋರೆ ಜನರಿಗೆ ಹೇಳಬೇಕು. ಘೋಷಣೆ ಬಂದ ಮಾಡಿ ಶಾಂತಿಯಿಂದ, ಶಿಸ್ತಿನಿಂದ ನಡಿಬೇಕಂತ. ಮೋರೆ ಮುಂದೆ ನಡೆಯುತ್ತಾರೆ. ಅದೇ ವೇಳೆಗೆ ರಂಗದ ಮೇಲೆ ಕತ್ತಲು ತುಂಬಿ ಮತ್ತ ಬೆಳಕಾಗುತ್ತದೆ. ಮೆರವಣಿಗೆ ಚೌದಾರ ಕೆರೆಯ ಹತ್ತಿರ ಬಂದಿದೆ]

ಗೋವಿಂದರಾವ್ : ಡಾಕ್ಟರ ಸಾಹೇಬ ನಿಮ್ಮ ಧೀರ ಗಂಭೀರ ಹೆಜ್ಜೆಗಳಿಂದ ಚೌದಾರ ಕೆರೆಯ ಮೆಟ್ಟಲಾ ಪವಿತ್ರಾದವು ಇಷ್ಟು ದಿವಸ ಈ ಮೆಟ್ಟಿಲುಗಳು....

ಅಂಬೇಡ್ಕರ : ದಲಿತ ಹೆಜ್ಜೆ ಇಡದ ವಂಚಿತವಾಗಿದ್ದು ಗೋವಿಂದರಾವ್ ಇದಕ್ಕೆಲ್ಲಾ ಕಾರಣ ನಮ್ಮ ಹಿರೇರು. ಅವರಿಗಿ ಎಂದೂ ಹೊಳಿಲೇ ಇಲ್ಲ. ನಿಸರ್ಗದ ದೇಣಿಗೆಯಾಗಿದ್ದ ಈ ನೀರಿನ ಮ್ಯಾಲ ಸವರ್ಣರಿಗಿ ಇರುವಷ್ಟು ಹಕ್ಕು ತಮಗೂ ಅದ ಅಂತ ಹೋಳಿಲೇ ಇಲ್ಲ.

ಗೋವಿಂದರಾವ್ : ಡಾಕ್ಟರ ಸಾಹೇಬ ಈ ಚೌದಾರ ಕೆರಿಯ ನೀರನ್ನು ಬೊಗಸಿಯೊಳಗ ತುಂಬಿಕೊಂಡು ಮನುಷ್ಯತ್ವದ ಹಕ್ಕನ್ನು ಸಾಬೀತ್ ಮಾಡಿರಿ. ಹಿಂಗ್ಯಾಕ ಒಮ್ಮಿಲೆ ಗಂಭೀರ ಆದ್ರಿ?

ಅಂಬೇಡ್ಕರ : ಗೋವಿಂದರಾವ ಈ ಚೌದಾರ ಕೆರಿಯ ದಂಡಿಮ್ಯಾಲಿನ ಈ ಸುಂದರ ನಿಸರ್ಗದೊಳಗಿನ ಗಿಡ - ಮರ ನೋಡಿದಿರೇನು ? ಆ ಮರಕ್ಕ ಸಂತೋಷದಿಂದ ಸುತ್ತಿಕೊಂಡ ಬಳ್ಳಿ ನೋಡಿದಿರೇನು ? ನನಂಗತೂ ಇದರಲ್ಲಿ ತಾಯಿ ಮಗುವಿನ ಪ್ರೀತಿ ವಾತ್ಸಲ್ಯ ಕಾಣಿಸ್ತದ. ಈ ಕೆರೆಯ

ಶಾಂತ ನೀಲಿಮಯ ನೀರು ಇವತ್ತು ಪ್ರೀತಿಯಿಂದ ಜೀವನ ಸಂಗೀತ ಹಾಡಲಿಕ್ಕ ಹತ್ತೇದ. ಆ ಹಾಡು ಅಂತರಂಗಕ್ಕೆ ಕೇಳಿ ಬರತ್ತಾ ಇದೆ... ಮಕ್ಕಳೇ ನಿಮ್ಮ ಸ್ಪರ್ಶಕ್ಕಾಗಿ ಯುಗ ಯುಗಗಳಿಂದ ಕಾಯುತ್ತಾ ಇದ್ದೇನೆ. ಬನ್ನಿ ನನ್ನ ಸ್ಪರ್ಶಮಾಡಿ ಮತ್ತು ಪಾವನಮಾಡಿ ಯಾರು ನನ್ನನ್ನು ಯುಗ ಯುಗಗಳಿಂದ ಬಂಧಿಸಿ ಇಟ್ಟಿದ್ದರೋ ಅವರ ಹಿಡಿತದಿಂದ ನನ್ನನ್ನು ಬಿಡುಗಡೆ ಮಾಡಿರಿ.

ಗೋವಿಂದರಾವ್ : ನಾನು ಈ ನೀರು ಮುಟ್ಟಿದ ಮ್ಯಾಲ ಅದು ಇವತ್ತು ಸ್ವತಂತ್ರವಾಗತದ ನೀರಿಗಿ ನಾನು ಸ್ವಾತಂತ್ರ್ಯ ಕೊಡುವನಿದ್ದೀನಿ.

[ಡಾಕ್ಟರ ಬೊಗಸೆ ನೀರು ಕುಡಿಯುತ್ತಾರೆ]

ಗೋವಿಂದರಾವ್ : ಈ ನೀರನ್ನು ಮುಟ್ಟತಾ ಇದ್ದಾಗ ನನ್ನ ಮನಸ್ಸು ತುಂಬ ಪ್ರಸನ್ನ ಆಯಿತು! ನೋಡಿರಿ, ಈ ಬೊಗಸೆ ತುಟಿಗೆ ಹಚ್ಚುತ್ತಿದ್ದಂತೆ ಯುಗ ಯುಗಗಳಿಂದ ಒಣಗಿದ ತುಟಿಗಳು ಪ್ರೀತಿಯಿಂದ ಹೇಗೆ ಒದ್ದೆಯಾಗಿವೆ ? ಇವತ್ತು ನಾನು ಮನುಷ್ಯನಾಗಿದ್ದೀನಿ, ಗೋವಿಂದರಾವ್ ಇವತ್ತು ನಾನು ಮನುಷ್ಯನಾಗಿದ್ದಿನಿ.

ಗೋವಿಂದರಾವ್ : ನಿಮ್ಮೊಂದಿಗಿ ಇವತ್ತು ಸಾವಿರಾರು ದಲಿತರು ಮನುಷ್ಯರಾಗತಿದ್ದಾರೆ. ನೋಡ್ರಿ ಸಾವಿರಾರು ಕೈಗಳು ನಿಮ್ಮನ್ನು ಅನುಸರಿಸಿದಾವ, ಧನ್ಯ ಆಗತ್ತಿದ್ದಾವ.

[ಅನೇಕ ಜನ ಬೊಗಸೆ ತುಂಬ ನೀರು ಕುಡಿಯುತ್ತಿದ್ದಾರೆ... ಅಂಬೇಡ್ಕರ ಜಯ ಘೋಷ ಮಾಡುತ್ತಿದ್ದಾರೆ]

ಅಂಬೇಡ್ಕರ : ಗೋವಿಂದರಾವ್ ಧನ್ಯರು ಅವರೆಲ್ಲ, ನಾನು ಧನ್ಯ ಈ ಸಾವಿರು ಕೈಗಳು ನನ್ನ ಬೆನ್ನ ಹಿಂದೆ ಇರದಿದ್ದರೆ ಈ ಕೆರೆಯ ಮೆಟ್ಟಲು ಕೂಡಾ ನಾನು ತುಳಿಯುತ್ತಿರಲಿಲ್ಲ.

ದೃಶ್ಯ -೩

[ಅಂಬೇಡ್ಕರ ಮನೆ ಅವರೆ ಬರುತ್ತಿದ್ದಾರೆ]

ಅಂಬೇಡ್ಕರ : ರಮಾ, ರಮಾ [ಬಾಗಿಲಿನಿಂದ ಒಳಗೆ ಬರುತ್ತಾರೆ] ರಮಾ ನೋಡಿಲ್ಲಿ ನಾವೆಲ್ಲ ಬಂದೆವು, ಸಮಸ್ತ ಜಗತ್ತು ಕೌತುಕ ಪಡುವಂಗ ಕೆಲಸ ಮಾಡಿ ಮಾಡಿ ಬಂದೇವಿ. ನಾವು ಕೂಗತಾ ಬಂದ್ರ ನೀನು ಜಗಲಿಯ ದೇವರ ಹತ್ತಾರ ಇನ್ನು ನಮ್ಮ ಸ್ವಾಗತಾ ಅಂತೂ ದೂರ ಉಳೀತು ಕಣ್ಣೆತ್ತಿ ಕೂಡಾ ನೋಡಿಲ್ಲ! ದೇವರ ಹತ್ತರ ಕೂತು ನೀ ಏನ ಮಾಡುತ್ತಿರುವಿ ರಮಾ ?

ರಮಾಬಾಯಿ	:	[ಬಿಕ್ಕಳಿಸುತ್ತ] ನೀ ನೀ ನೀವು ಬಂದಿರಿ ನಾನು ಭಾಗ್ಯಶಾಲಿ ದೇವರು ನನ್ನ ಮಾತು ಕೇಳಿದಾ.
ಅಂಬೇಡ್ಕರ	:	ರಮಾ ನೀ ಅಳುತ್ತಿದ್ದೀ? ಅಳಬೇಡ ರಮಾ,
ರಮಾ	:	ಅಳುತ್ತಾ, ನೀ.. ನೀವು ಆರಾಮವಾಗಿದ್ದೀರಲ್ಲ?
ಅಂಬೇಡ್ಕರ	:	ಚೆನ್ನಾಗಿದ್ದಿನಿ. ನಿಜವಾಗಿಯೂ ಹಿಂಗ್ಯಾಕ ನೋಡಾಕ ಹತ್ತೀದಿ ?
ರಮಾ	:	ನೀವು ಮಹಾಡಕ್ಕ ಹೋದಾಗಿಂದ ನನಗಿಲ್ಲ ಜೀವದಾಗ ಜೀವ ಇಲ್ಲ. ಇಲ್ಲಿ ಜನರೆಲ್ಲ ಏನೇನೊ ಮಾತಾಡ್ತಿದ್ರು ಮಹಾಡದೊಳಗೆ ದಂಗೆ ಸಾರು ಆಗೇದ, ಡಾಕ್ಟರ ಸಾಹೇಬರಿಗೆ ಪೆಟ್ಟ ಆಗ್ಯಿದ ಅಂತ. ಅದಕಂತನ ನಾನು ದೇವರ ಬಳಿ (ಮಾತು ಅರ್ಧಕ್ಕೆ ನಿಲ್ಲುವದು)
ಅಂಬೇಡ್ಕರ	:	ನನ್ನ ಸಲುವಾಗಿ ಎಷ್ಟಂತ ಚಿಂತ ಮಾಡುವಿ? ರಮಾ? ಈ ಚಿಂತಿಯೊಳಗ ನೀನು ಸ್ವಂತದ ಕಾಳಜಿ ತೊಗೊ ಅಂದ್ಹಾಂಗ ನಮ್ಮ ಯಶವಂತ ಎಲ್ಲಿ ಕಾಣಸ್ತಿಲ್ಲ ?
ರಮಾ	:	ಹುಡುಗರೊಂದಿಗೆ ಅಲ್ಲಿ ಆಡಾಕ ಹತ್ತಿರಬೇಕು.
ಅಂಬೇಡ್ಕರ	:	ಹೀಂಗ ಆಡಾಕ ಹತ್ತಿದರ ಅವನು ಅನಾಡಿಯಾದಾನು !
ರಮಾ	:	ಅವನ ತಂದೆ ಅವನ ಕಡೇ ಲಕ್ಷ್ಯ ಹಾಕಲಿಲ್ಲಂದ್ರ ಅವನಾದ್ರು ಏನ ಮಾಡಬೇಕು.
ಅಂಬೇಡ್ಕರ	:	ರಮಾ ನನ್ನಿಂದ ಅವನು....
ರಮಾ	:	ಭಾವ ಬಂದಿದ್ದರು.
ಅಂಬೇಡ್ಕರ	:	ಬಾಳಾರಾಮ ಬಂದಿದ್ನೇನು ?
ರಮಾಬಾಯಿ	:	ಹೌದು ವಕೀಲ ಕೆಲಸದೊಳಗ ಲಕ್ಷ್ಯ ಹಾಕಿದರ ಒಳ್ಳೇದು, ಉಳಿದ ಪಂಚಾಯತಿ ತಗೊಂಡು ಏನು ಲಾಭ ಆಗುವಾದ? ಅಂತ ಹೇಳತಿದ್ರು.
ಅಂಬೇಡ್ಕರ	:	ಮನುಷ್ಯತ್ವದ ಹಕ್ಕಿಗಾಗಿ ಹೋರಾಡುವಾಗ ಜೀವ ಹೋದರೂ ಸಾರ್ಥಕ ಆಗ್ತದ.
ರಮಾ	:	ನಿಮ್ಮದೇನೂ ಸರಿ ಸಾಹೇಬ್ರೆ ನಮ್ಮದೇನು ? ನಿರಾಧಾರರ ಮ್ಯಾಲ ಬಿದ್ದರ ಅವರ ಗತಿ ಏನು? ನಿಮ್ಮ ಕಾಲಿಗೆ ಗಾಯ ಕಾಣ್ತಾದಲ್ಲ ? (ರಮಾಬಾಯಿ ಗಾಬರಿಯಾದ್ಯಳು)
ಅಂಬೇಡ್ಕರ	:	ಆಂ..... ಇದ ಹೌದು ! ಏನು ಆಗಿಲ್ಲ.
ರಮಾ	:	ಅಂದ್ರ ಮಹಾಡದೊಳಗ ದಂಗೆ ಎದ್ದಿದ್ದು ಖರೇ ಅದ. ಯಾಕೀಗ ಸುಮ್ಮನಾದ್ರಿ. ಖರೇ ಹೇಳ್ರಿ. ಈ ಗಾಯ ದಂಗಿಯೊಳಗ ಆಗಿರ ಬೇಕಲ್ಲ ?

ಅಂಬೇಡ್ಕರ : ಈ ಗಾಯ ತೊಗೊಂಡು ಏನ ಮಾಡತೀದಿ ರಮಾ ? ಈ ಹೃದಯದ ಮ್ಯಾಲೀನ ಅಸಂಖ್ಯಾ ಗಾಯಗಳು ನ್ಯಾಯದ ಸಲುವಾಗಿ ಚೀರಾಕ್ಹತ್ಯಾವ.....

ರಮಾ : ನಿಮ್ಮ ಈ ಮಾತು ಜಗಳಾಡಿದ್ಹಾಂಗ ಕಾಣ್ತದ. ಈ ಗಾಯ ಖರೇ ಹೇಳ್ರಿ..... ನನ್ನ ಆಣೆ ಮಾಡಿ....

ಅಂಬೇಡ್ಕರ : ನೀನು ಕೇಳಿದ್ದು ಖರೇ ಅದ ರಮಾ ಮಹಾಡದೊಳಗ ದಂಗೆ ಆತು. ನನ್ನ ಇಪ್ಪತ್ತು ಜನ ಗಾಯಗೊಂಡು ದವಾಖಾನೆಯೊಳಗದಾರ ನೋವಿನಿಂದ ಬಿದ್ಹಾಡುವ ನನ್ನ ಜನರಿಗೆ ಸಾಂತ್ವನಕ್ಕಿಂತ ಹೆಚ್ಚು ಏನೂ ಮಾಡಲಿಕ್ಕಾಗ್ಲಿಲ್ಲ. ಶಾಂತ ರೀತಿಯಿಂದ ಕೆರಿ ನೀರು ಕುಡುದು ಕರ್ತವ್ಯ ನಿಭಾಯಿಸಿದ ಸಂತೋಷದಲ್ಲಿರುವಾಗ ಸಂಪ್ರದಾಯವಾದಿಗಳು ಅವಕಾಶ ಸಾಧಿಸಿ ಬಿಟ್ಟರು. ಹೊಲೆಯರು ಇವತ್ತು ಕೆರಿ ಬಳಿಸಿದರು. ಇನ್ಮುಂದ ವಿಶ್ವೇಶ್ವರ ಮಂದಿರ ಬಳಸ್ತಾರ ಅಂತ ಸುಳ್ಳ ಸುದ್ದಿ ಹಬ್ಬಿಸಿ ಜನರ ಭಾವನೆ ಉದ್ರೇಕಿಸಿದರು. ಶಿವರುದ್ರ ಕಾರ್ಯದರ್ಶಿ ಮನಿಮ್ಯಾಲ ಹಲ್ಲೆ ಮಾಡಿದರು. ಚಿತ್ರೆಯವರಿಗಿ ಹೊಡೆಯಲು ಮುತ್ತಿಕೊಂಡು ಬಂದರು. 'ನನ್ನ ನಿರಾಪರಾಧಿ ನಿಶಸ್ತ್ರ ಜನರ ತಲೆ ಒಡೆದರು. ಮತ್ತು ನಾನು......

ರಮಾ : ಅಂದ್ರ ಈ ಗಾಯ?

ಅಂಬೇಡ್ಕರ : ಈ ಸಣ್ಣ ಗಾಯದ ಸಲುವಾಗಿ ಇಷ್ಟೊಂದು ಚಿಂತಿ ಮಾಡೊಕ್ಕಿಂತ ಯಾರು ತಮ್ಮ ಜೀವ ಅಂಗೈಯಲ್ಲಿ ಹಿಡಿದುಕೊಂಡು ಸತ್ಯಾಗ್ರಹ ಮಾಡಿದರೊ,ತಮ್ಮ ತಲೆಗಳನ್ನು ಒಡೆದುಕೊಂಡರೊ, ಆ ಜೀವಿಗಳಿಗೆ ಜೀವ ಕೊಡುವ ನನ್ನ ಜನರ ಗಾಯಗಳ ಸಲುವಾಗಿ ವಿಚಾರಮಾಡಿ ನೋಡು, ಅವರಲ್ಲಾ ದವಾಖಾನೆಯಲ್ಲಿ ಒದ್ಹಾಡ್ತಾ ಬಿದ್ದಿರುವಾಗ ರಮಾ ಯಾರು ಸ್ವತಂತ್ರ್ಯಕ್ಕಾಗಿ ಮಾತ್ರ ವಿಚಾರ ಮಾಡ್ತಾರೂ ಅವರೂ.....

ರಮಾ : (ಅಸ್ಪಷ್ಟ ಬಿಕ್ಕಳಿಕೆ) ನನ್ನದು ತಪ್ಪಾಯಿತು.

ಅಂಬೇಡ್ಕರ : ಇಲ್ಲ ರಮಾ ನಿಂದೇನೂ ತಪ್ಪಿಲ್ಲ ನಿನ್ನ ಈ ಹಗುರಾದ ಮನಸ್ಸು ಒಮ್ಮೊಮ್ಮೆ ತಿಳಿಯಾದ ಮನಸ್ಸಿನ ಹಾಂಗ ಸ್ವಚ್ಛ ಅದ. ನಾನಂತೂ ಯಾವಾಗಲೂ ಹೊರಗ ಇರುವವ, ನಾನು ಏನು ಮಾಡಲಿ?(ಧ್ವನಿ ನಡುಗುತ್ತದ) ನಾನು ಏನು ಮಾಡಲಿ ರಮಾ ? ಮನಸಿನಾಗ ಅದೇಷ್ಟು ಅವಮಾನ ಗಾಯಗಳು ಸದಾ ಉರಿಯುತ್ತಿರತಾವ. ಇಷ್ಟೊಂದು ವಿದ್ವತ್ ಸಂಪಾದಿಸಿದೆ. ಆದರೆ ಯಕಶ್ಚಿತ್ ಒಬ್ಬ ಸಿಪಾಯಿ ಮ್ಯೆಲಿಗೆ

ಆಗತದಂತ ಫಾಯಿಲನ್ನು ದೂರದಿಂದ ಒಗಿದನು. ಒಮ್ಮೆ ಅನಸ್ತದ ರಮಾ ಹೀಂಗ ಅವಮಾನದಿಂದ ಬದಕೂದಕಿಂತ ... (ನಿಟ್ಟುಸಿರು)

ರಮಾ : ಸಾಕು ಮಾಡಿರಿ, ಸಾಕು ಮಾಡಿರಿ, ಜೀವಕ್ಕ ಎಷ್ಟಂತ ತೊಂದರೆ ಮಾಡಿಕೊಳ್ಳುತ್ತೀರಿ ನನಗ ಅಳಬಾರದೆಂದು ಹೇಳ್ತಿದ್ದ ನೀವೇ.... ನಿಮ್ಮ ಕಣ್ಣಲ್ಲಿ...... ನೀರು?........ (ಬಿಕ್ಕುವಳು)

ಅಂಬೇಡ್ಕರ : (ನಡಗುವ ಧ್ವನಿ) ರಮಾ ! ರಮಾ!! (ಇಬ್ಬರೂ ಅಪ್ಪಿಕೊಂಡು ಬಿಕ್ಕುವರು)

ದೃಶ್ಯ -೪

[ಡಾಕ್ಟರ ಅಂಬೇಡ್ಕರ ಅವರ ಕಾರ್ಯಾಲಯ ಭಾವುರಾವ ಗಾಯಕವಾಡ ಬರುತ್ತಾರೆ]

ಗಾಯಕವಾಡ : ಸಾಹೇಬರ ಒಳಗ ಬರತೀನು?

ಅಂಬೇಡ್ಕರ : ಅಂ ಹುಂ ಬರ್ರಿ ಏನು ?

ಗಾಯಕವಾಡ : ನಾನು ಬಾವುರಾವ ಗಾಯಕವಾಡ ನಾಶಿಕ ಭಾಗದಿಂದ ಬಂದೀನಿ.

ಅಂಬೇಡ್ಕರ : ಕೂಡ್ರಿ.

ಗಾಯಕವಾಡ : ಸಾಹೇಬರ ನಿಮ್ಮ ಬಗ್ಗೆ ಕೇಳಿದ್ದೀನಿ ಓದಿದೀನಿ. ಬಹಿಷ್ಕೃತ್ ಭಾರತ ದೊಳಗಿನ ನಿಮ್ಮ ಲೇಖನವಂತೂ.....

ಅಂಬೇಡ್ಕರ : ನೋಡ್ರಿ ನನ್ನ ಹತ್ತಿರ ಒಂದು ನಿಮಿಷ ಕೂಡ ಟಾಯಮಿಲ್ಲ. ನನ್ನ ಟೇಬಲ್ ಮ್ಯಾಲೆ ಹರಡಿದ ಕೆಲಸ ನೋಡ್ರಿ, ಪ್ಲೀಜ್.

ಗಾಯಕವಾಡ : ಡಾಕ್ಟರ್ ನನಗೆ ಅವರ ಬಗೆಗೆ ಗೊತ್ತದ. ಹೆಚ್ಚು ವ್ಯಾಳ್ಯಾ ತೆಗೆದು ಕೊಳ್ಳೊದಿಲ್ಲ. ಎರಡು ನಿಮಿಷ ಮಾತ್ರ. ನಾನೊಬ್ಬ ಸಣ್ಣ ಕಾರ್ಯಕರ್ತ. ಸಮಾಜ ಸೇವಾ ಮಾಡೊ ಹಂಬಲ ಅದ. ಮಹಾಡದ ಚೌದಾರ ಕೆರೆಯ ಸತ್ಯಾಗ್ರಹದ ಬಗ್ಗೆ ಓದಿದೆ. ನಿಮ್ಮ ರೂಪದಲ್ಲಿ ಸಮಾಜಕ್ಕ ದೊಡ್ಡ ನೇತೃತ್ವ ದೊರೆಕಿದಂತಾಗೇ ನಿಮ್ಮ ನಾಯಕತ್ವದೊಳಗ ಕೆಲಸಾ ಮಾಡಲು ನನಗ ಭಾಳ ಸಂತೋಷ ಅನಿಸ್ತದ ಇದನ್ನು ನಾನು ಮನಸಾ ಹೆಳ್ತೀದೀನಿ.

ಅಂಬೇಡ್ಕರ : ಸಂಸಾರದ ಮ್ಯಾಲೆ, ಮನೆ ಬಾಗಿಲ ಮ್ಯಾಲೆ ನೇಗಿಲು ತಿರಿಗಿಸಿಕೊಳ್ಳೊ ಆಶೆ ಅದ ಏನು ? ಸಮಾಜ ಕಾರ್ಯ ಅಂದ್ರ ಹಂಚಿನ ಮ್ಯಾಲಿರೋ ಹೋಳಿಗೆ ಏನು ? ಅವಮಾನ ಅನಾಚಾರಗಳು ಜೀವ ಹಿಂಡತಿರತಾವ.

ಗಾಯಕವಾಡ : ನಿಮ್ಮ ಒಂದು ಶಬ್ದಕ್ಕಾಗಿ ಪ್ರಾಣವನ್ನು ಕೊಡಲು ಸಿದ್ಧನಿದ್ದೇನೆ.

ಅಂಬೇಡ್ಕರ : ನಿಮ್ಮ ಹೆಸರು ಭಾವುರಾವ್ ಗಾಯಕವಾಡ ಅಂತ ಹೇಳಿದಿರಲ್ಲ. ನೋಡ್ರಿ ಭಾವುರಾವ......... ಈ ಗೋವಿಂದರಾವ್ ಅನ್ನೊ ಒಬ್ಬ

ಉತ್ಸಾಹಿ ತರುಣನ ಪರಿಚಯ ಮಾಡಿಕೊಡತ್ತೀನಿ ಏ, ಬಾವು....... ಹೊರಗೆ ಯಾರಾದರೂ ಬಂದರೇನು? (ಸ್ವಲ್ಪ ಜೋರಾಗಿ) ಅರೆ ಒಳಗಡೆ ಬಾ ಅಂತ ಹೇಳು (ಒಳಗೆ ಬಂದ ಮೇಲೆ) ಮೋರೆ ಚಿತ್ರೆ ನೀವು ಏನಿದು ? ಹೊರಗಡೆ ನಿಂತಿರುವಿರಲ್ಲಾ ? ಬರ್ರಿ ಒಳಗ ಬರ್ರಿ ಯಾಕೊ ಸುಸ್ತಾಗಿದಿರಿ. ಈ ಅಸ್ವಸ್ಥ ಏಕೆ ? ಹಾಂ ಇವರ ಪರಿಚಯ ಮಾಡಿ ಕೊಡತೀನಿ ಇವರು ಬಾವುರಾವ ಗಾಯಕವಾಡ' ಸಮಾಜ ಸೇವಕ....

ಚಿತ್ರೆ : ಕೆರೆ ಶುದ್ಧಿ ಮಾಡತ್ತಿದ್ದಾರ ಅದೂ ಆಕಳ ಮಲಮೂತ್ರ ನೀರಿಗಿ ಹಾಕಿ. ದಲಿತರು ಮುಟ್ಟಿದ್ದರಿಂದ ಅಪವಿತ್ರ ಆಗೇದಂತ. ಆಕಳ ಸಗಣೆಯಷ್ಟು ಕಿಮ್ಮತ್ತಿಲ್ಲ ದಲಿತರಿಗೆ.

ಅಂಬೇಡ್ಕರ : ಚಿತ್ರ ಆಗೊದೆ ಇತ್ತು. ಅವರ ಕೆರೆ ಮಾತ್ರ ಶುದ್ಧಿ ಮಾಡಿದರು. ಪೇಶ್ವೆಗಳಿದ್ದರ ತಮಗೆಲ್ಲ ಬಂಡುಖೋರರೆಂದು ಆನೆ ಕಾಲಿಗೆ ಹಾಕ್ತಿದ್ರು. ಚಿತ್ರ ಸಿಟ್ಟು ಮಾಡಿ ಉಪಯೋಗ ಏನು ? ಅವರು ಕೆರೆ ಶುದ್ಧೀಕರಣ ಮಾಡಿದರು. ನಾನು ಮತ್ತೊಮ್ಮೆ ಸತ್ಯಾಗ್ರಹ ಮಾಡೋಣ. ಎಷ್ಟು ಕಾಲ ಶುದ್ಧೀಕರಣ ಮಾಡ್ತಾರೋ ಅಷ್ಟು ಸಲ ಸತ್ಯಾಗ್ರಹ ಮಾಡೋಣ.

ಮೋರೆ : ಬಳಸಿದ ಕೆರೆಯಲ್ಲಿ ಭಾವುರಾವ ಜೋಶಿ ಜಳಕ ಮಾಡಿದಾದರಂತ. ಅವರನ್ನು ಒಣಗಲಿಕ್ಕೆ ಹಾಕಿದ್ದಾರೆ.

ಗೋವಿಂದರಾವ್ : ಯಾವ ನಿರ್ಣಯದ ಮೇಲೆ ಕೆರೆ ಮುಕ್ತಮಾಡಲಾಯಿತೋ ಆ ನಿರ್ಣಯ ಮಹಾನಗರ ಸಭೆ ಹಿಂತೆಗೆದುಕೊಂಡದ.

ಅಂಬೇಡ್ಕರ : ಏನು? ಇದರಿಂದ ಈ ಸಮಾಜವನ್ನು ನೂರು ವರ್ಷ ಹಿಂದ ಬಿದ್ದಂತಾಯಿತು. ಯಾರು ನಿರ್ಣಯ ಜಾರಿಗೆ ತಂದ್ದಿದ್ದರೋ ಅವರೆ ಹಿಂದಕ್ಕೆ ತೆಗೆದು ಕೊಂಡರು.

ಮೋರೆ : ಚೌದಾರ ಕೆರೆ ಖಾಸಗಿಯಂತ. ಅದರ ನೀರು ಅವರಷ್ಟೆ ಉಪಯೋಗ ಮಾಡಬೇಕಂತ. ಅವರು ಆರ್ಡರ ಪಡೆದುಕೊಂಡಿದ್ದಾರ.

ಅಂಬೇಡ್ಕರ : ಮೋರೆ ಹೇಳಿದಂತೆ ಒಂದು ಮಾತು ಕೂಡ ಸಾಮಾಜಿಕ ನ್ಯಾಯಕ್ಕೆ ಸಮೀಪವಿಲ್ಲ. ಈಗ ಸಂಘರ್ಷ ನಡೆದಿದೆ. ಮೋರೆ ಎಲ್ಲಾ ಕಾರ್ಯ ಕರ್ತರಿಗೆ ತೀವ್ರಗತಿಯಲ್ಲಿ ವಿಷಯ ತಿಳಿಸಲು ಹೇಳಿರಿ. ಈ ಭಾವುರಾವ್‌ರ ಸಹಾಯ ತೆಗೆದುಕೊಳ್ಳಿರಿ ಬೇಗನೆ ಮಿಟಿಂಗ್ ಕರೆಯಿರಿ. ಚವದಾರ ಕರೆಯು ಸತ್ಯಾಗ್ರಹ ಮತ್ತ ಘೋಷಿಸಿರಿ. ನ್ಯಾಯ ಸಿಗೋವರೆಗೆ ಈ ಸಂಘರ್ಷ ಜಾರಿಯಲ್ಲಿರಬೇಕು. (ತುತ್ತೂರಿಯ ಧ್ವನಿ)

ದೃಶ್ಯ -೫

[ಮಹಾಡ ಸತ್ಯಾಗ್ರಹಕ್ಕೆ ಜಯವಾಗಲಿ, ದಲಿತರ ಸೂರ್ಯ ಅಂಬೇಡ್ಕರ ಅವರಿಗೆ ಜಯವಾಗಲಿ ಎಂಬ ಘೋಷಣೆಗಳು ಕೇಳಿ ಬರುತ್ತವೆ)

ಚಿತ್ರೆ : ಮೋರೆ ಸತ್ಯಾಗ್ರಹಕ್ಕಾಗಿ ನೆರೆದ ಜನರ ಪ್ರಚಂಡ ಉತ್ಸಾಹ ನೋಡಿದರ ಸತ್ಯಾಗ್ರಹ ಯಶಸ್ವಿ ಆಗೋ ಹಾಂಗ ಕಾಣತದ.

ಮೋರೆ : ಎರಡನೆಯ ಸಲ ನಡೆದ ಸತ್ಯಾಗ್ರಹ ನಿಜ ಹೇಳಬೇಕಂದ್ರ ಚಿತ್ರೆ ಇಷ್ಟು ಪ್ರಮಾಣದಲ್ಲಿ ಜನ ಸೇರತಾರಂತ ನನಗನ್ನಿಸಿರಲಿಲ್ಲ.

ಗಾಯಕವಾಡ : ಜನರೊಳಗಿನ ಉತ್ಸಾಹ ನಿಮಿಷ ನಿಮಿಷಕ್ಕೂ ಹೆಚ್ಚಾಗತಾ ಇದೆ. ಚವದಾರ ಕೆರೆಯ ಕಡೆಗೆ ಹೊರಡಲು ಅಪ್ಪಣೆ ಕೇಳುತ್ತಿದ್ದಾರೆ. ಆದರೆ ಅಂಬೇಡ್ಕರರು ಇನ್ನೂ ..... ಮೋರೆಯವರೆ, ಅಂಬೇಡ್ಕರ ಸಾಹೇಬ್ರರು ಡಿ. ಎಸ್. ಪಿ. ಆಫೀಸಿಗೆ ಹೋದಾಗ ಅರೆಸ್ಟ ಮಾಡಿದಾರೋ? ಏನೋ?

ಮೋರೆ : ಗಾಯಕವಾಡ, ಹಾಗಾಗಿದ್ದರ ಅವರ ಜೊತೆಗಿದ್ದ ಗೋವಿಂದರಾವ್ ಬರುತ್ತಿದ್ದರಲ್ಲ?

ಗಾಯಕವಾಡ : ಅವರನ್ನೂ ಅರೆಸ್ಟ ಮಾಡೂ ಸಾಧ್ಯತಾ ಅದ.

ಚಿತ್ರೆ : ಗಾಯಕವಾಡ ಡಿ.ಎಸ್. ಪಿ. ಅಷ್ಟು ಮೂರ್ಖನಿರಲಿಕ್ಕಿಲ್ಲಾ ಅನಿಸ್ತದ. ಅಂಬೇಡ್ಕರರಿಗೆ ಬಂಧಿಸಿದ ಸುದ್ದಿ ತಿಳಿದರ ಸಾಕು, ಜನರು ಆಫೀಸಿಗೆ ಬರತಾರ. ಅವರನ್ನು ಮಣಿಸೋದು ಪೋಲೀಸರಿಗೂ ಆಗೋದಿಲ್ಲ. ಆ ವಿಚಾರ ಡಿ. ಎಸ್. ಪಿ.ಗೂ ಗೊತ್ತಿರಬೇಕು.

ಗಾಯಕವಾಡ : ಆದರೂ ನಮ್ಮೊಳಗೊಬ್ಬರು ಪೋಲೀಸ ಸ್ಟೇಷನಿಗೆ ಹೋಗಿ ಬರಬೇಕು. ಅನಸ್ತದ [ಅದೇ ವೇಳೆಗೆ ಗಾಡಿ ಬಂದ ಸಪ್ಪಳ ಹಾರ್ನ್] ಅಂಬೇಡ್ಕರರು ಬಂದ್ಹಾಂಗ ಕಾಣ್ತಾರ. [ಘೋಷಣೆ]

ಚಿತ್ರೆ : ಬರ್ರಿ, ಅಂಬೇಡ್ಕರ ಸಾಹೇಬ್ರ ಏನು ಅಂತಿದ್ರು ಡಿ.ಎಸ್.ಪಿ.? ನೀವು ಯಾಕ ಮಾತ್ನಾಡ್ತಿಲ್ಲ? ಗೋವಿಂದರಾವ್ ಏನು ನಡೀತು ? ನೀವು ಡಾಕ್ಟರ ಸಾಹೇಬ್ರ ಜೋತೀಲೆ ಇದ್ದಿರಿಲ್ಲೊ.

ಅಂಬೇಡ್ಕರ : ಹೇಳ್ರಿ ಗೋವಿಂದರಾವ್

ಗೋವಿಂದರಾವ್ : ಡಾಕ್ಟರ ಸಾಹೇಬ್ರ ನಾನು ಹೇಳೊದೇ ಬೇರೆ. ನೀವು ಹೇಳೋದೇ ಬೇರೆ.

ಅಂಬೇಡ್ಕರ : ಹ್ಯಾಂಗ್ ಹೇಳಲಿ ಗೋವಿಂದರಾವ? ನಾ ಇಕ್ಕಟ್ಟಿನೊಳಗ ಸಿಕ್ಕಿ ಹಾಕೊಂಡಿದಿನಿ.

ಗಾಯಕವಾಡ : ಇಕ್ಕಟ್ಟಿನೊಳಗ?

ಅಂಬೇಡ್ಕರ : ಹೌದು ಗಾಯಕವಾಡ ಚೌದಾರ ಕೆರೆಯ ಹದ್ದಿನೊಳಗ ಸರಕಾರ ೧೪೪ನೇ ಕಲಮು ಜಾರಿಗೆ ಮಾಡೇದ. ಸತ್ಯಾಗ್ರಹವನ್ನು ನಿಷೇಧ ಮಾಡೆದ.

ಗಾಯಕವಾಡ : ಅಂದ್ಹಾಂಗ ನಾವೆಲ್ಲ ನಿಷೇಧಾಜ್ಞೆ ಮುರಿದು ಸತ್ಯಾಗ್ರಹ ಮಾಡ ಬೇಕಾಗ್ತದ ಈಗ ಹಿಂದಕ ಸರಿಯೋ ಹಾಗಿಲ್ಲ.

ಮೋರೆ : ಡಾಕ್ಟರ ಸಾಹೇಬ ಗಾಯಕವಾಡ ಹೇಳೋದು ಖರೇ ಅದ ಸತ್ಯಾಗ್ರಹ ಮಾಡಲೇಬೇಕು.

ಅಂಬೇಡ್ಕರ : ಮೋರೆ ನಾನೂ ಹೇಳ್ತಿನಿ. ಸತ್ಯಾಗ್ರಹ ಆಗಲೇಬೇಕು ನಿಷೇಧಾಜ್ಞೆ ಮುರಿಲೇ ಬೇಕು, ಆದರೆ ನಿಷೇಧಾಜ್ಞೆ ಮುರಿದರು ಅಂತ ಪೋಲೀಸರು ಲಾಠಿ ಚಾರ್ಜ್ ಮಾಡಬಹುದು. ನಮ್ಮ ಜನ ಅದಕ್ಕ ಸೊಪ್ಪು ಹಾಕದ ಚೌದಾರ ಕೆರಿಯ ಕಡೆಗೆ ನುಗ್ಗಬಹುದು. ಆಗ ಜನರನ್ನು ತಡಿಯಲಿಕ್ಕೆ ಪೋಲೀಸರು ಗೋಳಿಬಾರ ಮಾಡಬಹುದು. ಮತ್ತು ನಮ್ಮ ಜನಾ ವಿನಾಕಾರಣ ಸರಿಯಬಹುದು.

ಮೋರೆ : ನಾವು ಸಾವಿಗೆ ಹೆದರೋದಿಲ್ಲ ಡಾಕ್ಟರ ಸಾಹೇಬ.

ಅಂಬೇಡ್ಕರ : ಮೋರೆ ಇಲ್ಲಿ ಸಾವಿಗೆ ಯಾರ ಹೆದರ್ತಾರ? ಈ ಚಿತ್ರ ಹೆದರ್ತಾರೇನು? ಈ ಗೋವಿಂದರಾವ್ ಹೆದರತಾರೇನು ? ಏನು ನಾ ಹೆದರತೀನಿ? ಇಲ್ಲಿ ಯಾರು ಹೆದರತಾರ ಸಾವಿಗೆ ? ಇಲ್ಲಿರೂ ಒಬ್ಬೊಬ್ಬರು ತಮ್ಮ ಜೀವ ಅಂಗೈಯಲ್ಲಿ ಹಿಡಿದುಕೊಂಡು ಬಂದಾರ. ಇದು ನನಗ ಗೊತ್ತದ. ಅದರ ನನ್ನ ಜನ ವಿನಾಕಾರಣ ಸಾಯೋದು ಬ್ಯಾಡ ಆಗೇದ ಮನೆಯೊಳಗಿನ ಜೀವ ಇಲ್ಲಿ ಕೆರೆಯ ದಂಡಿ ಮ್ಯಾಲ ಬೀಳಬಹುದು. ಆ ಮನೆಯ ಚಿತ್ರ ಕಣ್ಮುಂದೆ ತೊಗೊಂಡು ಬರ್ರಿ! ನೆನಪು ಮಾಡಿ ಕೊಳ್ರಿ. ಅವರ ಮಕ್ಕಳು ಮರಿಗಳು ! ಆಕ್ರೋಶ! ನೋಡಿರಿ. ಅವರ ವಿಧವೆ ಮಹಿಳೆಯರ ಬರಿದಾದ ಹಣೆಯನ್ನು ! ಮೋರೆ ನನಗನ್ನಿಸ್ತದ ನಾನು ಒಂದು ಪ್ರಚಂಡ ಬಿರುಗಾಳಿಯಾಗಿ ಭೂಮಿ ಎಲ್ಲಾ ಸಮತಟ್ಟ ಮಾಡಬೇಕು. ಈ ಜಾತೀಯ ಭೂತಶಕ್ತಿಯ ಸೊಕ್ಕನ್ನೆಲ್ಲ ಅಡಗಿಸ ಬೇಕು. ಒಂದೇ ಒಂದು ಕ್ಷಣದಾಗ ಬಿರುಗಾಳಿಯ ಪಡೆದು ಭಯಂಕರ ಅವತಾರ ತಾಳಬಹುದು. ಆಮೇಲೆ ಆಕ್ರೋಶದ ದಾರುಣ ಅವಶೇಷ ಮಾತ್ರ ಉಳಿಯಬಹುದು. ಅದು ನನ್ನ ಜನರದೇ. ಕಾರಣ ಇದೇ ಸಂದರ್ಭದಾಗ ಜಾತಿವಾದಿ ಜನ ಮತ್ತು ಸರಕಾರ ಒಂದಾಗಿದ್ದಾರೆ. ಆದ್ದರಿಂದ ನನ್ನ ಮನಸ್ಸಿನ ಬಿರುಗಾಳಿಗೆ ಬುದ್ಧಿಯ ರೆಕ್ಕೆ ಹಚ್ಚ ಬೇಕನಿಸ್ತದ.

ಗೋವಿಂದರಾವ್ : ನಿಮ್ಮ ಮಾತು ಅಗದಿ ಖರೇ ಅದ ಡಾಕ್ಟರ್ ಸಾಹೇಬ.

ಗಾಯಕವಾಡ : ಅದರ ಗೋವಿಂದರಾವ್ ಜನರೊಳಗ ಕಿಡಿಯಾಡುತ್ತಿರೊ ಆಕ್ರೋಶದ ಪರಿಣಾಮವೇನು ?

ಅಂಬೇಡ್ಕರ : ಆ ಚಿಂತಿ ನೀ ಮಾಡಬೇಡ ಗಾಯಕವಾಡ. ಸತ್ಯಾಗ್ರಹಕ್ಕಿಂತಲೂ ಮಹತ್ವದ ಪ್ರಸಂಗ ಇಲ್ಲಿ ಜರಗೋದದ. ಸವರ್ಣಿಯರನ್ನು ತಲೆಮ್ಯಾಲ ಹೊತ್ಕೊಂಡು ಕುಣಿಯುವ ಆದರೆ ದಲಿತರನ್ನು ಕೆಳಗ ಹಾಕಿ ತುಳಿಯುವ, ಮನುಷ್ಯತ್ವದ ಹಕ್ಕಿನಿಂದ ವಂಚಿತರಾದ ಮನುಷ್ಯ-ಮನುಷ್ಯರ ನಡುವೆ ವಿಷಮ ಬೀಜ ಬಿತ್ತುವ, ಹೆಣ್ಣು ಮಕ್ಕಳನ್ನು ಮತ್ತು ಶೂದ್ರರನ್ನು ಕೇವಲ ಭೋಗದ ವಸ್ತು-ಪದಾರ್ಥಗಳೆಂದು ತಿಳಿಯುವ 'ಮನುಸ್ಮೃತಿ' ಯನ್ನು ಈಗ ಇಲ್ಲಿ ಇದೇ ಕ್ಷಣದೊಳಗೆ ನಾವು ಸುಟ್ಟು ಹಾಕುವವರಿದ್ದೇವೆ ಚಿತ್ರೆ....

ಚಿತ್ರ : ಅಂಬೇಡ್ಕರ ಸಾಹೇಬ್ರ ನಾವೆಲ್ಲ ಆ ತಯಾರಿ ಮಾಡಿ ಇಟ್ಟಿದ್ದೀವಿ. ಬೆಂಕಿ ಕುಂಡಾ ಸಹಿತ ನಿಮ್ಮ ಅನುಮತಿಗಾಗಿ ಕಾಯತಾ ಕೂತದ.

ಅಂಬೇಡ್ಕರ : ಅಂದರ ತಡ ಮಾಡೋದು ಏಕೆ ಚಿತ್ರೆ?ಗೋವಿಂದರಾವ್ ಮನುಷ್ಯತ್ವಕ್ಕ ಕಲಂಕ ಹಚ್ಚುವ`ಮನುಸ್ಮೃತಿ'ಯನ್ನು ಓದಿರಿ ಮತ್ತು ಬೆಂಕಿ ಕುಂಡದೊಳಗ ಚೆಲ್ಲಿ ಬಿಡ್ರಿ.

ಗೋವಿಂದರಾವ್ : ಏಕಮೇವ ತೋ ಶೂದ್ರಸ್ಯ ಪ್ರಭಾಕರ್ಮ ಉಪಾದೀಶತ್ ।
ಏತೆಷಾವೆಲವ ವರ್ಣಾನಾಲ ಶುಶ್ರೂಷಾಮಾನಸೂಯಾ ॥

[ಒಂದೊಂದೆ ಪುಟಗಳನ್ನು ಬೆಂಕಿಯೊಳಗೆ ಚೆಲ್ಲುತ್ತಾರೆ. ''ಮನುಸ್ಮೃತಿ ಮುರ್ದಾಬಾದ್ ಡಾಕ್ಟರ ಅಂಬೇಡ್ಕರ ಜಿಂದಾಬಾದ್ - ಈ ಘೋಷಣೆಯ ಜೊತೆಗೆ ತುತ್ತೂರಿಯ ಸ್ವರ ಕೇಳಿ ಬರುತ್ತದೆ. ಕ್ರಮೇಣ ರಂಗದ ಮೇಲೆ ಕತ್ತಲು]

●●

ಸಿದ್ಧ ವೈದ್ಯರಲ್ಲೊಬ್ಬ ಗೋರಕ್ಷಕ

ಎಸ್. ಎಂ. ಸಜ್ಜನ

ಗೋರಕ್ಷಕನೆಂದರೆ ಯಾರು? ಗೋರಕ್ಷಕನ ಪರಂಪರೆ ಯಾವುದು? ಗೋರಕ್ಷಕ ಪದದ ಅರ್ಥವೇನು? ಗೋರಕ್ಷಕ ಮಾಡಿದ ಕಾರ್ಯವೇನು? ಎಂಬ ಮುಂತಾದ ಪ್ರಶ್ನೆಗಳನ್ನು ಇಟ್ಟುಕೊಂಡು ಕನ್ನಡ ಸಾಹಿತ್ಯ ಸಹೃದಯಿಗಳಿಗೆ ಗೋರಕ್ಷಕನ ಒಂದು ಕಿರು ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ವಚನಕಾರರ ನಾಮಾವಳಿಗಳಲ್ಲಿ ಈತನ ಹೆಸರು ಕಂಡು ಬರುವುದು ಸಾಹಿತ್ಯ ಉಪಾಸಕರಿಗೆ ತಿಳಿದ ವಿಷಯ, ಅಲ್ಲಮ ಮತ್ತು ಗೋರಕ್ಷಕನ ಸಂವಾದವನ್ನು ಪ್ರಭುಲಿಂಗಲೀಲೆ ಮತ್ತು ಶೂನ್ಯಸಂಪಾದನೆಗಳಲ್ಲಿ ಕಾಣುತ್ತೇವೆ, ಅಲ್ಲಮನ ಲೋಕಕಲ್ಯಾಣ ಯಾತ್ರೆಯಲ್ಲಿ ಈತನ ಸಂಪರ್ಕದಿಂದ ಉಂಟಾದ ಸಂವಾದ ಪ್ರಮುಖವಾದುದು. ವಜ್ರದೇಹಿಯಾದ ಗೋರಕ್ಷಕನಿಗೆ ಅಲ್ಲಮನ ಉಪದೇಶ ಇಂತಿದೆ -

'ಕಾಯ ಬಲಿದರೆ ಮಾಯೆ ಬಲಿವುದು
ಮಾಯೆ ಬಲಿದರೆ ಛಾಯೆ ಬಲಿವುದು
ಕಾಯ ಮಾಯೊ ಛಾಯೆ ಬಲಿದರೆ, ಸಿದ್ಧತನವಲ್ಲ
ಕಾಯ ಮಾಯಾ ಛಾಯೆದಾಗಿನ
ದಾಯವನು ಕಳೆದುಳಿದನಾದೊಡೆ
ರಾಯನಾತನು ಸಿದ್ಧರಲಿ ಗೋರಕ್ಷ ಕೇಳೆಂದ'[೧]

ದೇಹ-ಮಾಯೆ-ಛಾಯೆ ಇವುಗಳ ಸಾಧನವನ್ನು ಮೀರಿನಿಂದವನಾದರೆ ಆ ಸಿದ್ಧರಲ್ಲಿ ರಾಜ, ಎಂದು ಅಲ್ಲಮನು ನುಡಿಯುತ್ತಾನೆ, ಮುಕ್ತಿಮಾರ್ಗವನ್ನು ಗೋರಕ್ಷಕ ಕಂಡು ಕೊಂಡನು. ಅಗ್ನಿ ಮುಂದೆ ಬೆಣ್ಣೆ ಕರಗುವಂತೆ, ಬಯಲು ದೇಹದ ಮುಂದೆ ವಜ್ರ ದೇಹದ ಕಾಂತಿ ನಿಷ್ಪ್ರಯೋಜಕವಾಯಿತು. ದೇಹವು ನಷ್ಟವಾಗದಂತೆ ಮುಕ್ತಿಯನ್ನು ಸಿದ್ಧಿಯ ಮೂಲಕ ಪಡೆದಿದ್ದೇನೆ, ಮಾಯೆಯನ್ನು ಗೆದ್ದಿದ್ದೇನೆ, ಈ ದೇಹಕ್ಕೆ ಮೋಕ್ಷವಾಗಿದೆ ಎಂಬ ಅಹಂಭಾವದಿಂದ ಮೆರೆಯುತ್ತಿದ್ದಾತನಿಗೆ ಅಲ್ಲಮನ ಸಾನಿಧ್ಯದಿಂದ ಸಿದ್ಧಿ ಅಳಿದು ಯೋಗ ಸಾಧನೆಯಲ್ಲಿ ಸಹಜ ಮುಕ್ತಿ ಮಾರ್ಗವನ್ನು ಅರಿತುಕೊಂಡನು. ಕಾಯವು ಪ್ರಪಂಚದ ಆಸೆ ಆಮಿಷಗಳಿಗೆ ಸಿಲುಕಿ

---

೧. ಪ್ರಭುಲಿಂಗಲೀಲೆ: ಎಸ್. ವಿದ್ಯಾಶಂಕರ (೧೯ -೩೭) ಪು. ೨೨೪

ಮಾಯೆಯ ಮೋಹಿತದಲಿ ಬಂಧಿತವಾಗಿರುವದನ್ನು ತಿಳಿದುಕೊಂಡನು. ಇದರಿಂದ ಹೊರ ಬರಲು ಅಲ್ಲಮನ ಮಾತೆ ಆಯುಧವಾಗಿ ಪರಿಣಮಿಸಿತು. ಹೊನ್ನು ಎಲ್ಲಿದ್ದರೂ ತನ್ನ ಕಾಂತಿಯನ್ನು ಹರಡಿಸುತ್ತದೆ ಎಂಬುದಕ್ಕೆ ಅಲ್ಲಮನ ಉಪದೇಶವೇ ಸಾಕು.

ಸಂಪ್ರದಾಯದ ನೆಲೆಯ ಮೇಲೆ ವ್ಯಕ್ತಿಯ ಶ್ರೇಯೋಭಿವೃದ್ಧಿಯನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ 'ಗೋರಕ್ಷಕ' ನು ನಾಥ ಸಂಪ್ರದಾಯದವನೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಈ ನಾಥ ಸಂಪ್ರದಾಯವನ್ನು `ಕಾನಪಂಟಾ' ಸಂಪ್ರದಾಯವೆಂದು ಕರೆಯುವದುಂಟು'[೨] ಗೋರಕ್ಷಕ ನಾಥ ಸಂಪ್ರದಾಯಕ್ಕೆ ಸೇರಿದವನಾದ್ದರಿಂದ ಈತನನ್ನು ಗೋರಕ್ಷಕನಾಥನೆಂದು ಪ್ರಸಿದ್ಧ ಹೊಂದಿದನು. 'ಆದಿನಾಥ, ಮತ್ಸೇಂದ್ರನಾಥ, ಗೋರಖನಾಥ, ಗಹನೀನಾಥ, ನಿವೃತ್ತಿನಾಥ ಮತ್ತು ಜ್ಞಾನದೇವ'[೩] ಮುಂತಾದವರು ನಾಥ ಸಂಪ್ರದಾಯದ ಪರಂಪರೆಯಲ್ಲಿ ಬಂದಂಥವರು, ಆತ್ಮಸಾಕ್ಷಾತ್ಕಾರ ಮತ್ತು ಆತ್ಮಾನುಭಾವವೇ ಸಾಧಕನ ಮುಖ್ಯಗುರಿ. ಶಿವ, ವಿಷ್ಣು ಇಬ್ಬರೂ ಒಂದೇ, ಆಧ್ಯಾತ್ಮ ಜ್ಞಾನದಲ್ಲಿ ಎಲ್ಲರೂ ಸರಿಸಮಾನರು. ವರ್ಣಾಶ್ರಮ ಭೇದವಿಲ್ಲದೆ ಎಲ್ಲರೂ ಈ ಮಾರ್ಗದಿಂದ ಮುಕ್ತಿಯನ್ನು ಪಡೆಯಬಲ್ಲರು. 'ನಾಥ ಸಂಪ್ರದಾಯ, ಸಿದ್ಧ ಸಂಪ್ರದಾಯ, ನವನಾಥಸಿದ್ಧ ಸಂಪ್ರದಾಯ ಈ ಮೂರನ್ನು 'ಗೋರಖ್‌ನಾಥ' ಸಂಪ್ರದಾಯವೆಂಬ ಹೆಸರಿನಲ್ಲಿ ಕರೆಯುತ್ತಾರೆ.'[೪] ಈ ಗೋರಖನಾಥ ಸಂಪ್ರದಾಯ ಬಂಗಾಳ, ಗುಜರಾತ, ಮಹಾರಾಷ್ಟ್ರದಲ್ಲಿ ಪ್ರಚಾರದಲ್ಲಿದೆ. ಮತ್ಸೇಂದ್ರ ನಾಥನ ಶಿಷ್ಯನಾಗಿ ಗೋರಖ್ ನಾಥನು ಪ್ರಸಿದ್ಧನಾದನೆಂದು ತಿಳಿದಬರುತ್ತದೆ.

ಗೋರಕ್ಷ ಎಂಬ ಪದದರ್ಥವನ್ನು ಹಲವಾರು ವಿದ್ವಾಂಸರು ಅನೇಕ ರೀತಿಯಲ್ಲಿ ವಿವರಿಸಿದ್ದಾರೆ. 'ಗೋರಖ್ -ಗೋರಖ- ಗೋರಕ್ಷಕನಾಥನೆಂದು ತಿಳಿದು ಬರುತ್ತದೆ '[೫] ಅಲ್ಲದೆ 'ಗೋ'ಎಂದರೆ ಗೋವುಗಳು (ಇದರ ಒಳ ಅರ್ಥ ಇಂದ್ರಿಗಳು) ರಕ್ಷಿಸುವವನೇ ಗೋರಕ್ಷಕ.'[೬] ಹಿಂದಿ ಹಾಗೂ ಮರಾಠಿ ಭಾಷೆಗಳಲ್ಲಿ ಗೋರಕ್ಷಕ ಎಂಬುದು ಅಪಭ್ರಂಶ ಹೊಂದಿ ಗೋರಖ್ '[೭] ಎಂದಾಗಿದೆ. ತಮಿಳುನಾಡಿನ ಸಿದ್ಧರ ಸಾಹಿತ್ಯದಲ್ಲಿ 'ಕೋರಕ್ಕರ' ಎಂದು ಉಲ್ಲೇಖಗೊಂಡಿದೆ.[೮] ಗೋರಖ್, ಗೋರಕ್ಷಕ, ಕೋರಕ್ಕರ ಎಂಬ ನಾಮಪದಗಳು ಆಯಾ ಭಾಷೆಗಳ ಜಾಯಮಾನಕ್ಕೆ ಹೊಂದಿಕೊಂಡು ಬದಲಾವಣೆ ಹೊಂದಿರುವದನ್ನು ಕಾಣುತ್ತೇವೆ. ಮೂಲತಃ ಈತನ ಹೆಸರು ಗೋರಖ್‌ನಾಥ ಎಂದು ಇದ್ದಿರಲು ಸಾಧ್ಯ. ಇಂದಿನ ಗೋರಖಾಗಳು (ರಾತ್ರಿ ಹೊತ್ತು

---

೨. ಪುರಂದರದಾಸರು ಮತ್ತು ತುಕಾರಾಮ್ ಎಸ್. ಟಿ. ನಾಯಕ ಪು. ೪೩

೩. ಅದೇ... ಪು. ೪೩

೪. ತೆಲುಗು ಸಾಹಿತ್ಯದ ಮೇಲೆ ವೀರಶೈವ ಮತದ ಪ್ರಭಾವ : ಜಿ. ಚೆನ್ನಾರೆಡ್ಡಿ ಪೀಠಿಕೆ XXXi

೫. ಪರಿಶೋಧನೆ : ಮ. ಸ. ಕೃಷ್ಣಮೂರ್ತಿ ಪು. ೧೪೦

೬. ತೆಲುಗು ಸಾಹಿತ್ಯ ಮೇಲೆ ವೀರಶೈವ ಮತದ ಪ್ರಭಾವ :ಜಿ. ಚೆನ್ನಾರೆಡ್ಡಿ ಪು. ೩೬

೭. ಅದೇ.... ಪು. ೩೬

೮. ಸಿದ್ದರ್ ಕಂಡ ವೀಜ್ಞಾಣಮ್ ತತ್ತುಮ್: ಚಿದಂಬರನೂರ ಪು. ೨೩, ೨೪

ಗಸ್ತಿ ತಿರುಗುವವರು) ಗೋರಖ್‌ನಾಥ ಸಂಪ್ರದಾಯದಿಂದ ಬಂದವರೆಂದು ವಿದ್ವಾಂಸರ ಅಭಿಪ್ರಾಯ. ಇದು ಎಷ್ಟು ಸತ್ಯವೆಂಬುದು ಸಾಹಿತ್ಯಾಧ್ಯಯನ ದಿಂದ ಅರಿತುಕೊಳ್ಳಬೇಕಾಗಿದೆ.

'ನಾಥ ಪಂಥದವರು ರಸ ಸಿದ್ಧಿಯಲ್ಲಿ ನಂಬಿಕೆಯಿಟ್ಟವರು. ಪಾದರಸ ಮತ್ತು ಅಭ್ರಕಗಳಿಂದ ತಯಾರಿಸಿದ ಗುಳಿಗೆಗಳ ಸೇವನೆಯಿಂದ ವಜ್ರಕಾಯವನ್ನು ಪಡೆದುಕೊಂಡು ದೇಹ ಸುಖವನ್ನು ದೀರ್ಘಕಾಲ ಅನುಭವಿಸಬಹುದೆಂದು ನಂಬಿಕೆ ಅವರದು. ಈ ಗುಳಿಗೆಗಳ ತಯಾರಕರನ್ನು 'ಘುಟಿಕಾಸಿದ್ಧ' ರೆಂದೇ ಕರೆಯುತ್ತಿದ್ದರು.[೯] 'ತಮಿಳುನಾಡಿನ ಸಿದ್ಧ ವೃಂದದಲ್ಲಿ ಈತನ ಹೆಸರು ಅಜರಾಮರವಾಗಿದೆ. ಸಿದ್ಧರು ತಮ್ಮ ಜ್ಞಾನದ ದಾಹದಿಂದ ಸಿದ್ಧಿಯನ್ನು ಪಡೆದುಕೊಂಡು ಸಿದ್ಧ ವೈದ್ಯರಾದರೆಂದು ಪ್ರತೀತಿ. ಇವರು ಪಾಂಡರ ಕಾಲದಲ್ಲಿ ಬಾಳಿದವರು. ಒಟ್ಟು ಹದಿನೆಂಟು ಸಿದ್ಧರ ನಾಮಗಳು ಕಂಡು ಬರುತ್ತಿದ್ದು ಅವರಲ್ಲಿ ಗೋರಕ್ಷಕ ಒಬ್ಬ. ಈ ಹದಿನೆಂಟು ಸಿದ್ಧ ವೈದ್ಯರ ನಾಮಾವಳಿಗಳು ಇಂತಿವೆ.

೧. ತಿರುಮೂಲರ್
೨. ಈರಾಮದೇವರು
೩. ಕುಂಬ ಮುನಿ
೪. ಈಡೈಕಾಡರ್
೫. ಈದಮ್‌ಪ್ಪ ಸಿದ್ಧರ್
೬. ದನವಂದರಿ
೭. ಬಾಳಮಿರೆ
೮. ಕಮಲಮುನಿ
೯. ಭೋಗನಾಥ
೧೦. ಮಚ್ಚಮುನಿ
೧೧. ಕೊಂಗನರ
೧೨. ಪತಂಜಲಿ
೧೩. ನಂದಿದೇವರ
೧೪. ಭೋದಗುರು
೧೫. ಸಾಮ್‌ಪಾಟ್ಟಸಿದ್ಧರ್
೧೬. ಚಂದ್ರನಂದದೇವರ
೧೭. ಚಚ್ಚೇಮುನಿ
೧೮. ಕೋರಕ್ಕರ[೧೦]

ಸಿದ್ಧರ ಹೆಸರುಗಳು ನಿರ್ದಿಷ್ಟವಾಗಿಲ್ಲ. ೧೮ರಿಂದ ೨೫ರ ವರೆಗೂ ಹಾಗೂ ಅವಕ್ಕೂ ಹೆಚ್ಚಾಗಿ ಸಿದ್ಧರು ಕಂಡು ಬರಬಹುದು ಈ ಸಿದ್ಧರ ಹೆಸರುಗಳೊಂದಿಗೆ ಗೋರಕ್ಷಕನ ಹೆಸರು 'ಕೋರಕ್ಕರ' ಎಂದು ಉಲ್ಲೇಖಿತವಾಗಿದೆ. ಸಿದ್ಧರು ತಮಿಳುನಾಡಿನಲ್ಲಿ ಸಿದ್ಧವೈದ್ಯರೆಂದೆ ಪ್ರಸಿದ್ಧರಾಗಿದ್ದಾರೆ. ಅವರು ರಚಿಸಿದ ಹಲವಾರು ವೈದ್ಯ ಕೃತಿಗಳು ಮಹತ್ವದ ಸಂಗತಿ ಗಳನ್ನು ಒದಗಿಸುತ್ತವೆ. ಇಂತಹ ಸಿದ್ಧವೈದ್ಯರಲ್ಲಿ ಗೋರಕ್ಷಕ ಒಬ್ಬ. ಈತ ರಚಿಸಿದ 'ಸಿದ್ಧ ಸಿದ್ಧಾಂತ ಪದ್ಧತಿ' ಎಂಬ ಕೃತಿಯು ನಾಥ ಸಂಪ್ರದಾಯದ ಪ್ರಧಾನ ಗ್ರಂಥವಾಗಿ ಪ್ರಸಿದ್ಧಿಯನ್ನು ಪಡೆದಿದೆ[೧೧] ಈ ಕೃತಿಯು ಸಂಸ್ಕೃತದಲ್ಲಿದೆ. ಮೂಲ ಸಿದ್ಧಾಂತವನ್ನು ವೀರಶೈವ ಸಿದ್ಧಾಂತದೊಂದಿಗೆ ಸಂವಾದ ರೂಪದಲ್ಲಿ ರಚಿಸಿದ್ದಾನೆಂದು ಹೇಳಲಾಗಿದೆ. ಈ ಕೃತಿಯು ರಚನಾ ಕಾಲ ಉಲ್ಲೇಖ ಕಂಡು ಬರುವುದಿಲ್ಲ. ಬಹುಶಃ ಅನುಭವ ಮಂಟಪದ ಅಧ್ಯಕ್ಷನಾದ ಅಲ್ಲಮ ಪ್ರಭುದೇವನ ಸಂಪರ್ಕದ ತದನಂತರದಲ್ಲಿ ಹುಟ್ಟಿ ಬಂದಿರಲು

---

೯. ವಚನ ನಿರ್ವಚನ :ಪಿ. ವಿ. ನಾರಾಯಣ ಪು. ೫೫
೧೦. ಸಿದ್ಧರ ಕಂಡ ವಿಜ್ಞಾನಮ್ ತತ್ತ್ವಮ್: ಚಿದಂಬರನೂರ ಪು.೨೪
೧೧. ತೆಲುಗು ಸಾಹಿತ್ಯದ ಮೇಲೆ ವೀರಶೈವ ಮತದ ಪ್ರಭಾವ (ತೆಲುಗು): ಬಿ. ಚೆನ್ನಾರಣ್ಣ ಪು. ೩೭

ಸಾಧ್ಯವಿದೆ ಎಂದು ಹೇಳಬಹುದು. ಇದರಲ್ಲಿ ಶಿವನ ಮಹಿಮೆಯನ್ನೇ ತುಂಬಿದ್ದಾನೆಂದು ತಿಳಿದು ಬರುತ್ತದೆ. ಅಲ್ಲದೆ 'ಕೋರಕ್ಕರ ವೈಪ್ಪು' ಎಂಬ ವೈದ್ಯ ಗ್ರಂಥವನ್ನು ರಚಿಸಿದ್ದಾನೆ'[೧೨] ಇದು ನೂರು ಪದ್ಯಗಳನ್ನೊಳಗೊಂಡಿದೆ. ಇದರ ರಚನಾ ಕಾಲವು ಕಂಡು ಬರುವದಿಲ್ಲ. ಸಿದ್ಧರ ವೈದ್ಯ ಗ್ರಂಥಗಳಲ್ಲಿ ಇದು ಒಂದು ಮಹತ್ವದ ಕೃತಿಯೆಂದು ಹೇಳಬಹುದು. ಈತ ಬರೆದ ಒಟ್ಟು ಕೃತಿಗಳ ಸಂಖ್ಯೆಯು ಉಲ್ಲೇಖವಿಲ್ಲ. ಈತನ ಕುರಿತು ಹೆಚ್ಚಿನ ಅಧ್ಯಯನಕ್ಕೆ ಅವಕಾಶವಿದೆಯೆಂದು ಹೇಳಬಹುದು.

ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಈ ಮೂರು ಪ್ರದೇಶಗಳ ಪ್ರಭಾವ ಈತನ ಮೇಲೆ ಆಗಿದೆ. ಮಹಾರಾಷ್ಟ್ರದಲ್ಲಿ ಗೋರಖ್‌ನೆಂದು, ಕರ್ನಾಟಕದಲ್ಲಿ ಗೋರಕ್ಷಕನೆಂದು ತಮಿಳುನಾಡಿನಲ್ಲಿ ಕೋರಕ್ಕರ್ ಎಂದು ಪ್ರಸಿದ್ಧಿಯನ್ನು ಹೊಂದಿದ್ದಾನೆ. ಈತ ಮೂಲತಃ ನಾಥ ಸಂಪ್ರದಾಯದವನಾದರೂ ತದನಂತರ ವೀರಶೈವ ಸಂಪ್ರದಾಯ, ಸಿದ್ಧ ಸಂಪ್ರದಾಯ ಈತನ ಮೇಲೆ ಪ್ರಭಾವ ಬೀರಿರಲು ಸಾಕು. ಈತನು ಬಾಳಿ ಬದುಕಿದ ಪ್ರದೇಶಗಳ ಕಾಲಗಣನೆಯನ್ನು ಖಚಿತಪಡಿಸುವುದು ಕಷ್ಟಕರವಾದುದು, ಮೂರು ಸಂಪ್ರದಾಯದಲ್ಲಿ ಮಿಂದು, ಮೂರು ಪ್ರದೇಶಗಳ ನೀರು ಕುಡಿದು ಮೂರು (ಮರಾಠಿ, ಕನ್ನಡ, ತಮಿಳು) ಭಾಷೆಗಳಲ್ಲಿ ಕೃತಿ ರಚನೆ ಮಾಡಿರಲು ಸಾಧ್ಯವೇ? ಎಂಬುದನ್ನು ಸಂಶೋಧಕನಾದವನು ಅರಿತುಕೊಳ್ಳಲು ಸಾಹಿತ್ಯಾಧ್ಯಯನದ ಅಗತ್ಯವಿದೆ, ಹಾಗೂ `ಗೋರಕ್ಷಕನು ಅನೇಕ ಪ್ರದೇಶಗಳಿಗೆ ಭೇಟಿಕೊಟ್ಟು ತಿರುಕ್ಕೋನಮಲೈ'(ಶ್ರೀಲಂಕಾ)ದಲ್ಲಿ ಐಕ್ಯಹೊಂದಿನೆಂದು ಉಲ್ಲೇಖವಾಗಿದೆ'[೧೩] ಇದು ಎಷ್ಟರ ಮಟ್ಟಿಗೆ ಸತ್ಯವೆಂಬುದು ಸಂಶೋಧಿಸ ಬೇಕಾಗಿದೆ ಎಂದು ಹೇಳಬಹುದು.

ಗ್ರಂಥ ಋಣ

೧. ಪ್ರಭುಲಿಂಗಲೀಲೆ : ಎಸ್. ವಿದ್ಯಾಶಂಕರ್ :ಕನ್ನಡ ಹಾಗೂ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, -೧೯೮೫

೨. ತೆಲುಗು ಸಾಹಿತ್ಯದ ಮೇಲೆ ವೀರಶೈವ ಮತದ ಪ್ರಭಾವ (ತೆಲುಗು) ಜಿ. ಚನ್ನಾರಡ್ಡಿ ತಿರುಪತಿ, -೧೯೯೬

೩. ನಮ್‌ನಾಟ್ಟು ಸಿದ್ಧರಗಳ್ (ತಮಿಳು): ಆರ್. ಮಾನಿಕ್‌ವಾಸಗಮ್ ಅನ್ನು ಅಭಿರಾಮಿ ಪುಸ್ತಕಾಲಯ ಚನ್ನೈ, -೧೯೭೮

೪. ಸಿದ್ಧರ್ ಕಂಡ ವೀಜ್ಞಾಣಮ್ ತತ್ತ್ವಮ್(ತಮಿಳು):ಚಿದಂಬರನೂರ ಸಾಹಿತ್ಯ ಪುಸ್ತಕಾಲಯ ಚೆನ್ನೈ, -೧೯೬೧

೫. ಸಿದ್ಧರ ತತ್ತ್ವಮ್ (ತಮಿಳು) ಕೆ. ನಾರಾಯಣನ್ : ತಮಿಳು ಪುಸ್ತಕಾಲಯ ಚೆನ್ನೈ, -೧೯೮೮

೬. Siddha System of Life : R. Chidambarathanu pillai Siddha Madical Literature Research Centre, Madras, -1991

೭. ಪರಿಶೋಧನೆ ಮ. ಸ. ಕೃಷ್ಣಮೂರ್ತಿ ಮಂಜುಶ್ರೀ ಪ್ರಕಾಶನ, ಮೈಸೂರು, - ೧೯೯೫

೮. ವಚನ ನಿರ್ವಚನ : ಪಿ. ವಿ. ನಾರಾಯಣ ಪುಸ್ತಕಾಲಯ ಪ್ರಕಾಶನ ಮೈಸೂರು, -೧೯೯೦

---

೧೨. ನಮ್ ನಾಟ್ಟು ಸಿದ್ಧರ್‌ಗಳ್ (ತಮಿಳು): ಮಾಸಿಕ ವಾಸಗಮ್ ಪು. ೧೬೦

೧೩. Siddha system of life : R. Chidambarathau pillai p. 84.

ಭಾರತದಲ್ಲಿ ಕೃಷಿ ಮಾರುಕಟ್ಟೆ

(ಬೆಳಗಾಂವಿ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಅನುಲಕ್ಷಿಸಿ)

***ಶ್ರೀ ಪಿ. ಡಿ. ಭಜಂತ್ರಿ, *ಡಾ. ವ್ಹಿ. ಮುರುಗಯ್ಯ*

ಹಿನ್ನೆಲೆ: ಭಾರತವು ಒಕ್ಕಲುತನ ಪ್ರಧಾನವಾದ ರಾಷ್ಟ್ರ. ಒಕ್ಕಲುತನವನ್ನು ಮೂಲ ಭೂತ ಉದ್ಯೋಗವನ್ನಾಗಿ ರೂಢಿಸಿಕೊಂಡು ಬರಲಾಗಿದೆ. ನಮ್ಮ ದೇಶದಲ್ಲಿ ಶೇಕಡಾ ೭೦ರಷ್ಟು ಜನರು ಕೃಷಿಯನ್ನು ಉದ್ಯೋಗವನ್ನಾಗಿ ಮಾಡಿಕೊಂಡರೂ ಸಹಿತ ನಾವು ನಮ್ಮ ಆಹಾರದ ಕೊರತೆಯನ್ನು ನೀಗಿಸಿಕೊಳ್ಳಲು ಸಾಧ್ಯವಾಗಿಲ್ಲ. ಕಾರಣ ನಮ್ಮ ರೈತರು ಕೃಷಿಯನ್ನು ಹೊಟ್ಟೆ ಹೊರೆಯುವ ಉದ್ಯೋಗವನ್ನಾಗಿ ಕಲ್ಪಿಸಿರುವರು. ಇದರ ಜೊತೆಗೆ ನೈಸರ್ಗಿಕ ತಾಂತ್ರಿಕ ಮತ್ತು ಸಾಮಾಜಿಕ ಕಾರಣಗಳೂ ಸಹಿತ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿಲ್ಲ.

ಬ್ರಿಟಿಷರು ನಮ್ಮ ದೇಶಕ್ಕೆ ವ್ಯಾಪಾರದ ಉದ್ದೇಶದ ಸಲುವಾಗಿ ಬಂದಿದ್ದರಿಂದ, ಅವರು ನಮ್ಮ ಕೃಷಿ ಅಭಿವೃದ್ಧಿಯ ಬಗ್ಗೆ, ಕೃಷಿ ಮಾರುಕಟ್ಟೆಗಳ ಬಗ್ಗೆ ಹೆಚ್ಚು ಗಮನ ಹರಿಸಲಿಲ್ಲ. ಸ್ವಾತಂತ್ರ್ಯಾನಂತರ ನಮ್ಮ ಸರಕಾರವು ಹಳ್ಳಿಗಳ ಅಭಿವೃದ್ಧಿಗೆ ಗಮನಹರಿಸಿ ಕೃಷಿಯನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತಿದೆ ಮತ್ತು ``ಸಮರ್ಪಕ ಕೃಷಿ ಮಾರಾಟಕ್ಕೆ ಆದ್ಯತೆ'' ನೀಡುತ್ತಿದೆ. ಇದರ ಫಲವಾಗಿ ಅಸಾಮಾನ್ಯ ಪ್ರಗತಿಯನ್ನು ಸಾಧಿಸಿದರೂ ಸಹಿತ ಸ್ವಾವಲಂಬನೆಯಾಗದಿದ್ದುದು ಕಳವಳಕಾರಿಯಾದ ಸಂಗತಿ. ಕಾರಣ ಶರವೇಗದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ.

ಈ ಹಿನ್ನೆಲೆಯಲ್ಲಿ ಇಲ್ಲಿ ಭಾರತದ ಕೃಷಿ ಮತ್ತು ಕೃಷಿ ಮಾರುಕಟ್ಟೆಯನ್ನು ಒಳಗೊಂಡಂತೆ ಈ ಕೆಳಗಿನ ಅಂಶಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.

೧. ಉಗಮ ಮತ್ತು ವಿಕಾಸ
೨. ಆಧುನಿಕ ಮಾರುಕಟ್ಟೆಯ ಪರಿಸರ.
೩. ಅಂತರ್ ರಾಷ್ಟ್ರೀಯ ಕೃಷಿ ಮಾರುಕಟ್ಟೆಯಲ್ಲಿ ಭಾರತದ ಪಾತ್ರ.
೪. ಬೆಳಗಾಂವಿ ಕೃಷಿ ಮಾರುಕಟ್ಟೆಯ ಸಮೀಕ್ಷೆ ಮತ್ತು ಅದರ ಆದಾಯ ವೆಚ್ಚ ಮತ್ತು ಉಳಿತಾಯಗಳ ಒಂದು ಓರೆನೋಟ.

---

* ಉಪನ್ಯಾಸಕರು, ವಾಣಿಜ್ಯ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಬೆಳಗಾಂವ ಅವರಣ, ಭೂತರಾಮಹಟ್ಟಿ

** ಸಂಶೋಧನಾ ವಿದ್ಯಾರ್ಥಿ

೫. ಭಾರತದ ಕೃಷಿ ಮಾರುಕಟ್ಟೆಗಳು ಕುಂಠಿತವಾಗುವುದಕ್ಕೆ ಕಾರಣಗಳು.
೬. ಪರಿಹಾರೋಪಾಯಗಳು
೭. ಉಪಸಂಹಾರ

ಎ. ಉಗಮ ಮತ್ತು ವಿಕಾಸ :

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗಕ್ಕೆ ಮೊದಲು ಭಾರತದಲ್ಲಿ ಜೀವನಾವಶ್ಯಕ ಸಾಗುವಳಿಯೊಂದಿಗೆ ಕೃಷಿ ಉತ್ಪನ್ನಗಳನ್ನು ಇತರೆ ವಸ್ತುಗಳಿಗೆ ಅಥವಾ ಅವಶ್ಯಕ ಕೃಷಿ ಉತ್ಪನ್ನಗಳಿಗೆ ವಿನಿಮಯ ಮಾಡುತ್ತಿದ್ದರು. ಆಗ ಕೃಷಿ ಮಾರುಕಟ್ಟೆಗಳಿಗೆ ಪ್ರಾಮುಖ್ಯತೆ ಇರಲಿಲ್ಲ. ಬರುಬರುತ್ತ ರೈತರು ಹೆಚ್ಚಿನ ಪ್ರಮಾಣದಲ್ಲಿ ವಿವಿಧ ರೀತಿಯ ಧಾನ್ಯಗಳನ್ನು, ಎಣ್ಣೆ ಬೀಜಗಳನ್ನು ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯಲಾರಂಭಿಸಿದಂತೆಲ್ಲಾ ಕೃಷಿ ಕ್ಷೇತ್ರಕ್ಕೆ ಯೋಗ್ಯವಾದ ಮಾರುಕಟ್ಟೆಯ ಆವಶ್ಯಕತೆ ಕಂಡು ಬಂದಿತು.

"ಕೃಷಿ ಮಾರುಕಟ್ಟೆ ಎಂದರೆ" ಕೃಷಿ ಉತ್ಪಾದನೆಯಾದ ಕ್ಷಣದಿಂದ ಅವುಗಳನ್ನು ಸಂಗ್ರಹಿಸಿ ಕೃಷಿ ಪೇಟೆಗೆ ಸಾಗಿಸುವದು ಮತ್ತು ವರ್ಗೀಕರಿಸಿ ಅಂತಿಮವಾಗಿ ಮಾರುವ ಒಂದು ಪ್ರಕ್ರಿಯೆಯಾಗಿದೆ. ಮುಂದುವರಿದ ರಾಷ್ಟ್ರಗಳ ಕೃಷಿ ಮಾರುಕಟ್ಟೆಗಳೊಡನೆ ಹೋಲಿಸಿ ನೋಡಿದಾಗ ಭಾರತದ ಕೃಷಿ ಮಾರುಕಟ್ಟೆ ಹಲವಾರು ದೋಷಗಳನ್ನು ಒಳಗೊಂಡಿದೆ. ಇಂತಹ ಹಲವಾರು ದೋಷಗಳನ್ನು ನಿವಾರಿಸಲು ಸನ್ ೧೯೨೮ರಲ್ಲಿ ರ್‍ಯಾಯಲ್ ಬಾಂಬ್ ಆ್ಯಕ್ಟನ್ನು "ಕೃಷಿ ಉತ್ಪನ್ನ ಮಾರುಕಟ್ಟೆಗಳ ಕಾನೂನು" ಮಾಡಿತ್ತು. ಈ ಕಾನೂನಿನ ಆಧಾರದ ಮೇಲೆ ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ೨೮೬, ೧೯೭೨ರ ವೇಳೆಗ ೬೭೪೦ ಮತ್ತು ೧೯೯೫ರ ವೇಳೆಗೆ ೬೮೩೬ ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು (ನಿಯಂತ್ರಿತ) ಸ್ಥಾಪಿಸಲಾಗಿದೆ.

ಈ ಮಾರುಕಟ್ಟೆಗಳ ಆಡಳಿತಕ್ಕೆ ರಾಜ್ಯ ಸರಕಾರದ, ಸ್ಥಳೀಯ ಸಂಸ್ಥೆಗಳ, ಕೃಷಿ ಉತ್ಪಾದಕರ, ವ್ಯಾಪಾರಿ ದಲ್ಲಾಳಿಗಳ, ಪ್ರತಿನಿಧಿಗಳು ಆಡಳಿತದಲ್ಲಿ ಭಾಗವಹಿಸುವದು.

ಬಿ. ಆಧುನಿಕ ಕೃಷಿಮಾರುಕಟ್ಟೆಗಳ ಪರಿಸರ:

ಇಂದು ರೈತರು ಬೇಸಾಯವು ಒಂದು ಜೀವನಾವಶ್ಯಕ ಉದ್ಯೋಗವಷ್ಟೇ ಅಲ್ಲದೆ, ಲಾಭದಾಯಕ ಉದ್ಯೋಗ ಎಂದು ತಿಳಿಯಲು ಪ್ರಾರಂಭಮಾಡಿದ್ದರಿಂದ ಕೃಷಿ ಮಾರುಕಟ್ಟೆಗಳಿಗೆ ಪ್ರಾಮುಖ್ಯತೆ ಬಂದಿದೆ. ಕೃಷಿ ಕ್ಷೇತ್ರಕ್ಕೆ ಯೋಗ್ಯವಾದ ಮಾರುಕಟ್ಟೆಯನ್ನು ಒದಗಿಸುವದು ಅವಶ್ಯವಿದೆ. ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ಒದಗಿಸಿಕೊಡುವಲ್ಲಿ ಇಂದಿನ ಕೃಷಿ ಮಾರುಕಟ್ಟೆಗಳು ಪ್ರಯತ್ನಿಸುತ್ತಿವೆ. ಇನ್ನೂ ಸಮರ್ಪಕ ಪ್ರಯತ್ನ ಮುಖ್ಯವಾಗಿದೆ.

ನಮ್ಮ ಕೃಷಿಕರು ಸಾಮಾನ್ಯವಾಗಿ ಖಾಸಗಿ ಒಪ್ಪಂದಗಳ ಮೂಲಕ, ಸ್ಯಾಂಪಲ್ ಪದ್ಧತಿಯ ಮೂಲಕ, ಹೋಗುವ ಪದ್ಧತಿಯ ಮೂಲಕ, ಮುಕ್ತ ಮಾರುಕಟ್ಟೆಗಳ ಮೂಲಕ ಮತ್ತು ಟೆಂಡರ್ ಪದ್ಧತಿಯ ಮೂಲಕ ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಾರೆ. ಟೆಂಡರ್ ಪದ್ಧತಿಯು

ಇತ್ತೀಚೆಗೆ ಹೆಚ್ಚು ಜನಪ್ರಿಯವಾಗಿದೆ. ಯಾಕೆಂದರೆ ರೈತರ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ಒದಗಿಸಿ, ಸಮರ್ಪಕ ವರ್ಗೀಕರಣ, ಶ್ರೇಣಿಕರಣಗಳ ಸೇವೆಯನ್ನು ಒದಗಿಸಿಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುತ್ತಿದೆ. ಆದರೂ ಸಹಿತ ರೈತರು ಮೋಸ ಹೋಗುವ ಸಂದರ್ಭಗಳು ತಪ್ಪಿಲ್ಲ.

ಸಿ. ಅಂತರ್ ರಾಷ್ಟ್ರೀಯ ಕೃಷಿ ಮಾರುಕಟ್ಟೆಯಲ್ಲಿ ಭಾರತದ ಪಾತ್ರ :

ಭಾರತವು ಇಂದು ಅಂತರ್‌ರಾಷ್ಟ್ರೀಯ ಕೃಷಿ ಮಾರುಕಟ್ಟೆಯಲ್ಲಿ ಬಹಳ ಖ್ಯಾತಿಯನ್ನು ಪಡೆದಿದೆ. ನಮ್ಮ ದೇಶದ ಸಾಂಬಾರ ಪದಾರ್ಥಗಳು, ಉಲನ್, ಕಾಫಿಗಳು ಬಹಳ ಬೇಡಿಕೆಯ ಕೃಷಿ ಉತ್ಪನ್ನಗಳಾಗಿವೆ. ನಮ್ಮ ದೇಶದ ಒಟ್ಟು ರಫ್ತು ಗಳಿಕೆಯಲ್ಲಿ ಶೇಕಡಾ ೬೦ರಷ್ಟು ಕೃಷಿ ಉತ್ಪನ್ನಗಳ ರಫ್ತಿನಿಂದ ಬರುತ್ತದೆ. ಆದ್ದರಿಂದ ``ಕೃಷಿಯು ಭಾರತದ ಆರ್ಥಿಕ ವ್ಯವಸ್ಥೆಯ ಬೆನ್ನಲುಬಾಗಿದೆ." ಇದರಿಂದ ಭಾರತವು ಕೃಷಿ ಪ್ರಾಬಲ್ಯ ದೇಶವೆಂದು ತಿಳಿಯುವದು.

ಈ ಕೆಳಗಿನ ಪಟ್ಟೆಯು ಭಾರತವು ಸನ್ ೧೯೯೦-೯೧ರಿಂದ ಸನ್ ೧೯೯೫ -೯೬ರ ವರೆಗೆ ಕೃಷಿ ಉತ್ಪನ್ನಗಳನ್ನು ನಿರ್ಯಾತ ಮಾಡಿದ ವಿವರ ನೀಡುವದು.

ವರ್ಷ	ನಿರ್ಯಾತ (ಮಿಲಿಯನ್ ಡಾಲರ್‌ಗಳಲ್ಲಿ)		ಪ್ರತಿಶತ (ಶೇಕಡಾ)
೧೯೯೦-೯೧	೨,೬೪೯-೩೦		(-) ೬.೪೩ಶೇ.
೧೯೯೧-೯೨	೨,೪೮೩-೧೦		(-) ೬.೨೭ಶೇ.
೧೯೯೨-೯೩	೨,೩೯೮-೧೦		(-) ೩.೪೨ಶೇ.
೧೯೯೩-೯೪	೩,೦೪೮-೦೦		(-) ೨೭.೧೦ ಶೇ.
೧೯೯೪-೯೫	೨,೮೪೯-೨೦		(-) ೬.೫೨ಶೇ.
೧೯೯೫-೯೬	೪,೬೭೧-೮೦		(-) ೬೩.೯೬ಶೇ.
ಒಟ್ಟು	೧೮,೦೯೯-೯೦	(೧೯೯೦-೯೧ ರಿಂದ ೧೯೯೫-೯೬)	(+) ೭೬.೩೪ಶೇ.

ಸನ್ ೧೯೯೦-೯೧, ೧೯೯೧-೯೨, ೧೯೯೨-೯೩ ಮತ್ತು ೧೯೯೪-೯೫ರಲ್ಲಿ, ನಮ್ಮ ಕೃಷಿ ಉತ್ಪಾದನೆಯ ನಿರ್ಯಾತವು ಕಡಿಮೆಯಾಗಿದೆ. ಕಾರಣ ಚಹಾ, ಕಾಫೀ, ಭತ್ತ, ಹತ್ತಿ, ಬೆಳೆಕಾಳುಗಳು, ಸಾಂಬಾರ ಪದಾರ್ಥಗಳು, ಗೋಧಿ ಮತ್ತುಹಣ್ಣುಗಳು, ಇಳುವರಿ ಕಡಿಮೆಯಾದದ್ದರಿಂದ ನಮ್ಮ ನಿರ್ಯಾತವು ಕಡಿಮೆಯಾಗಿದೆ. ಆದರೆ ೧೯೯೩-೯೪ರಲ್ಲಿ ಮತ್ತು ೧೯೯೫-೯೬ ರಲ್ಲಿ ಕ್ರಮವಾಗಿ ೨೭.೧೦ಶೇ. ಮತ್ತು ೬೩.೯೬ಶೇ. ರಷ್ಟು ಹೆಚ್ಚು ನಿರ್ಯಾತಮಾಡಲಾಗಿದೆ. ಕಾರಣ ನಮ್ಮ ಕೃಷಿ ಉತ್ಪಾದನೆಗಳ ಇಳುವರಿ ಅಧಿಕವಿರುವುದರಿಂದ ಮತ್ತು ನಿರ್ಯಾತ ವ್ಯಾಪಾರದಲ್ಲಿ ಅಧಿಕ ಬೆಲೆ ಬಂದುದರಿಂದ, ನಮ್ಮ ನಿರ್ಯಾತವು ಹೆಚ್ಚಿದೆ.

ಡಿ. ಬೆಳಗಾಂವ ಕೃಷಿ ಉತ್ಪನ್ನ ಮಾರುಕಟ್ಟೆಯ ಸಮೀಕ್ಷೆ ಮತ್ತು ಅದರ ಆದಾಯ ವೆಚ್ಚ ಉಳಿತಾಯ ಕುರಿತು ಒಂದು ಓರೆ ನೋಟ.

ಈ ಸಮಿತಿಯು ರೈತರ ಸಮರ್ಪಕ ಸೇವೆಯನ್ನು ಮತ್ತು "ವ್ಯಾಪಾರ ವ್ಯವಸ್ಥೆ"ಯನ್ನು ಒದಗಿಸುವ ದೃಷ್ಟಿಯಿಂದ ದಿನಾಂಕ ೧೦.೦೪.೧೯೫೫ರಲ್ಲಿ ಸನ್ ೧೯೩೯ (ಬಾಂಬೆ ಆಕ್ಟ) ರ ಕೃಷಿ ಉತ್ಪನ್ನ ಮಾರುಕಟ್ಟೆಗಳ ಕಾನೂನಿನ್ವಯ ಸ್ಥಾಪಿಸಲಾಗಿದೆ. ಈ ಕೃಷಿ ಉತ್ಪನ್ನ ಮಾರುಕಟ್ಟೆಯು ರೈತರಿಗೆ ಸಮರ್ಪಕ ಸೇವೆಯನ್ನು ಸಲ್ಲಿಸುತ್ತಾಬಂದಿದೆ. ಇಲ್ಲಿ ಅಧಿಕೃತ ತೂಕ, ಅಳತೆಗಳನ್ನು ಕಾಯ್ದುಕೊಳ್ಳುವ ಮೂಲಕ ಮೋಸ ಮಾಡಿದವರನ್ನು, ಶಿಕ್ಷೆಗೆ ಒಳಪಡಿಸಿದರೆ, ಈ ಕೃಷಿ ಮಾರುಕಟ್ಟೆ ಸಮಿತಿಯು ರೈತಿಗೆ ಯೋಗ್ಯ ಬೆಲೆಗಳನ್ನು, ಸಮರ್ಪಕ ಮಾರುಕಟ್ಟೆಯ ಸಮಾಚಾರಗಳನ್ನು, ದಾಸ್ತಾನು ಮಳಿಗೆಗಳನ್ನು, ರೈತರಿಗೆ ವಿಶ್ರಾಂತಿ ಗೃಹಗಳನ್ನು ಒದಗಿಸಿ, ಸಮರ್ಪಕ ಪ್ರಗತಿಯ ಪ್ರಯತ್ನ ಮಾಡಿದೆ. ಸಮಿತಿಯು ರೈತರಿಗೆ ಅನುಕೂಲವಾದ ದೃಷ್ಟಿಯಿಂದ ಕಂಗ್ರಾಳಿ ಗ್ರಾಮದಲ್ಲಿ ೮೩ ಎಕರೆ ಮತ್ತು ಹಿರೆಬಾಗೇವಾಡಿಯಲ್ಲಿ ೧೨ ಎಕರೆ ೧೬ ಗುಂಟೆ ವಿಸ್ತೀರ್ಣಗಳ ಪ್ರಾಂಗಣಗಳನ್ನು ಒಳಗೊಂಡಿದೆ.

ಈ ಕೆಳಗಿನ ಪಟ್ಟಿಯಲ್ಲಿ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಲಾರಿಗಳ ಮೂಲಕ ಶೇ.೫೫ ಚಕ್ಕಡಿಗಳ ಮೂಲಕ ಶೇ. ೨೫, ಟ್ರ್ಯಾಕ್ಟರುಗಳ ಮೂಲಕ ಶೇಕಡಾ ೧೩, ಸೈಕಲ್‌ಗಳ ಮೂಲಕ ಶೇ.೦೨ ಮತ್ತು ಬಸ್‌ಗಳ ಮೂಲಕ ಶೇಕಡಾ ೦೫ ಕೃಷಿ ಉತ್ಪನ್ನ ಮಾರುಕಟ್ಟೆಗೆ ತರಲು ಸಾರಿಗೆ ಮಾಧ್ಯಮ ಬಳಸುವದು.

ಸಾರಿಗೆ ಮಾಧ್ಯಮ	ಶೇಕಡಾ
ಲಾರಿಗಳ ಮೂಲಕ	೫೫ ಶೇ.
ಚಕ್ಕಡಿಗಳ ಮೂಲಕ	೨೫ ಶೇ.
ಟ್ರ್ಯಾಕ್ಟರ್‌ಗಳ ಮೂಲಕ	೧೩ ಶೇ.
ಸೈಕಲ್‌ಗಳ ಮೂಲಕ	೦೨ ಶೇ.
ಬಸ್‌ಗಳ ಮೂಲಕ (ಕೆಎಸ್‌ಆರ್‌ಟಿಸಿ)	೦೫ ಶೇ.
ಒಟ್ಟು	೧೦೦ ಶೇ.

ಈ ಕೃಷಿ ಮಾರುಕಟ್ಟೆಗೆ ೧೯೮೦- ೮೧ರಲ್ಲಿ ೮೬,೨೬,೦೫೧ ಕ್ವಿಂಟಲ್‌ಗಳಷ್ಟು ಕೃಷಿ ಉತ್ಪನ್ನಗಳು ಆವಕವಾಗಿದ್ದು, ಅದು ೧೯೯೦ -೯೧ರಲ್ಲಿ, ೧, ೨೬,೨೮,೧೬೩ ಕ್ವಿಂಟಲ್‌ಗಳಷ್ಟು ಆವಕವಾಯಿತು. ಅಂದರೆ ಶೇಕಡಾ ೪೯.೩೯ ರಷ್ಟು ೧೯೮೦ -೮೧ಕ್ಕಿಂತ ೧೯೯೦ -೯೧ ರಲ್ಲಿ ಹೆಚ್ಚು ಆವಕವಾಗಿದೆ. ಕಾರಣ ರೈತರು ಅಧಿಕ ಇಳುವರಿ ಪಡೆದು ಮಾರುಕಟ್ಟೆಯ ಲಾಭ ಪಡೆದಿದ್ದಾರೆ. ಆದರೆ ೧೯೯೫-೯೬ರಲ್ಲಿ ೯೯-೩೦-೬೯೧ ಕ್ವಿಂಟಲ್‌ಗಳಷ್ಟು ಆವಕವಾಗಿದೆ. ಅಂದರೆ ಶೇ. ೨೧.೩೬ರಷ್ಟು ೧೯೯೦-೯೧ ಕ್ಕಿಂತ ೧೯೯೫- ೯೬ರಲ್ಲಿ ಕಡಿಮೆ ಆವಕವಾಗಿದೆ. ಕಾರಣ ರೈತರು ಕಡಿಮೆ ಇಳುವರಿ ಪಡೆದದ್ದರಿಂದ ಮತ್ತು ಮಾರುಕಟ್ಟೆಯಲ್ಲಿ ಬೆಲೆ ಕುಸಿದಿದ್ದರಿಂದ ರೈತರು ಕಡಿಮೆ ಅವಕ ಮಾಡಿದ್ದಾರೆ. ಈ ಕೆಳಗಿನ ಪಟ್ಟಿಯು ಇದರ ವಿವರ ನೀಡುವದು.

ವರ್ಷ	ಕೃಷಿ ಉತ್ಪನ್ನಗಳು	(ಆವಕ ಕ್ವಿಂಟಲ್‌ಗಳಲ್ಲಿ) ಶೇಕಡಾ
೧೯೮೦-೮೧	೮೬,೨೬,೦೫೧	--
೧೯೯೦-೯೧	೧,೨೬,೨೮,೧೬೩	+ ೪೯.೩೯ ಶೇ.
೧೯೯೫-೯೬	೯೯,೩೦,೬೯೧	(-) ೨೧.೩೬ ಶೇ.

ಸಮಿತಿಯ ಆದಾಯ -ವೆಚ್ಚ ಉಳಿತಾಯಗಳು

ಕೃಷಿ ಮಾರುಕಟ್ಟೆಗಳು ಸಾಮಾನ್ಯವಾಗಿ ತಮ್ಮ ಆದಾಯವನ್ನು ಈ ಕೆಳಗಿನ ಮೂಲಗಳಿಂದ ಪಡೆಯುವದು.

೧. ವರ್ತಕರಿಗೆ ಲೈಸನ್ಸ್ ನೀಡುವ ಮೂಲಕ

೨. ಮಾರುಕಟ್ಟೆಯ ಫೀಗಳನ್ನು ಪಡೆಯುವದರ ಮೂಲಕ

೩. ರೈತರ ಕೃಷಿ ಉತ್ಪನ್ನಗಳ ಮೇಲೆ ನಿರ್ದಿಷ್ಟ ಶುಲ್ಕ ಪಡೆಯುವದರ ಮೂಲಕ

ಕೃಷಿ ಮಾರುಕಟ್ಟೆಯ ಸಮಿತಿಗಳು ತಮ್ಮ ಆದಾಯಗಳನ್ನು ಪ್ರಾಂಗಣಗಳ ಅಭಿವೃದ್ಧಿಗಾಗಿ, ದಾಸ್ತಾನು ಮಳಿಗೆಗಳನ್ನು ನಿರ್ಮಿಸುವದಕ್ಕಾಗಿ, ರೈತರಿಗೆ ವಿಶ್ರಾಂತಿ ಗೃಹಗಳನ್ನು ನಿರ್ಮಿಸಲಿಕ್ಕೆ ಮತ್ತು ಇತರೆ ಅವಶ್ಯಕತೆಗಳನ್ನು ನಿಗಿಸಿಕೊಂಡು ಉಳಿದ ಹಣವನ್ನು ಬ್ಯಾಂಕು ಅಂಚೆ ಮತ್ತು ಸರಕಾರಿ ಖಜಾನೆಗಳಲ್ಲಿ ಮುದ್ದತಿ ಠೇವಣಿ ರೂಪದಲ್ಲಿ ಆದಾಯವನ್ನು ನಿಯೋಜಿಸುವದು.

ಬೆಳಗಾಂವಿ ಕೃಷಿ ಉತ್ಪನ್ನ ಮಾರುಕಟ್ಟೆಯ
ಆದಾಯ -ವೆಚ್ಚ -ಉಳಿತಾಯ

ವರ್ಷ	ಆದಾಯ ರೂ. ಗಳಲ್ಲಿ	ವೆಚ್ಚ ರೂ. ಗಳಲ್ಲಿ	ಉಳಿತಾಯ ರೂ.ಗಳಲ್ಲಿ	ಶೇಕಡಾ (ಉಳಿತಾಯ)
೧೯೯೨-೯೩	೭೪,೧೫.೩೦೬	೪೨,೨೪,೪೦೧	೩೧,೯೧,೨೬೪	೪೩.೦೪ ಶೇ.
೧೯೯೩-೯೪	೮೫,೩೭,೯೨೨	೪೮,೪೭,೯೦೯	೩೬,೯೦,೦೧೩	೪೩.೨೨ ಶೇ.
೧೯೯೪-೯೫	೮೫,೩೫,೬೫೭	೩೭,೨೬,೨೯೭	೪೮,೦೯,೩೬೨	೫೬,೩೪ ಶೇ.
೧೯೯೫-೯೬	೧,೦೦,೦೦,೦೭೩	೬೬,೦೧,೦೩೮	೪೩,೯೯,೦೩೫	೪೪.೦೦ ಶೇ.
ಒಟ್ಟು	೩,೫೪,೮೮,೯೫೭	೧,೯೩,೯೯,೨೮೩	೧,೬೦,೮೯,೬೭೪	೪೫.೩೪ ಶೇ.

ಈ ಮೇಲಿನ ಪಟ್ಟಿಯಿಂದ ತಿಳಿದು ಬರುವದು ಏನೆಂದರೆ-ಸಮಿತಿಯು ರೈತರಿಗೆ ಸೇವೆಯನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಿಸುತ್ತಾ ಬಂದಿದೆ. ಅದು ೧೯೯೩-೯೪ರಲ್ಲಿ ಶೇ. ೦.೧೮ರಷ್ಟು ೧೯೯೨-೯೩ಕ್ಕಿಂತ ಹೆಚ್ಚು ಉಳಿತಾಯವನ್ನು ಮಾಡಲಾಗಿದೆ. ಮತ್ತು ೧೯೯೪-೯೫ರಲ್ಲಿ ೧೯೯೩-೯೪ಕ್ಕಿಂತ ಶೇಕಡಾ ೧೩.೧೨ ರಷ್ಟು ಹೆಚ್ಚು ಉಳಿತಾಯ ಮಾಡಲಾಗಿದೆ. ಆದರೆ ೧೯೯೫-೯೬

೧೯೯೪-೯೫ಕ್ಕಿಂತ ಶೇಕಡಾ ೧೨.೩೪ರಷ್ಟು ಕಡಿಮೆ ಉಳಿತಾಯ ಮಾಡಲಾಗಿದೆ. ಕಾರಣ ಸನ್ ೧೯೯೫-೯೬ ರಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಹೆಚ್ಚಿಸಿದ್ದುರಿಂದ ಕಡಿಮೆ ಉಳಿತಾಯವನ್ನು ಮಾಡಲಾಗಿದೆ.

೯. ಭಾರತದ ಕೃಷಿ ಮಾರುಕಟ್ಟೆಗಳು ಕುಂಠಿತವಾಗುವುದಕ್ಕೆ ಕಾರಣಗಳು:

ನಮ್ಮ ಕೃಷಿ ಮಾರುಕಟ್ಟೆಗಳಿಗೆ ಏನೆಲ್ಲಾ ಸವಲತ್ತು, ಅನುಕೂಲಗಳನ್ನು ನೀಡಿದ್ದರೂ ಸಹಿತ ರೈತರು ತಮ್ಮ ಸರಕುಗಳನ್ನು ಕೃಷಿ, ಮಾರುಕಟ್ಟೆಗೆ ತರಲು ವಿಫಲರಾಗಿದ್ದಾರೆ. ನಮ್ಮ ದೇಶದ ಕೃಷಿ ಮಾರುಕಟ್ಟೆಗಳು ಕುಂಠಿತವಾಗುವದಕ್ಕೆ ಮುಖ್ಯವಾಗಿ ಈ ಕೆಳಗಿನ ಆಂತರಿಕ ಮತ್ತು ಬಾಹ್ಯ ಅಂಶಗಳು ಕಾರಣವಾಗಿವೆ :

೧. ನೀರಾವರಿಯ ಕೊರತೆ : ಇಂದಿಗೂ ನಮ್ಮ ದೇಶದಲ್ಲಿ ಶೇಕಡಾ ೭೦ರಷ್ಟು ಸಾಗುವಳಿಯು ಮನ್ಸೂನ ಮಳೆಯನ್ನು ಅವಲಂಬಿಸಿದೆ. ಕೇವಲ ಶೇಕಡಾ ೩೦ರಷ್ಟು ಮಾತ್ರ ನೀರಾವರಿ ಸೌಲಭ್ಯವಿದ್ದುರಿಂದ ಕೃಷಿ ಉತ್ಪಾದನೆ ಕಡಿಮೆಯಾಗುವದರಿಂದ ಮಾರುಕಟ್ಟೆಗಳ ಪ್ರಗತಿಯು ಪ್ರಗತಿ ಸಾಧಿಸಲು ಸಾಧ್ಯವಾಗಿಲ್ಲ.

೨. ಸಾಲದ ತೊಂದರೆ : ಕೃಷಿಯನ್ನು ಬಾಧಿಸುವ ಬೃಹತ್ ಸಮಸ್ಯೆ ಎಂದರೆ ಸಾಲದ ತೊಂದರೆ. ನಮ್ಮ ರೈತರು ಸಾಮಾನ್ಯವಾಗಿ ಬಡವರು ಆಗಿರುವದರಿಂದ ಕೃಷಿಯಲ್ಲಿ ತಾಂತ್ರಿಕತೆಯನ್ನು ಮತ್ತು ಮಾರುಕಟ್ಟೆಯ ಸೌಲಭ್ಯ ಪಡೆಯುವಲ್ಲಿ ವಿಫಲರಾಗಿದ್ದಾರೆ. ಹೆಚ್ಚಿನ ದರದ ಬಡ್ಡಿ ಸಾಲವನ್ನು ಖಾಸಗೀಯವಾಗಿ ತರುವುದರಿಂದ, ಆ ಸಾಲವನ್ನು ತೀರಿಸುವುದರಲ್ಲಿಯೇ ಅವರ ಜೀವನ ಸಾಗಲಿದೆ. ಇದರಿಂದ ಮಾರುಕಟ್ಟೆಯ ಅಭಿವೃದ್ಧಿ ಸಾಧ್ಯವಾಗಿಲ್ಲ.

೩. ಸಣ್ಣ ಹಿಡುವಳಿಗಳು : ಆಸ್ತಿ ಒಡೆತನ ಮತ್ತು ಪಿತ್ರಾರ್ಜಿತ ಹಕ್ಕು ಸಾಧಿಸಲು ಪ್ರಯತ್ನಿಸಿ ಚಿಕ್ಕ ಹಿಡುವಳಿಗಳು ಆಗಿರುವದರಿಂದ, ರೈತರು ಕೃಷಿ ಪೇಟೆಗೆ ತರುವಷ್ಟು, ಕೃಷಿ ಉತ್ಪನ್ನಗಳನ್ನು ಉತ್ಪಾದಿಸಲು ಅಸಮರ್ಥರಾಗಿದ್ದಾರೆ.

೪. ಸಾಗಾಣಿಕೆ ಸೌಕರ್ಯ ಮತ್ತು ದಾಸ್ತಾನು ಮಳಿಗೆಗಳ ಕೊರತೆ : ಭಾರತದ ಕೃಷಿಕರು ಎದುರಿಸುವ ಸಮಸ್ಯೆ ಎಂದರೆ ಸಾರಿಗೆ ಮಾಧ್ಯಮದ ಸೌಕರ್ಯ ಮತ್ತು ದಾಸ್ತಾನು ಮಳಿಗೆಗಳ ಅಭಾವವಾಗಿದೆ. ದುರದೃಷ್ಟವಶಾತ್ ನಮ್ಮ ದೇಶದಲ್ಲಿ ಇನ್ನೂ ಕೆಲವು ಕೆಲವು ಹಳ್ಳಿಗಳಿಗೆ ರಸ್ತೆಗಳೇ ಇಲ್ಲ, ವಾಹನ ಸೌಕರ್ಯಗಳಿಲ್ಲ. ಈ ಸಾರಿಗೆ ವ್ಯವಸ್ಥೆ ಇದ್ದ ಹಳ್ಳಿಗಳ ರೈತರಿಗೆ ಯೋಗ್ಯ ಬೆಲೆ ಬರುವವರೆಗೆ ತಮ್ಮ ಹುಟ್ಟುವಳಿಗಳನ್ನು ಸಂಗ್ರಹಿಸಿ ಇಡಲು ದಾಸ್ತಾನು ಮಳಿಗೆಗಳ ಕೊರತೆಯು ಬೃಹದಾಕಾರವಾಗಿದೆ. ಇವು ಸಹಿತ ಕೃಷಿ ಮಾರುಕಟ್ಟೆಗಳು ಕುಂಠಿತವಾಗುವದಕ್ಕೆ ಕಾರಣವಾಗಿವೆ.

೫. ಬಡತನ : ಭಾರತದ ರೈತರು ಸಾಮಾನ್ಯವಾಗಿ ಕಡುಬಡವರಾಗಿರುವದರಿಂದ, ಅವರು ಸುಗ್ಗಿಯಾದ ತಕ್ಷಣ ಧಾನ್ಯದ ರೂಪದಲ್ಲಾಗಲಿ, ಸಾಲದ ಮರುಪಾವತಿಯ ರೂಪದಲ್ಲಾಗಲಿ, ತಕ್ಷಣ ಸ್ಥಳೀಯ ವ್ಯಾಪಾರಸ್ಥರಿಗೆ ಮಾರುವುದರಿಂದ ಅವರು ಕೃಷಿ ಮಾರುಕಟ್ಟೆಯ ಸೌಲಭ್ಯ ಪಡೆಯುವಲ್ಲಿ ವಿಫಲರಾಗಿದ್ದಾರೆ. "ರೈತರ ಆರ್ಥಿಕ ದುರ್ಬಲತೆಯು ಅವ್ಯವಸ್ಥಿತ ಕೃಷಿ ಮಾರುಕಟ್ಟೆಗಳ ಅಸ್ತಿತ್ವಕ್ಕೆ ಕಾರಣವಾಗಿದೆ".

೬. ಮಧ್ಯವರ್ತಿಗಳು : "ಕೃಷಿ ಮಾರುಕಟ್ಟೆಯಲ್ಲಿ ರೈತರ ಮತ್ತು ಕೊಳ್ಳುವವರ ನಡುವೆ ಕೊಂಡಿಯಂತೆ ಕೆಲಸ ಮಾಡುವವರೇ ಮಧ್ಯವರ್ತಿಗಳು." ಅವರು ರೈತರಿಗೆ ಕಡಿಮೆ ಬೆಲೆ ಮಾಡಿ ಅಧಿಕ ದಲ್ಲಾಳಿ ಪಡೆಯುವಲ್ಲಿ ಸಫಲರಾಗುತ್ತಿದ್ದಾರೆ. ಕೃಷಿ ಉತ್ಪನ್ನಗಳ ನಿಜ ಬೆಲೆ ಮತ್ತು ರೈತರು ಪಡೆಯುವ ಪ್ರತಿಫಲದ ನಡುವೆ ವ್ಯತ್ಯಾಸಗಳುಂಟು ಆಗುವುದರಿಂದ ರೈತರಿಗೆ ಕೃಷಿ ಮಾರುಕಟ್ಟೆಗಳ ಮೇಲೆ ಸದಭಿಪ್ರಾಯಬಾರದೆ, ಕೃಷಿ ಮಾರುಕಟ್ಟೆಗಳ ಪ್ರಗತಿಯು ಸಾಧ್ಯವಾಗಿಲ್ಲ.

೭. ತೂಕ ಮತ್ತು ಅಳತೆಗಳಲ್ಲಿ ಮೋಸ : ಸರಕಾರವು ನಿಗದಿತ ತೂಕ ಅಳತೆಗಳನ್ನು ಅನುಸರಿಸಬೇಕೆಂದು ಕಡ್ಡಾಯ ನೀತಿ ಮಾಡಿದ್ದರೂ ಸಹಿತ, ವರ್ತಕರು ಅನಕ್ಷರಸ್ಥರಾದ ರೈತರಿಗೆ ಮೋಸ ಮಾಡುತ್ತಿದ್ದಾರೆ ಮತ್ತು ಅಸಮರ್ಪಕ ವರ್ಗೀಕರಣಗಳಿಂದ ಕೃಷಿ ಮಾರುಕಟ್ಟೆಗಳ ಅಭಿವೃದ್ಧಿಯು ಕುಂಠಿತವಾಗಿದೆ.

೮. ಬೆಲೆಗಳ ಮಾಹಿತಿ : ವಿವಿಧ ಪ್ರದೇಶಗಳ ಮಾರುಕಟ್ಟೆಯ ಬೆಲೆಗಳ ಬಗ್ಗೆ ಮಾಹಿತಿ ಪ್ರಸಾರ ಮಾಡುವ ಮಾಧ್ಯಮಗಳು ವಿರಳವಾಗಿರುವುದರಿಂದ, ವರ್ತಕರು ಮತ್ತು ದಲ್ಲಾಳಿಗಳು ಹೇಳಿದ ಬೆಲೆಗಳನ್ನು ನಂಬಿ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವರು. ಇದರಿಂದ ಬಹುತೇಕ ವೇಳೆ ರೈತರು ಕೃಷಿಗೆ ತಕ್ಕ ಬೆಲೆಯನ್ನು ಪಡೆಯುವಲ್ಲಿ ಮೋಸ ಹೋಗುವರು. ಏಕರೂಪದ ಬೆಲೆಗಳನ್ನು ಕೃಷಿ ಮಾರುಕಟ್ಟೆಗಳಿಗೆ ಕಾಯ್ದುಕೊಳ್ಳಲು ಸಾಧ್ಯವಾಗಿಲ್ಲವಾದ್ದರಿಂದ ಕೃಷಿ ಪೇಟೆಗಳ ಪ್ರಗತಿ ಕುಂಠಿತವಾಗಿದೆ.

೯. ಉತ್ಕೃಷ್ಟ ಬೀಜ, ರಸಗೊಬ್ಬರಗಳ ಮತ್ತು ಕ್ರಿಮಿನಾಶಕಗಳ ಬಳಕೆ ಕಡಿಮೆ. ಕಾರಣ ರೈತರು ಬಡವರಿದ್ದು ಆಧುನಿಕ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಲು ವಿಫಲರಾಗುತ್ತಿರುವದರಿಂದ ಕೃಷಿ ಉತ್ಪಾದನೆ ಕಡಿಮೆಯಾಗಿ ಕೃಷಿ ಪೇಟೆಯ ಅಭಿವದ್ಧಿಗಳು ಕುಂಠಿತವಾಗಿವೆ.

ಎಫ್. ಪರಿಹಾರೋಪಾಯಗಳು :

೧. ದಾಸ್ತಾನು ಮಳಿಗೆಗಳನ್ನು ನಿರ್ಮಿಸುವದು :

ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆಗಳು ದೊರೆಯುವರೆಗೆ ದಾಸ್ತಾನು ಮಾಡಲು ದಾಸ್ತಾನು ಮಳಿಗೆಗಳನ್ನು ಹೆಚ್ಚಿಸಬೇಕು. ಈಗಿರುವ ದಾಸ್ತಾನು ಮಳಿಗೆಗಳು ನಗರಕ್ಕೆ ಪೂರಕವಾಗಿದ್ದರಿಂದ ಮುಖ್ಯವಾಗಿ ಅವು ಗ್ರಾಮೀಣ ಪ್ರದೇಶದಲ್ಲಿ ಕಟ್ಟಿಸುವದು ಅವಶ್ಯವಿದೆ.

೨. ಸಹಕಾರ ಮತ್ತು ನಿಯಂತ್ರಿತ ಮಾರುಕಟ್ಟೆಗಳಿಗೆ ಆದ್ಯತೆ :

ರೈತರು ಸಹಕಾರಿ ತತ್ವದ ಆಧಾರದ ಮೇಲೆ ಸ್ವಯಂ ಸದಸ್ಯತ್ವವನ್ನು ಪಡೆದುಕೊಂಡು ಸಹಕಾರಿ ಮಾರುಕಟ್ಟೆಯ ಲಾಭವನ್ನು ಪಡೆಯಬೇಕು. ಮತ್ತು ಅದರಂತೆ ನಿಯಂತ್ರಿತ ಮಾರುಕಟ್ಟೆಗಳಿಗೂ ಪ್ರೋತ್ಸಾಹ ನೀಡಬೇಕು. ಇದರಿಂದ ಕೃಷಿ ಮಾರುಕಟ್ಟೆಯ ದೋಷಗಳನ್ನು ನಿವಾರಿಸಿ ವ್ಯವಸಾಯ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರಕಿಸಿಕೊಡಲು ಸಮರ್ಥವಾಗುವಂತೆ ಕ್ರಮ ಕೈಕೊಂಡು ಕೃಷಿ ಮಾರುಕಟ್ಟೆಗಳಿಗೆ ಪ್ರೋತ್ಸಾಹ ನೀಡಿ ಸುಧಾರಿಸಬೇಕು.

೩. ಮಾರುಕಟ್ಟೆಯ ಸುದ್ದಿ :

ಎಲ್ಲ ಮಾರುಕಟ್ಟೆಯಲ್ಲಿಯ ಬೆಲೆ, ಬೇಡಿಕೆ ಪೂರೈಕೆಗಳ ಬಗ್ಗೆ ಮಾರುಕಟ್ಟೆಯ ಸುದ್ದಿಯನ್ನು ಸೂಕ್ತ ಸಮಯದಲ್ಲಿ ರೈತರಿಗೆ ತಿಳಿಸುವದು ಅವಶ್ಯವಿದೆ. ಆದ್ದರಿಂದ ಪ್ರಸಾರ ಮಾಧ್ಯಮಗಳನ್ನು ಹೆಚ್ಚಿಸಬೇಕು.

೪. ಸಮರ್ಪಕ ತೂಕ ಮತ್ತು ವರ್ಗೀಕರಣಕ್ಕೆ ಕ್ರಮಕೈಕೊಳ್ಳುವದು :

ತೂಕ ಮತ್ತು ವರ್ಗೀಕರಣಗಳಲ್ಲಿ ಸಮರ್ಪಕ ಕ್ರಮಗಳನ್ನು ಕೈಕೊಂಡು ರೈತರು, ಮೋಸ ಹೋಗದಂತೆ ಮಾಡುವದು. ಅದಕ್ಕಾಗಿ ಈಗ ಕಾನೂನುಗಳು ಇದ್ದರೂ ಸಹಿತ ಅವು ಸಮರ್ಪಕವಾಗಿ ಕಾರ್ಯರೂಪದಲ್ಲಿ ಇಲ್ಲದ್ದು ವಿಷಾದನೀಯವಾಗಿದೆ. ಆದ್ದರಿಂದ ಸರಕಾರ ಯೋಗ್ಯ ಕ್ರಮಗಳನ್ನು ಕೈಕೊಳ್ಳುವದು ಅವಶ್ಯವಿದೆ.

೫. ಸಾರಿಗೆ ಮತ್ತು ಹಣಕಾಸಿನ ಸೌಲಭ್ಯ ಒದಗಿಸುವದು :

ರೈತರಿಗೆ ಹಣಕಾಸಿನ ಸೌಲಭ್ಯ ಒದಗಿಸಬೇಕು ಮತ್ತು ಅವರಿಗೆ ಅವಶ್ಯಕವಾದ ಸಾರಿಗೆ ವ್ಯವಸ್ಥೆಯನ್ನು ಕೈಕೊಳ್ಳಬೇಕು ಮತ್ತು ರಸ್ತೆಗಳ ಸುಧಾರಣೆ, ಅನಕ್ಷರತೆಯನ್ನು ಹೋಗ ಲಾಡಿಸುವದು ಮತ್ತು ಕಡಿಮೆ ವೆಚ್ಚದಲ್ಲಿ ತಮ್ಮ ಉತ್ಪಾದನೆಯ ಸರಕುಗಳನ್ನು ಕೃಷಿ ಮಾರುಕಟ್ಟೆಗೆ ತರುವ ವ್ಯವಸ್ಥಿತ ಸಾರಿಗೆಯ ಸೌಕರ್ಯವನ್ನು ಒದಗಿಸಬೇಕು.

೬. ರೈತರು ಅನುತ್ಪಾದಕ ವೆಚ್ಚಗಳನ್ನು ತಗ್ಗಿಸಬೇಕು :

ರೈತರು ಸಾಲವಾಗಿ ಪಡೆದ ಹಣವನ್ನು ಅನು ಉತ್ಪಾದಕ ವೆಚ್ಚಗಳಲ್ಲಿ ತೊಡಗಿ ಸುತ್ತಿರುವದು ವಿಷಾದನೀಯವಾಗಿದೆ. ರಾಷ್ಟ್ರೀಯ ಆದಾಯ ಸಮಿತಿಯ ಪ್ರಕಾರ ಶೇಕಡಾ ೮೩ರಷ್ಟು ಸಾಲದಿಂದ ತಂದ ಹಣ ಅನುತ್ಪಾದಕ ವೆಚ್ಚದಲ್ಲಿ ವ್ಯಯವಾಗುವದು. ಇದರಿಂದ ರೈತರು ಸಾಲ ತುಂಬಲು ಅಸಮರ್ಥರಾಗಿ, ಸಾಲ ಮನ್ನಾಕ್ಕೆ ಸರಕಾರವನ್ನು ಒತ್ತಾಯಿಸುತ್ತಿರುವುದು ನಿಜಕ್ಕೂ ದುರದೃಷ್ಟಕರ ಸಂಗತಿ. ಇದು ಪ್ರಗತಿಯ ಸಂಕೇತವು ಅಲ್ಲ. ಇದರಿಂದ ರೈತರ ಉತ್ಪಾದನೆ ಕಡಿಮೆಯಾಗಿ ಕೃಷಿ ಪೇಟೆಯ ಅನಭಿವೃದ್ಧಿಗೆ ಕಾರಣವಾಗಿದೆ. ಆದ್ದರಿಂದ ರೈತರು ಅನುತ್ಪಾದಕ ವೆಚ್ಚಗಳನ್ನು ತಗ್ಗಿಸಬೇಕು.

೭. ಸಹಕಾರಿ ಬೇಸಾಯ ಪದ್ಧತಿಯನ್ನು ಅನುಸರಿಸುವದು:

ರೈತರು ಸಣ್ಣ ಹಿಡುವಳಿಗಳನ್ನು ತೆಗೆದು ಸಹಕಾರಿ ಬೇಸಾಯ ಪದ್ಧತಿಯನ್ನು ಕೈಕೊಳ್ಳಬೇಕು. ಸರಕಾರ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಬೇಕು. ರೈತರಿಗೆ ಸಾಲದ ತೊಂದರೆಯ ವಿಷಯವಾಗಿ, ಆರ್ಥಿಕ ಸಹಾಯ ಒದಗಿ ಅವರ ಕೃಷಿ ಉತ್ಪನ್ನಗಳನ್ನು ಹೆಚ್ಚಿಸಿ ಮಾರುಕಟ್ಟೆಯ ಪ್ರಗತಿಯನ್ನು ಹೆಚ್ಚಿಸಬೇಕು.

೮. ಮಧ್ಯವರ್ತಿಗಳನ್ನು ಕಡಿಮೆ ಮಾಡುವುದು:

ಕೃಷಿ ಪೇಟೆಯಲ್ಲಿ ಆದಷ್ಟು ಮಟ್ಟಿಗೆ ಮಧ್ಯವರ್ತಿಗಳನ್ನು ಕಡಿಮೆ ಮಾಡಿ ರೈತರಿಗಾಗುವ ತೊಂದರೆಗಳನ್ನು ನಿವಾರಿಸಬೇಕು ಮತ್ತು ಸರಕಾರವು ಬಡತನ ನಿರ್ಮೂಲನ ಯೋಜನೆಗಳನ್ನು ಕೈಕೊಂಡು ರೈತರ ಆರ್ಥಿಕ ದುರ್ಬಲತೆಯನ್ನು ಹೋಗಲಾಡಿಸಬೇಕು. ಸಬಲ ರೈತನು ಪ್ರಬಲವಾದ ಕೃಷಿ ಪೇಟೆಯನ್ನು ಇಷ್ಟಪಡುವನು.

ಉಪಸಂಹಾರ :

ಒಕ್ಕಲುತನವು ಭಾರತದಲ್ಲಿ ರೈತರ ಬದುಕಾಗಿದೆ. ಮತ್ತು ಅವರ ಅಭಿವೃದ್ಧಿ ಮತ್ತು ಉನ್ನತಿಯನ್ನು ಬಯಸುವ ಏಕೈಕ ವಲಯ ಆಗಿದೆ. ಅದಕ್ಕಾಗಿ ಸಮರ್ಪಕ ಮಾರುಕಟ್ಟೆ (ನಿಯಂತ್ರಿತ)ಯ ವ್ಯವಸ್ಥೆಯು ಪ್ರಾಮುಖ್ಯತೆಯನ್ನು ಪಡೆದಿದೆ.

ಭಾರತ ಕೇವಲ ಸಾಂಪ್ರದಾಯಿಕ ವ್ಯವಸಾಯ ಪದ್ಧತಿಯನ್ನು ಒಳಗೊಂಡಿದ್ದರೂ ಸಹಿತ ನಮ್ಮ ಪ್ರಯತ್ನಗಳು ಹಿಂದೆ ಬಿದ್ದಿಲ್ಲ. ಕೃಷಿಗೆ ಆದ್ಯತೆ ನೀಡಿ ಕೃಷಿ ಮಾರುಕಟ್ಟೆಗಳ ಅಭಿವೃದ್ಧಿಗೆ ಪ್ರಯತ್ನ ಮಾಡಲಾಗಿದೆ. ಇನ್ನೂ ಸಮರ್ಪಕ ಪ್ರಗತಿ ಸಾಧಿಸುವದು ಅವಶ್ಯವಿದೆ. ಇಂದು ಕೃಷಿ ವಿಶ್ವವಿದ್ಯಾಲಯಗಳು, ಪ್ರಯೋಗಾಲಯಗಳು, ಮಾರುಕಟ್ಟೆಯ ಮಾಹಿತಿ ಕೇಂದ್ರಗಳು ರೈತರಿಗೆ ತಿಳುವಳಿಕೆ ನೀಡಿ, ಆಧುನಿಕ ಬೇಸಾಯ ಪದ್ಧತಿ ಅನುಸರಿಸಿ ಹೆಚ್ಚು ಇಳುವರಿ ಪಡೆಯುವದರ ಮೂಲಕ ಕೃಷಿ ಪೇಟೆಯನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಲಾಗುತ್ತಿದೆ. ಮತ್ತು ಹೆಚ್ಚು ಉತ್ಪಾದನೆಯು ಮತ್ತು ಹೆಚ್ಚು ಪ್ರತಿಫಲದಾಯಕ ಬೇಸಾಯ ಪದ್ಧತಿಯಿಂದ ಅಧಿಕ ಉತ್ಪಾದನೆ ಮಾಡಿ ಭಾರತದ ಕೃಷಿ ಪೇಟೆಯಲ್ಲಿ ಒಂದು ಮೈಲಿಗಲ್ಲು ಸಾಧಿಸಬಹುದು.

ರೈತರಿಗೆ ಸಮರ್ಪಕ ಮಾರುವ ವ್ಯವಸ್ಥೆಯಿಂದ, ಹೆಚ್ಚಿನ ಪ್ರತಿಫಲ ಪಡೆದು ತಲಾ ಮತ್ತು ರಾಷ್ಟ್ರೀಯ ವರಮಾನ ಹೆಚ್ಚಿಸಬಹುದು. ನಮ್ಮ ಸರಕಾರಗಳು ಗ್ರಾಮೀಣ ರೈತರ ಕೃಷಿ ಮಾರಾಟ ವ್ಯವಸ್ಥೆಯ ತೊಂದರೆ ನಿಭಾಯಿಸಿದಲ್ಲಿ ರಾಷ್ಟ್ರದ ಕೃಷಿ ಮತ್ತು ಕೃಷಿ ಪೇಟೆಗಳ ಪ್ರಗತಿ ಹೆಚ್ಚು ಆಗಿ ರಾಷ್ಟ್ರೀಯ ಆಹಾರ ಸಮಸ್ಯೆಯನ್ನು ನಿವಾರಿಸಿ, ಅಂತರ್‌ರಾಷ್ಟ್ರೀಯ ಪೇಟೆಗೆ ಕೃಷಿ ಸರಕುಗಳನ್ನು ಮಾರಾಟ ಮಾಡುವುದರ ಮೂಲಕ ರಾಷ್ಟ್ರದ ತೊಂದರೆಯನ್ನು ಹೋಗಲಾಡಿಸಬಹುದು ಎಂಬುದರಲ್ಲಿ ಎರಡು ಮಾತಿಲ್ಲ.


ಆಧಾರಗಳು :

೧. ಬೆಳಗಾಂವಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಮೀಕ್ಷೆ ವರದಿ.
೨. Global - Import - Export Magazine
೩. Agricultural Market- John Barker
೪. Indian Economy - Alak Ghosh
೫. Agricultural Markcting in India - A Sivaram A prasad

ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿನ ವ್ಯಕ್ತಿನಾಮಗಳು -೨

ಡಾ. ಎಂ. ಬಿ. ನೇಗಿನಹಾಳ

ಈ ಹಿಂದೆ ನೋಡಿರುವಂತೆ ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿ ದೊರೆಯುವ ವ್ಯಕ್ತಿನಾಮ ಸಾಮಗ್ರಿಯನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.



ಮೇಲೆ ಸೂಚಿಸಿದಂತೆ ಕ್ರಿ. ಶ. ಪೂರ್ವ ೩ನೆಯ ಶತಮಾನದಿಂದ ಕ್ರಿ.ಶ. ೪ನೆಯ ಶತಮಾನದವರೆಗೆ ಕರ್ನಾಟಕದಲ್ಲಿ ತೋರುವ ಈ ಶಾಸನಗಳಲ್ಲಿ ವ್ಯಕ್ತಿನಾಮಗಳ ಹಲವು ವಿಧಗಳು ಕಂಡು ಬರುತ್ತವೆ. ಈ ಅವಧಿ ರಾಜಸತ್ತೆಯಕಾಲವಾದುದುದರಿಂದ, ಚಕ್ರವರ್ತಿ, ಮಹಾಮಾತ್ರ ಮಹಾರತಿ ರಠಿಕ, ಅಮಾತ್ಯ ರಜ್ಜುಕ, ವಲ್ಲಭ, ವಲ್ಲವ, ಗೋವಲ್ಲವ, ಮಹಾಗಾಮಿ, ಗಾಮಿ (ಕ) (=ಗೌಡ), ಭೋಜಕ ಮೊದಲಾದ ಆಡಳಿತ ವರ್ಗದವರೂ, ಬ್ರಾಹ್ಮಣ, ಲೇಖಕ, ನೇಕಾರ ಮೊದಲಾದ ವೃತ್ತಿ ಜಾತಿಗಳವರೂ ಇಲ್ಲಿ ತೋರಿಬಂದಿದ್ದಾರೆ. ಇವರಿಗೆ ಪ್ರತ್ಯೇಕ ಹೆಸರುಗಳು ಕೆಲವೊಮ್ಮೆ ಇರಬಹುದು. ಇನ್ನು ಕೆಲವೊಮ್ಮೆ ಕೇವಲ ಇವರ ಸ್ಥಾನ ಸೂಚನೆ ಮಾತ್ರದಿಂದ ಉಲ್ಲೇಖಿಸಿದ್ದು ಕಂಡು ಬರುತ್ತದೆ.

ಪೂರ್ವ :

ವಿಶೇಷಣರೂಪ ಅ) ಪ್ರದೇಶ ಸೂಚಿ

೧. ಊರು	ಮಟ್ಟಪಟ್ಟಿದೇವ	ಮಳವಳ್ಳಿ
	ವೈಜಯಂತಿ ಪತಿ	"
	ಬಲಿವದಾರವಾಸಿನೋಟ ಆಪಕುಟಿ	ಸನ್ನತಿ
	ಮುಗುರ ಕೋಣ್ಣ "	
ಮೂಡೂಣ ಮಹಾಗಾಮಿ ಕುಮಾರ ದೇತಿಕ		"
ಮುನಾಳಿಯ ನಾಚಿಕಾ		
೨. ನಾಡು	ಉಪರಿಗಿರಿ ಅಪರಾಂತ ಅಪಕ ಮೂಳಕಸ	"
೩. ರಾಜ್ಯ	ಜಯವಿ	
	ಜಕೋರ	
	ರಠ (ರಟ್ಟ)	
	ಖಖರತಕುಲಘಾತಕಸ	
	ಮಹಾಸಾತವಾಹನಸ	

ಆ) ಸಂಬಂಧಸೂಚಿ

೪. ದೇವತಾ -ದೇವತೆಯ ಹೆಸರಿನಿಂದಲೇ ತನ್ನನ್ನು ಗುರುತಿಸಿಕೊಳ್ಳುವ ಪರಂಪರೆ ನಮ್ಮಲ್ಲಿ ತುಂಬ ಹಳೆಯುದು ನಮ್ಮ ಪರಿಶೀಲನೆಯ ಅವಧಿಯಲ್ಲಿ ಇಂಥ ಉದಾಹರಣೆಗಳು ಅಧಿಕವಾಗಿಲ್ಲ.

ಹಾರೀತಿ ಪುತ, ಹಾರೀತಿ ಪುತ್ರ ಎಂದಿರುವ ಈ ಉದಾಹರಣೆಗಳಲ್ಲಿ `ಹಾರೀತಿ' ಒಬ್ಬ ದೇವತೆ ಎಂದು ಗುರುತಿಸಲಾಗಿದೆ. ಈ ದೇವತೆಯ ಹೆಸರನ್ನು ಕದಂಬರ ನಾಮ ವಿಶೇಷವಾಗಿ ಮಳವಳ್ಳಿಯ ಶಾಸನ ಹೇಳುತ್ತದೆ. (ಅದೇ ಶಾಸನದ) ವಿಣ್ಹುಕಡ/ಕಡ್ಡ ಎಂಬ ಹೆಸರು ವಿಷ್ಣುಕೃತ ಎಂಬುದರ ಸಂಸ್ಕೃತ ಸ್ವೀಕರಣವಾಗಿದ್ದು ದೇವತಾ ಬಾಚಿಯ ಇನ್ನೊಂದು ಉದಾಹರಣೆ. ದೇವಾಣಂಪಿಯೆ, ಎಂಬುದನ್ನೂ ಈ ವರ್ಗಕ್ಕೆ ಸೇರಿಸಬಹುದು.

೫. ಗೋತ್ರ

	ಆತ್ತೇಯ ಅಗಿ ಸಮಜ	ಹಿರೇಹಡಗಲಿ
	ವತ್ಸಗೋತ್ತಸ ರುದಸಮ	"
	ಮಾಡರ ಅಗಿಲ್ಲ	
	ಕೋಸಿಕೀ ಪುತ್ತ ಸಿರಿನಾಗದತ್ತ	ಮಳವಳ್ಳಿ
	ಮಾನವ್ಯಸಗೋತ್ತ	"
೬ ಕುಲ		
	ಪಲ್ಲವಕುಲ (ಶಿವಖದವಮ)	ಹಿರೇಹಡಗಲಿ
	ಖಖರತ ಕುಲ ಘಾತಿಕಸ	ಸನ್ನತಿ
	ಚುಟುಕುಲಾನನ್ದ ಸಾತಕಣ್ಣಿ	ಮಳವಳ್ಳಿ
	ಕದಮ್ಬ ಶಿವ------ ವಮ್ಮ	"
	ಕೊಣ್ಡಮಾಣ ಕುಲತಿಲಕ	"
೭. ಕುಟುಂಬ :	ವಾಸಿಠೀ ಪುತ	ಸನ್ನತಿ
	[ಗೋತ್ರ]ಮೀ ಪುತ	"
	ಕೋಸಿಕೀ ಪುತ್ರ	ಮಳವಳ್ಳಿ
	ವೃತ್ತಿ -ಜಾತಿ ಸೂಚಿ	"
೮. ರಾಜ್ಯಾಧಿಕಾರ - ಬಿರುದು		ಸಿದ್ದಾಪೂರ ಮಸ್ಕಿ
	ಆಯಪುತೆ	"
	ದೇವಾಣಂಪಿಯೆ	ಸನ್ನತಿ
	ದೇವಾನಂ ಪಿಯ (ಅಶೋಕ)	"
	ಅನೇಕರಾಜಮಥಕ ಪತಿಗಹಿತಸ (ಸಿರಿಸಾತಕಣ್ಣಿ)	ಸನ್ನತಿ
	ಏಕಕುಸಸ	"
	ರಾಣೋವಾಸಿರಿ ಪುತಸ	
	ಸಮುದಿತ ಬಲವಾಹನಸ	
೯. ಆಡಳಿತ		
	ಮಹಾಮಾತ	ಬ್ರಹ್ಮಗಿರಿ
	ರಾಜಾಮಾಚ ಗಗನಕಸ	ಸನ್ನತಿ
	ಮಹಾರಠಿ ಪುತಸ	"
	ರಠಿನಿ ಸೇಖನಿಕಾಯ	ವಜ್ಜಲ
	ಭೋಜಕಿನಿಯ ಕಾಮಾ	ಸನ್ನತಿ
	ಅಮಾಚಿ ಸಂಘನಿಕಾ	"

ಕೋಲಿವಾಸ ಭೋಜಕ	ಹಿರೇಹಡಗಲಿ
ಆರಖಾ(ಣ್ಣಾ)ಧಿಕತಾ	
ತೂಥಿಕ	
ಅಮಚ್ಚ	
ನೇಯಿಕ	
ರಾಜಕುಮಾರ	
ಸೇನಾಪತಿ	
ರಠಕ	
ರಹಸಾಧಿಕತ ಭಟ್ಟಿಸಮ	
ಭದಮನುಸ	
ಮಾಡಬಿಕ	
ದೇಸಾಧಿಕತ	
ಗಾಮಾಗಾಮ ಭೋಜಕ	
ವಲ್ಲವ	
ಗೋವಲ್ಲವ	
ಸಂಚರಂತಕ	
ಗುಮಿಕ	"
ಮಹಾವಲ್ಲಭಮ್	ಮಳವಳ್ಳಿ
ರಜ್ಜುಕ	"
ಮಹಾಗಾಮಿ ಕುಮಾರದೇತಿಕ	ಸನ್ನತಿ

೧೦. ಇತರ ವೃತ್ತಿ -ಜಾತಿ ಸೂಚಕಗಳು

ಬಮ್ಹಾಣ	ಹಿರೇಹಡಗಲಿ
ಅಠ್ಠಾರ (ದ)ಸ ಜಾತಿ ಪರಿವಾರ	"
ಗೋವಲ್ಲವ	"
ಕೋಲಿಕ (= ನೇಕಾರ)	"
ಮಹಾಸಾರ್ಥವಾಹನ	"
ಬಛನಿಕಾಯ ... ಸ ಅಗ್ನಿಹೋತಿಕಸ	ಸನ್ನತಿ
ಸಿವತನಕ ಸ ಗಣಕಸ	"
ವಣೀಯಸ ಖಹಸ	
ವಣಿಕಸ ವೀರಸ	
ನಾಟಿಕಾಯ ಬುಧಸೇನಿ	
ಅಖಿಪಟಲಿಕ	

ಘರಿನೀಯ ಅಹಮರಿಕಾ -ಸಮಾ (ಮೊದಲಾದವರು)	"
ಗಹಪತಿ ಸೂಲಸ	
ವಿಶ್ವಕಮ್ಮಾ	ಮಳವಳ್ಳಿ -೨

ಉತ್ತರ:

ನಿಜರೂಪನಾಮಗಳು:

೧. ನಿಜರೂಪಿ ನಾಮಗಳಲ್ಲಿ ಸ್ಥಳನಾಮಗಳಂತೆ ವಿಶಿಷ್ಟ ಮತ್ತು ವಾರ್ಗಿಕಗಳನ್ನು ಗುರುತಿಸಬಹುದು. ಆದರೆ ಕೆಲವಡೆ ಇಂಥ ವಿಗ್ರಹ ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣ ಇಂಥ ನಾಮಗಳ ಭಾಷಿಕ ಮೂಲವೇ ಅಸ್ಪಷ್ಟವಾಗಿರುವುದು.

ಉದಾ:	ಚಪಡ (ಗಂ)	ಬ್ರಹ್ಮಗಿರಿ ಸಿದ್ದಾಪುರ
	ತಪಿಜ್ಞ (ಗಂ)	ಮಳವಳ್ಳಿ
	ಹಾರೀತಿ	"
	ತುವೇರ (ಗಂ)	ಸನ್ನತಿ
	ಪುಳುಮಾವಿ (ಗಂ)	ಬನವಾಸಿ
	ಮಾಢರಿ	ಹಿರೇಹಡಗಲಿ

ಕರ್ನಾಟಕದ ನಾಣ್ಯ ಮತ್ತು ಟಾಲೆಮಿಯಲ್ಲಿ ದೊರೆಯುವ ಉಳಿವಾಯ (ಬಲೆಒಕುರ) ಹಿಪ್ಪೆಕುರ ಮೊದಲಾದುವೂ ಈ ವರ್ಗಕ್ಕೆ ಸೇರುತ್ತವೆ.

೨. ಈ ಮುಂದೆ ತೋರಿಸಿದ ಉದಾಹರಣೆಗಳು ಏಕಘಟಕಗಳಾಗಿವೆ. ಇವುಗಳಿಗೆ ವಾರ್ಗಿಕಗಳು ಅಂಟಿಕೊಂಡಿಲ್ಲ:

ಅಸೋಕ	ಮಸ್ಕಿ
ಚಪಡ	ಸಿದ್ದಾಪುರ
ಧಸ	ಬೆಳಗಾವಿ (ಮಾಧವಪುರ)
ಅಣ	ಸನ್ನತಿ
ಕನ್ಹ	"
ಕೋಣ್ಹ	"
ಖಹ	"
ಖಿರಹ	"
ಗುಡ?	"
ತೇಲ	"
ನಾಗ	"
ನಾನ	"
ಭೋಡ	"

(ಸಿರಿ)	ಮಕ	"
	ಮಿತ	"
	ಯಖ	"
	ಸಂಖ	"
	ಸೂಲ	"
	ಯಾರ	"
	ಲಮ	"
	ಕಾಮಾ (ಹೆಂ)	"
	ಯಖಿ (ಹೆಂ)	"
	ವೀರ	"
	ಖಪ್ಪ	ಹಿರೇಹಡಗಲಿ
	ಚಂತ	ಚಿಕ್ಕಸಿಂದಗಿ

ಮೇಲಿನ ಉದಾಹರಣೆಗಳು ಬಹುತೇಕ ಇಂಡೋ ಆರ್ಯನ್ ಮೂಲದವು 'ಅ- ಸೋಕ' ದಲ್ಲಿನ ಅಕಾರ ಪೂರ್ವ ಪ್ರತ್ಯಯ ಹೊಂದಿದ ರೂಪ. ಕೃಷ್ + ನಕ್ ಎಂದು ವಿಗ್ರಹಿಸಲಾಗುವ ಕೃಷ್ಣ ಮಿದ್-ತ್ರ ಅಥವಾ ಮಿ-ತ್ರ ಎಂದು ವಿಗ್ರಹಿಸಲಾಗುವ ಮಿತ್ರ ಎಂಬವುಗಳಿಂದ ಕ್ರಮವಾಗಿ ಕನ್ಹ / ಕಣ್ಹ 'ಮಿತ'ಗಳು ಬಂದಿವೆಯೆಂದು ವಾದಿಸಲು ಶಕ್ಯವಿರುವುದಾದರೂ ಇಂಥ ರೂಪಗಳಲ್ಲಿ ವಿಶಿಷ್ಟ ಮತ್ತು ವಾರ್ಗಿಕಗಳನ್ನು ಪ್ರತ್ಯೇಕಿಸಿ ತೋರಿಸುವುದು ಒಟ್ಟಾರೆಯಾಗಿ ಸಾಧ್ಯವೆನಿಸದು.

೩. ಇನ್ನಿತರ ವ್ಯಕ್ತಿನಾಮಗಳನ್ನು ವಿಶಿಷ್ಟ ಮತ್ತು ವಾರ್ಗಿಕಗಳನ್ನಾಗಿ ಈ ಮುಂದೆ ವಿಭಜಿಸಿದೆ.

ವಿಶಿಷ್ಟ	ವಾರ್ಗಿಕ
ಸೇನ -	-ಅನ್ಹ
ಚುಟುಕುಲ-	-ಆನನ್ದ
ಸೇರ್-	-ಆಮ?
ಪುಳುಪು -	-ಆಯಿ(ವಿ)
ಮೂಡಾಣ-	-ಇ
ಸಮಲೋಕ-	-ಇಕ
ಕಿನಾದ-	-ಇಕ?
ಭೋಜಕ -	- ಇನಿ (ಹೆಂ)
ಹಥಿ /ಹಥ್-	- ಇಲ
ಅಸವರಕ್ (ಕ) -? ಅಠ-,	- ಕ

ಇದಮೋರ ಕಲ-	
ಗಿರಿಜನ-,ಚೇಜಿ-, ಕಿನಾದ-	
ಕೋಲಿ- ಗಗನ-, ದೇತಿ-,	
ಮಹಾತರ-, ಸಮಣ-,	
ಸಿವತನ-, ಮಹಿಸೇಲನ-	
ವಿಣ್ಣು-	- ಕಡ /ಕಡ್ಡ
ಸಾತ-	- ಕಣೆ/ ಕಣ್ಣೆ
ಅರಿ-	- (ಇ) ಕಾ (ಹೆಂ)
ಅಹಮರಿ-,	
ಪದಮಸಿರಿ-,-ಭಟಬಾಲಿ	
ಆಪ-	- ಕುಟಿ
ಖಂದ-	- ಕೋಂಡಿ (ಕೋಟ್ಟಿ)
ಸೋಮ-	- ಘ
ಖಂದ-	- ಡ (ಸಂ <ಆಢ್ಯ)
ಸಿಹ-	- ಡಿ.(ಹೆಂ)
ದತ್ತ-, ನನ್ದಿ- ಸಾಮಿ-	- ಜ. (ಸಂ. <ಆರ್ಯ)
ರಖಿ	- ತ
(ಸಿರಿ-) ನಾಗ-,ಪಿಯ-, ಪುರಿಸ-	- ದತಾದತ್ತ
..ಶಕ	- ದ
ಸಮ... ಡುನೆ-	- ದಾಸ
ಆಯ-, ಗೋವಿ-	- ದಾಸಿ
ಮಟ್ಟಪಟ್ಟಿ-, ನಾಗ-	- ದೇವ
ಸಿಯ	
ರವಿ-	- ಧರ
ಹೇಮ-	- ನಕ
ಕುಮಾರ-,ನಾಗ-	- ನನ್ದಿ
ಲೋಕ-	- ನನ್ದಿ
ಅಮ-, ನಾಗ-, ನಾಗಬೋಧಿ-	- ನಾಥ
	- ನಿಕಾ (ಹೆಂ)
ಪತಇ-, ಬಛ-, ಯಖ-,ಸಂಘು	
ಸೇಬ-	
ಸೇಲ-, ಭಿಕು- ರಠಿ-	- ನೀ (ಹೆಂ)

ಪೇಮ-	-ನು
ನಗಿ-, ಸಂಶ-	-ಪ
ವೈಜಯಂತಿ-	-ಪತಿ
ಯಶೋ-, ರೂಡ -	-ಪಾಲ
ದೇವಾಣಂ/ದಾವಾನಂ-	-ಪಿಯೆ /ಪಿಯ
ಅಮಾಚ-, ಆಯ-, ಕೋಸಿಕಿ-	-ಪುತಾ- ಪುತ್ರ/ಪುತ್ರ
ಲೇಖಕ- ವಾಸಿಠೀ ಹಾರೀತಿ	
ನಾಗ-	-ಬುಧಿ
ತುಲ-, ಮಿತ-	-ಭೂತಿ
ಕೋಂಡ -	-ಮಾಣ
ಪರಿ-	-ಮಿತ
ಗೋ-	-ಮುಡ
ಕದ-	-ಮೂಲ
ಖಖ-	-ರತ/ರಾತ
ಸೇ-	-ರಾಮ?
ಶಿವಖದ -	-ವಮ /ವಮ್ಮ
ಕೋಲಿ-	ವಾಸ-
ಅಭಗ-, (ಮಹಾ) ಸಾತ-	-ವಾಹನ
ಅಗಿ-,ಅಗ್ನಿ-, ಕಾಲ-, ಕುಮಾರ-	-ಸಮ (ಸಂ. ಶರ್ಮ)
ಖಂದ- ಭಟ್ಟಿ-, ರುದ-	
ಅಗಿ- ಗೋಲ-, ಸಾಲ-	-ಸಮಜ ಶರ್ಮಾರ್ಯ
ಕೋಟ್ಟಿ-	-ಸಮಸತ್ತಿ (ಶಂ. ಶರ್ಮಶಕ್ತಿ)
ಬಪ್ಪ-	-ಸಾಮಿ
ನಾಗ-, ರಾಮ-, ಸದಾ-	-ಸಿರಿ(ಹೆಂ)
ಮಹಾ-	-ಸೇನ
ಪದಮ-	?-ಸಿರಿಕಾ (ಹೆಂ)
ಬುಧ-	-ಸೇನಿ (ಹೆಂ)
ಧರಮ-	-ಹ

-ಇನಿ, -ಸಮಜ, -ಸಮಸತ್ತಿ, ಸಿರಿಕಾ ಈವಾರ್ಗಿಕಗಳಲ್ಲಿ ದ್ವಿರುಕ್ತಿ ಕಂಡುಬಂದಿದೆ. ವಿಶಿಷ್ಟಗಳಲ್ಲಿಯೂ ದ್ವಿರುಕ್ತಿಯಿರುವುದು ಸಾಮಾನ್ಯ ಸಂಗತಿ. ಕೋಂಡಿ ಎಂದಿರುವ ರೂಪ ಕೋಟಿ/ಕೋಟ್ಟಿಯಿಂದ ಬಂದುದೆಂದು ಭಾವಿಸಲಾಗಿದೆ. ಇದು ದ್ರಾವಿಡ ಮೂಲದ್ದು.

ಅದೇ ರೀತಿ ಕೊಂಡ -ಮಾಣ ಎಂದಿರುವಲ್ಲಿನ -ಮಾಣ ಎಂಬುದು ಅಮ್ಮಾನ್ ಎಂಬ ದ್ರಾವಿಡ ಮೂಲದಿಂದಲೇ ಸಿದ್ಧಿಸಿದ್ದು. ಕೊಂಡ -ಎಂಬುದು ಗುಡ್ಡ-ಬೆಟ್ಟ ಎಂಬರ್ಥದ ದ್ರಾವಿಡ ಪದವೇ. 'ಬೆಟ್ಟದ ದೇವರು' ಎಂಬುದು ಇದರ ಮೂಲಾರ್ಥ. ನಗಿಪ ಸಂಕಪ ಎಂಬೆರಡು ಉದಾಹರಣೆಗಳಲ್ಲಿರುವ - 'ಪ' ಸಂಪಾದಕರು ಊಹಿಸಿದಂತೆ ಕನ್ನಡ ಮೊದಲಾದ ದ್ರಾವಿಡ ಭಾಷೆಯ ಅಪ್ಪನ್ ಎಂಬುದರ ಸ್ವೀಕೃತ ರೂಪ ಆಪ -ಕುಟಿ ಎಂಬ ಹೆಸರಿನಲ್ಲಿರುವ ವಿಶಿಷ್ಟ -ಆಪ, ವಾರ್ಗಿಕ -ಕುಟಿ (<ಕುಟ್ಟಿ) ಎಂಬೆರಡೂ ಕನ್ನಡ/ ದ್ರಾವಿಡ ಈ ಮೂಲದವು ಸಮ, ಪುತ, ಸತ್ತಿ, ಆಯ, ಮೊದಲಾದ ಪ್ರಾಕೃತ ರೂಪಗಳು. ತರುವಾಯ ಸಂಸ್ಕೃತಕ್ಕೆ ತಿರುಗಿದವು. ದಾಸ/ ದಾಸಿ, ದೇವ, ಧರ, ನಂದ, ನಂದಿ ನಾಥ, ಭೂತಿ ಮೊದಲಾದುವು ಮುಂಚಿನಿಂದಲೂ ಸಂಸ್ಕೃತ - ಪ್ರಾಕೃತಗಳಿಗೆ ಸಮಾನವಾಗಿದ್ದುದು ಗಮನಾರ್ಹ. ಸನ್ನತಿ ಶಾಸನ (ನಂ.೧) ದ ಖಖರತ ಎಂಬ ಪ್ರಯೋಗದಲ್ಲಿ ಕಂಡು ಬಂದಿರುವ, -ರತ ಎಂಬುದು -ರಾತ ಎನ್ನುವ ಇನ್ನೊಂದು ರೂಪ. ಈಗಿನ ಗುಜರಾತ ಎಂಬ ಪ್ರದೇಶವಾಚಕದಲ್ಲಿ ಅದು ಈಗಲೂ ಉಳಿದು ಬಂದಿದೆ. ಬಹುಶಃ ಇದು ಇಂಡೋ - ಆರ್ಯನ್ ಪದವಲ್ಲ; ಕ್ಷತ್ರಪರ ಭಾಷೆಯದು ('ತುವೇರ' ಎಂಬುದೂ ಅಂಥದೇ ಇನ್ನೊಂದು ರೂಪ) ಸಿದ್ದಾಪುರ-ಬ್ರಹ್ಮಗಿರಿ ಶಾಸನಗಳಲ್ಲಿ ಕಂಡು ಬಂದಿರುವ ಲೇಖಕ 'ಚಪಡ' ನ ಹೆಸರಿನ ಮೂಲ ನಿಗೂಢವಾಗಿದೆ.

●●

ಯೋಗ ಪರಿಚಯ

ಡಾ. ಪಿ. ಎಂ. ದಿನೇಶ

ಜ್ಞಾನ ನಿಷ್ಠೋ ವಿರಕ್ತೋ ವಾ ಧರ್ಮಜ್ಞೋsಪಿ ಜಿತೇಂದ್ರಿಯಃ ।
ವಿನಾ ಯೋಗೇನ ದೇವೋ ಪಿ ನ ಮೋಕ್ಷಂ ಲಭತೇ ಪ್ರಿಯೇ ॥

(ಭಗವಾನ್ ಶಂಕರ್)

ಜ್ಞಾನನಿಷ್ಠನೇ ಆಗಲಿ, ವಿರಕ್ತನೇ ಆಗಲಿ, ಧರ್ಮಜ್ಞಾನಿಯಾಗಲೀ ಜಿತೇಂದ್ರಿಯ ಲಾಗಲೀ, ದೇವನೇ ಆಗಲಿ, ಯೋಗವಿಲ್ಲದೆ ಮುಕ್ತಿಯನ್ನು ಹೊಂದಲಾರನೆಂಬ ಶಿವ ವಾಕ್ಯ ಅತ್ಯಂತ ಮಹತ್ವಪೂರ್ಣವಾಗಿದೆ. ಇದೇ ಅಭಿಪ್ರಾಯವನ್ನು ಗೀತೆಯು ಹೀಗೆ ವ್ಯಕ್ತಗೊಳಿಸುತ್ತದೆ :

ತಪಸ್ವಿಭ್ಯೋsಧಿಕೋಯೋಗೀ ಜ್ಞಾನೀಭ್ಯೋsಪಿ ಮತೋsಧಿಕಃ ।
.ಕರ್ಮಿಭ್ಯೋsಪ್ಯಧಿಕೋ ಯೋಗೀ ತಸ್ಮಾದ್ಯೋಗೀಭವಾರ್ಜುನ ॥[1]

ಬ್ರಹ್ಮಾಂಡ ಪುರಾಣವಂತೂ ಈ ವಿಷಯವನ್ನು ಇನ್ನೂ ಹೆಚ್ಚು ಸ್ಫುಟಗೊಳಿಸಿದೆಃ

ಯೋಗೈಶ್ವರ್ಯಮೃತೇ ಮೋಕ್ಷಃ ಕಥಂಚನೋಪಪದ್ಯತೇ ।
ಅಪಕ್ಷಸ್ಯೇವ ಗಮನಂಗಗನೇ ಪಕ್ಷಿಣೋಯಥಾ...[2]

ಯಾವುದೇ ದರ್ಶನ, ಧರ್ಮವನ್ನು ಅವಲಂಬಿಸಿದರೂ ಯೋಗ ಸಾಧನೆಯಿಲ್ಲದೆ ಅಂತಿಮ ಗುರಿ ಮುಟ್ಟುವುದು ಸಾಧ್ಯವಿಲ್ಲವೆಂಬ ವಿಷಯದಲ್ಲಿ ಮತಭೇದವಿಲ್ಲ. ದರ್ಶನದ ಬಗ್ಗೆ ಮಾತಾಡುವುದಕ್ಕಿಂತಲೂ ಅದರಂತೆ ಆಚರಿಸುವವನೇ ಯೋಗಿಯಾಗಿದ್ದು ಪಾಶ್ಚಾತ್ಯ ದೇಶ ಗಳಲ್ಲಿಯಂತೆ ಕೇವಲ ಬೌದ್ಧಿಕ ಕಸರತ್ತು ಮಾಡುವವನು ಭಾರತದಲ್ಲಿ ದಾರ್ಶನಿಕನಾಗಲಾರ. ಈ ವಿಷಯವಾಗಿ ಕೆಳಗಿನ ಅಭಿಪ್ರಾಯವನ್ನು ಅವಲೋಕಿಸಬಹುದು:

"No Philosopher of India is authentic, unless he is also a Yogi. A Yogi is one who does not merely talk of philosophy but lives philosophy. He does not simply have faith in God but experiences God. For him philosophy is no mere intellectual pass time."[3]

ಪಾರಲೌಕಿಕ ಸುಖಪ್ರಾಪ್ತಿಗಾಗಿ ಯೋಗಾದಿಸಾಧನೆ ಅನಿವಾರ್ಯವಾದರೂ, ಈ ಜಗತ್ತಿನಲ್ಲಿ ದೇಹಧಾರಿಯಾದ ಮನುಷ್ಯನು ಭೌತಿಕ ಪ್ರಗತಿಗೂ ಸಮಾನ ಮಹತ್ವವನ್ನು ಕೊಡಬೇಕಾದುದು

ಅತ್ಯಗತ್ಯ. ಭೌತಿಕ ಪ್ರಗತಿಯ ಶಿಖರವನ್ನೇರಿದರೂ ಅಧ್ಯಾತ್ಮವನ್ನು ಕಡೆಗಣಿಸಿದರೆ ಆಗುವ ಅನಾಹುತ ಅವರ್ಣನೀಯವಾದುದು. ಆರ್ಥಿಕವಾಗಿಯೂ, ವೈಜ್ಞಾನಿಕವಾಗಿಯೂ ಭಾರತ ದೇಶಕ್ಕಿಂತಲೂ ಶತಮಾನಗಳಷ್ಟು ಮುಂದಿರುವ ಪಾಶ್ಚಾತ್ಯ ದೇಶಗಳಲ್ಲಿ ಅಶಾಂತ ಮತ್ತು ಬರ್ಬರ ಕೃತ್ಯಗಳನ್ನು ಕಂಡಾಗ ಈ ಮಾತಿನ ಸತ್ಯ ನಮಗರಿವಾಗದೇ ಇರದು.

ತದ್‌ವಿರುದ್ಧವಾಗಿ ಅಧ್ಯಾತ್ಮದ ಹೆಸರಿನಲ್ಲಿ ಆಲಸ್ಯ ವಂಚನೆಗಳನ್ನು ಮೈಗೂಡಿಸಿಕೊಂಡು ತೀರಾ ಹಿಂದುಳಿದ ಭಾರತಾದಿ ದೇಶಗಳ ಸ್ಥಿತಿಯೂ ಅತ್ಯಂತ ಶೋಚನೀಯವಾಗಿದೆ. ಏಕೆಂದರೆ ಭೌತಿಕ ಪ್ರಗತಿಯನ್ನು ಪೂರ್ಣವಾಗಿ ಕಡೆಗಣಿಸಿದ್ದರ ಫಲವಾಗಿ ನಾವಿಂದು ಶ್ರೀಮಂತ ರಾಷ್ಟ್ರಗಳ ಋಣಭಾರದಿಂದ ಕುಗ್ಗಿದ್ದೇವೆ. ಧರ್ಮದರ್ಶನಗಳು ಪರಾವಲಂಬಿಗಳಾದ ವಂಚಕರಿಗೆ ಜೀವಿಕೆ ಯಾಗಿರುವುದನ್ನು ಚಾರ್ವಾಕ ದರ್ಶನ ಕಟುವಾಗಿ ಟೀಕಿಸಿರುವುದು ಯಥಾರ್ಥ ವಾಗಿದೆಯೆಂದರೆ ತಪ್ಪಾಗಲಾರದು.

ಬುದ್ಧಿ ಪೌರುಷಹೀನಾನಾಂ ಜೀವಿಕೇತಿ ಬೃಹಸ್ಪತಿಃ

ಆದರೆ ಸಂಪದ್ಭರಿತವಾಗಿ ಇಂದ್ರಿಯ ತೃಪ್ತಿಯೇ ಪರಮ ಗುರಿಯೆಂದು ಭಾವಿಸಿದ ಜನರ ರಾಕ್ಷಸೀ ಪ್ರವೃತ್ತಿ ಜಗತ್ತಿನಲ್ಲಿ ಶಾಂತಿ ನೆಲೆಸಲು ಎಂದಿಗೂ ಸಹಾಯಕವಾಗಲಾರದು.

'Politics is the last resort of a scoundrel' ಎಂಬ ಮಾತನ್ನು ಸ್ವಲ್ಪ ಬದಲಾಗಿ Religion is the last resort of a scoundrel ಎಂಬ ಉಕ್ತಿಯನ್ನು ಸಮರ್ಥಿಸಲು ಸಮಾಜದಲ್ಲಿ ಅನೇಕ ಉದಾಹರಣೆಗಳನ್ನು ಕಾಣುತ್ತೇವೆ. ಇದಕ್ಕೊಂದು ನಿದರ್ಶನವಾಗಿ ಕೆಳಗಿನ ಶ್ಲೋಕವನ್ನು ಉದಾಹರಿಸಬಹುದು:

ಭಿಕ್ಷೋ ಮಾಂಸನಿಷೇವಣಂ ಪ್ರಕುರುಷೇ ಕಿಂ ತೇನ ಮದ್ಯಂ ವಿನಾ
ಮದ್ಯಂ ಚಾಪಿ ತಾವ ಪ್ರಿಯಂ ಪ್ರಿಯಮಹೋ ವಾರಾಂಗನಾಭಿಃ ಸಹ ।
ವಾರಸ್ತ್ರೀರತಯೇ ಕುತಸ್ತವಧನಂ ದ್ಯೂತೇನ ಚೌರೇಣ ವಾ
ಚೌರದ್ಯೂತ ಪರಿಶ್ರಮೋಪಿ ಭವತಃ ಭ್ರಷ್ಟಸ್ಯ ನಾನ್ಯಾಗತಿಃ ॥

ಮಾಂಸವನ್ನು ತಿನ್ನುವ ಕಾವಿಧಾರಿಯೊಬ್ಬನನ್ನು "ಭಿಕ್ಷುವೇ ಮಾಂಸವನ್ನು ತಿನ್ನುತ್ತಿರುವೆಯಾ?" ಎಂದು ಕೇಳಿದಾಗ ಅವನು ಕೊಡುವ ಉತ್ತರಗಳು ಒಂದಕ್ಕಿಂತಲೂ ಒಂದು ಆಘಾತಕರವಾಗಿದೆ. ವೇಶ್ಯೆಯ ಸಹವಾಸದಲ್ಲಿ ಮಾಂಸವನ್ನು ಸವಿಯಬೇಕಾದರೆ ಕಳ್ಳತನ ಜೂಜಾಟಕ್ಕೆ ಆ ಸಾಧುವು ಮಾರುಹೋಗದೆ ಗತ್ಯಂತರವಿಲ್ಲ. ಹೀಗೆ ಭ್ರಷ್ಟ (Scoundrel) ನಿಗೆ ಬೇರೆ ಹಾದಿಯಾದರೂ ಎಲ್ಲಿದೆ ?

ಯಾವುದೇ ಉದ್ಯೋಗದಲ್ಲಿ ಪರಿಪೂರ್ಣತೆಯನ್ನು ಸಾಧಿಸಲು ಅನುಕೂಲವಾದ ವರ್ಣವ್ಯವಸ್ಥೆ ಕಾಲಕ್ರಮೇಣ (ಗುಣಕರ್ಮ ವಿಭಾಗಶಃ) ಆಸಕ್ತರ ಕೈಯಲ್ಲಿ ಜಾತಿ ಪರ್ಯಾಯವಾಗಿ ಅವನತಿ ಹೊಂದಿದ ಸಂಗತಿಯನ್ನು ಇತಿಹಾಸದ ಪುಟ ಪುಟಗಳಲ್ಲಿ ಕಾಣುತ್ತೇವೆ. ಜಾತ್ಯತೀತವೆಂದು ಘೋಷಿಸಲ್ಪಟ್ಟ ಆಧುನಿಕ ಭಾರತವು ಜಾತಿಭೂತದ ಹಿಡಿತದಿಂದ

ಮುಕ್ತವಾಗಿಲ್ಲವೆಂಬ ಸಂಗತಿಯನ್ನು ಅವಲೋಕಿಸಿದಾಗ ಅದರ ಕರಾಳ ದರ್ಶನವಾಗದೇ ಇರದು.

ಈ ರೀತಿ ಪ್ರತಿಯೊಂದಕ್ಕೂ ಜಾತಿಯ ಬಣ್ಣ ಬಳಿಯುವ ಭಾರತ ದೇಶದಲ್ಲಿ ವೈಜ್ಞಾನಿಕ (Scientific) ಪ್ರಗತಿಯಾಗಿದೆಯೆಂದರೆ ನಂಬಲು ಅಶಕ್ಯವಾಗುತ್ತದೆ. ಆದರೆ ಧಾರ್ಮಿಕ (ಆಚರಣೆಯ) ಕವಚವನ್ನು ಕಿತ್ತೊಗೆದು ಒಳಗೆ ಇಳಿದರೆ ಎಷ್ಟೋ ವಿಷಯಗಳಲ್ಲಿ ವೈಜ್ಞಾನಿಕ ದೃಷ್ಟಿಕೋನ ವ್ಯಕ್ತವಾಗದೇ ಇರದು. ಈ ರೀತಿ ವಿಶಾಲವಾದ ಸಂಸ್ಕೃತ ಸಾಹಿತ್ಯದಲ್ಲಿ (ವೈದಿಕ ಮತ್ತು ಲೌಕಿಕ) ಅಡಗಿರುವ ವೈಜ್ಞಾನಿಕ ವಿಚಾರಸರಣಿಯನ್ನು ಅರಿಯುವುದು ಇಲ್ಲಿ ಅಪ್ರಸ್ತುತವೆನಿಸಿದರೂ ಅದರ ಅಸ್ತಿತ್ವದ ಜ್ಞಾನವಾದರೂ ಅನಿವಾರ್ಯವಲ್ಲವೆ? ಪ್ರಾಚೀನ ಭಾರತದ ಜಾತ್ಯತೀತ ವೈಜ್ಞಾನಿಕ ವಿಷಯಗಳಲ್ಲಿ ಯೋಗವೊಂದೆಂಬ ಸಂಗತಿಯಲ್ಲಿ ಮತಭೇದವಿಲ್ಲ. ಸಾಂಖ್ಯದರ್ಶನದಂತೆ ಯೋಗವೂ ಭಾರತದ ಅತ್ಯಂತ ಪ್ರಾಚೀನ ದರ್ಶನಗಳಲ್ಲೊಂದೆಂದು ವಿದ್ವಾಂಸರ ಒಮ್ಮತದ ಅಭಿಪ್ರಾಯವಾಗಿದೆ. ಸೇಶ್ವರ ಸಾಂಖ್ಯವೆಂದು ಕರೆಯಲಾಗುವ ಯೋಗ ಹಾಗೂ ಸಾಂಖ್ಯಗಳಲ್ಲಿಯ ಘನಿಷ್ಠ ಸಂಬಂಧವನ್ನು ಎಲ್ಲರೂ ಒಪ್ಪುತ್ತಾರೆ.

ಯಾವುದೇ ದರ್ಶನ ಭಾರತದಲ್ಲಿ ಆಸ್ತಿಕವೆನಿಸಬೇಕಾದರೆ ಈಶ್ವರನ ಅಸ್ತಿತ್ವವನ್ನು ಒಪ್ಪಬೇಕೆಂಬ ನಿರ್ಬಂಧವಿಲ್ಲ. ಉದಾಹರಣೆಗೆ ಈಶ್ವರನ ಅಸ್ತಿತ್ವವನ್ನು ಒಪ್ಪದ ಸಾಂಖ್ಯವು ಆಸ್ತಿಕ ದರ್ಶನವೆನಿಸಲು ಅದು ವೇದಪ್ರಮಾಣಗಳನ್ನೊಪ್ಪುವುದೇ ಆಗಿದೆ. ಈಶ್ವರನ ಅಸ್ತಿತ್ವವನ್ನು ಒಪ್ಪಿದ ಯೋಗದರ್ಶನವು ವೇದ ಪ್ರಮಾಣ ಇತರ ಆಸ್ತಿಕ ದರ್ಶನಗಳಂತೆ ಯುಕ್ತಿಯುಕ್ತವಾಗಿ ಒಪ್ಪುತ್ತದೆ. ವೇದಸಾಹಿತ್ಯದಲ್ಲಿಯೂ ಅದಕ್ಕೂ ಪೂರ್ವದಲ್ಲಿಯೂ ಯೋಗದ ಆಚರಣೆ ಬಳಕೆಯಲ್ಲಿತ್ತೆಂಬ ವಿಷಯವನ್ನು ಮುಂದೆ ಸಪ್ರಮಾಣ ಪರಿಶೀಲಿಸಲಾಗುತ್ತದೆ. ಗೋರಕ್ಷಶತಕವು ವೇದವಾಙ್ಮಯವೆಂಬ ಕಲ್ಪತರುವಿನ ಅಮೃತಫಲವೇ ಯೋಗವೆಂದು ಆಲಂಕಾರಿಕವಾಗಿ ಸೂಚಿಸುವುದನ್ನು ನಾವಿಲ್ಲಿ ಗಮನಿಸಬೇಕು.

ದ್ವಿಜಸೇವಿತಶಾಖಸ್ಯ ಶ್ರುತಿಕಲ್ಪತರೋಃ ಫಲಮ್।
ಶಮನಂ ಭವತಾಪಸ್ಯ ಯೋಗಂ ಭಜತಿ ಸಜ್ಜನಃ ॥[1]

ತಪಸ್ಸೆಂಬ ಪರ್ಯಾಯ ನಾಮದಿಂದ ಪ್ರಸಿದ್ಧವಾದ ಯೋಗವು ಅಸಾಧ್ಯವಾದುದನ್ನು ಸಾಧಿಸುವ ಸಾಧನವೆಂದು ಇತರ ವಿದ್ವಾಂಸರಂತೆ ಕವಿಕುಲಗುರು ಕಾಳಿದಾಸನು ಒಪ್ಪುತ್ತಾನೆ. 'ತತ್‌ಸರ್ವಂ ತಪಸಾಲಭ್ಯಂ' ಎಂಬ ಆರ್ಯೋಕ್ತಿಯನ್ನು ಜಗನ್ಮಾತೆಯಾದ ಪಾರ್ವತಿಯ ಉದಾಹರಣೆಯಿಂದ ತನ್ನ ಕುಮಾರಸಂಭವವೆಂಬ ಮಹಾಕಾವ್ಯದಲ್ಲಿ ಸಿದ್ಧಮಾಡಿ ತೋರಿಸುವಲ್ಲಿ ಸಫಲನಾಗಿದ್ದಾನೆ.

ಸರ್ವೋಪಮಾದ್ರವ್ಯ ಸಮುಚ್ಚಯೇನ
ಯಥಾಪ್ರದೇಶಂ ವಿನಿವೇಶಿತೇನ ।
ಸಾ ನಿರ್ಮಿತಾ ವಿಶ್ವಸೃಜಾ ಪ್ರಯತ್ನಾದ್
ಏಕಸ್ಥ ಸೌಂದರ್ಯದಿದೃಕ್ಷಯೇವ ॥[2]

ಎಂಬ ಕವಿವಾಣಿಯಂತೆ ತ್ರಿಲೋಕ ಸೌಂದರ್ಯವೇ ಮೈದಳೆದಂತಿರುವ ಮತ್ತು ಬ್ರಹ್ಮನ ವಿಶಿಷ್ಟ ಸೃಷ್ಟಿಯಾದ ಪಾರ್ವತಿಯು ತನ್ನ ಮೋಹಕ ರೂಪದಿಂದ ಶಿವನನ್ನು ಆಕರ್ಷಿಸಲು ಅಸಮರ್ಥಳಾಗುತ್ತಾಳೆ.

ತಥಾ ಸಮಕ್ಷಮಂ ದಹತಾ ಮನೋಭವಂ
ಪಿನಾಕಿನಾ ಭಗ್ನ ಮನೋರಥಾ ಸತೀ ।
ನಿನಿಂದ ರೂಪಂ ಹೃದಯೇನ ಪಾರ್ವತೀ
ಪ್ರಿಯೇಷು ಸೌಭಾಗ್ಯಫಲಾ ಹಿ ಚಾರುತಾ ॥ [೮]

ಆದರೆ ತನ್ನ ರೂಪವನ್ನು ನಿಂದಿಸಿ ಸುಮ್ಮನಾಗದೇ ಆ ರೀತಿ ಕಷ್ಟಸಾಧ್ಯವಾದ ಶಿವನನ್ನೇ ತನ್ನ ಪತಿಯನ್ನಾಗಿ ಪಡೆಯಲು ಯೋಗಸಮಾಧಿಗೆ ಸಿದ್ಧಳಾಗುವ ಮಾತಿಗೆ ಸಾಕ್ಷಿಯಾಗಿದೆ.

ಇಯೇಷ ಸಾ ಕರ್ತುಮವಂಧ್ಯರೂಪತಾಂ
ಸಮಾಧಿಮಾಸ್ಥಾಯ ತಮೋಭಿರಾತ್ಮನಃ [೯]

ಅವಳ ತಪಃ ಸಮಾಧಿ ಎಷ್ಟು ಅಮೋಘವಾಗಿತ್ತೆಂದರೆ, ಶಿವನು ಪ್ರತ್ಯಕ್ಷನಾಗಿ ತಾನು ಅವಳಿಗೆ ದಾಸನಾಗಿದ್ದು ಅವಳು ತನ್ನನ್ನು ತಪಸ್ಸಿನಿಂದ ಕೊಂಡುಕೊಂಡಿದ್ದಾಳೆಂದು ಪ್ರಾಂಜಲವಾಗಿ ಒಪ್ಪುತ್ತಾನೆ.

ಅದ್ಯಪ್ರಭೃತ್ಯವನತಾಂಗಿ ತವಾಸ್ಮಿ ದಾಸಃ
ಕ್ರೀತಸ್ತಪೋಭೀರಿತಿ ವಾದಿನಿ ಚಂದ್ರಮೌಲೌ ।
ಅಹ್ನಾಯ ಸಾ ನಿಯಮಜಂ ಕ್ಲಮಮುತ್ಸಸರ್ಜ
ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ [೧೦]

ಈ ರೀತಿ ಯೋಗವು ಇತರ ಸಾಧನಗಳಿಂದ ಅಲಭ್ಯವಾದುದನ್ನು ಸಾಧಿಸುವ ಏಕೈಕ ಸಾಧನವೆಂದು ಕಾಳಿದಾಸನು ತಿಳಿದುದು ಔಚಿತ್ಯಪೂರ್ಣವಾಗಿದೆ. ಯೋಗಕ್ಷೇಮವೆಂಬ ಸಮಸ್ತ ಪದದಲ್ಲಿ ಪ್ರಯುಕ್ತವಾದ ಯೋಗ ಶಬ್ದ ಅರ್ಥವಿವರಣೆ (Etymology)ಈ ಮಾತನ್ನೇ ಸಮರ್ಥಿಸುತ್ತದೆ.

ಅಲಭ್ಯ ಲಾಭಃ ಯೋಗಃಸ್ಯಾತ್ ಕ್ಷೇಮೋಲಬ್ಧಸ್ಯ ರಕ್ಷಣಂ

ಎರಡೂ ಶಬ್ದಗಳ ಜೋಡಣೆಯಿಂದ ಉಂಟಾದ ಯೋಗಕ್ಷೇಮ ಶಬ್ದವು Welfare ಎಂಬ ಅರ್ಥದಲ್ಲಿ ಬಳಕೆಯಲ್ಲಿ ಬಂದಿರುವುದನ್ನು ಕಾಣುತ್ತೇವೆ.

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ [೧೧]

ಆದರೆ ವಾಲ್ಟರ್ ರುಬನ್ ಎಂಬ ವಿಮರ್ಶಕನು ಕಾಲಿದಾಸ ಗ್ರಂಥದಲ್ಲಿ ಯೋಗದ ಮೇಲೆ ಪ್ರೇಮದ ವಿಜಯ ಪ್ರತಿಪಾದನೆಯನ್ನು ಕಂಡಿದ್ದಾನೆ. ಇದು ಅವನ ಉಕ್ತಿ: "Kalidasa on the other hand had quite another problem that of victory of love over Yoga."[೧೨]

ಭಾರತ ದೇಶವು ಜಗತ್ತಿಗೆ ಕೊಟ್ಟ ಅನುಪಮ ಕೊಡುಗೆಯಾದ ಯೋಗವು ಈ ರೀತಿ ಜಾತ್ಯತೀತ (secular) ಎಂದು ಹೇಗೆ ಸಿದ್ಧ ಮಾಡಬಹುದು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಅದನ್ನೀಗ ವಿಚಾರಿಸೋಣ. ಜಾತಿಭೇದ, ವಯೋಭೇದ ಮತ್ತು ಲಿಂಗಭೇದವಿಲ್ಲದೆ ಆಚರಿಸಲು ಯೋಗ್ಯವಾದ ಮತ್ತು ಪ್ರಾಯೋಗಿಕ ವಿಷಯವಾದ ಯೋಗವನ್ನು ಆಸಕ್ತಿಯಿರುವ ಯಾರು ಬೇಕಾದರೂ ಆಚರಿಸಬಹುದು. ಈ ವಿಷಯವಾಗಿ ಸ್ವಾತ್ಮಾರಾಮನು ಹೀಗೆ ಹೇಳುತ್ತಾನೆಃ

ಯುವಾ ವೃದ್ಧೋಽತಿವೃದ್ಧೋ ವಾ ವ್ಯಾಧಿತೋ ದುರ್ಬಲೋ ಪಿ ವಾ
ಅಭ್ಯಾಸಾತ್ ಸಿದ್ಧಿಮಾಪ್ನೋತಿ ಸರ್ವಯೋಗೇಷ್ವತಂದ್ರಿತಃ [೧೩]

ಅಂದರೆ ಆಸನದ ವಿಷಯವಾಗಿ ಹೇಳಲಾದ ಈ ಮಾತು ಯೋಗದ ಉಳಿದ ಅಂಗಗಳಿಗೂ ಅನ್ವಯಿಸುತ್ತದೆ. ಅರ್ಥಾತ್ ಯೋಗಾಭ್ಯಾಸ ವಯೋಮಿತಿಯೊಂದನ್ನೇ ಅಲ್ಲ, ಜಾತಿ ಲಿಂಗಾದಿ ಪರಧಿಯನ್ನು ಮೀರುತ್ತದೆಂಬುದು ನಿಜಕ್ಕೂ ಸಮಾಧಾನಕರವಾಗಿದೆ. ಅಂದರೆ ಯೋಗದ ಅಭ್ಯಾಸ ಹಾಗೂ ಸಾಧನೆಯನ್ನು ಯಾವುದೇ ವ್ಯಕ್ತಿ ಮುಕ್ತ ಮನಸ್ಸಿನಿಂದ ಮತ್ತು ನಿರ್ಭೀತಿಯಿಂದ ಮಾಡಬಹುದೆಂದು ಇದರಿಂದ ಸಿದ್ಧವಾಗುತ್ತದೆ.

ಈ ವಿಷಯವಾಗಿ ಒಂದಿಷ್ಟು ಸ್ಪಷ್ಟೀಕರಣ ಅನಿವಾರ್ಯವೆನಿಸುತ್ತದೆ. ಜಾತಿಯ ಸಂಕೋಲೆಯನ್ನು ಕಳಚಿದರೂ ಸಹ ವಯೋಲಿಂಗಾದಿ ಭೇದವನ್ನು ಪೂರ್ಣವಾಗಿ ಕಡೆಗಣಿಸಲಾಗದು. ಪ್ರಕೃತಿ ಸಹಜವಾದ ಕೆಲವೊಂದು ಮಿತಿಗಳಿಂದಾಗಿ ಸ್ತ್ರೀಯು ಪುರುಷನಷ್ಟೇ ಸಮರ್ಥವಾಗಿ ಯೋಗಾಭ್ಯಾಸ ಮಾಡುವುದು ಸಾಧ್ಯವಿಲ್ಲ. ಉದಾಹರಣೆಗೆ ಋತುಸ್ರಾವ, ಗರ್ಭಧಾರಣೆ ಮುಂತಾದ ಅನಿವಾರ್ಯ ಪ್ರಸಂಗಗಳಲ್ಲಿ ಸ್ತ್ರೀ ಆಸನಗಳಲ್ಲಿ ಕೆಲವೊಂದು ಆಚರಿಸಲು ಅಸಮರ್ಥಳಾಗುತ್ತಾಳೆಂಬುದು ವ್ಯಾವಹಾರಿಕ ಸತ್ಯ. ಈ ಯಾವ ತೊಂದರೆಯೂ ಇಲ್ಲದ ಸದೃಢ ಪುರುಷನು ಯೋಗಾನುಷ್ಠಾನದಲ್ಲಿ ಪರಿಣತಿಯನ್ನು ಪಡೆಯಬಲ್ಲ ಎಂಬ ವಿಷಯದಲ್ಲಿ ಅತಿಶಯೋಕ್ತಿಯಿಲ್ಲ. ಅದೇ ರೀತಿ ವಯೋಭೇದವಿಲ್ಲದೆ ಯೋಗಾಭ್ಯಾಸ ಮಾಡಬಹುದಾದರೂ ಎಲ್ಲ ವಯಸ್ಸಿನ ಜನರು ಯೋಗಾನುಷ್ಠಾನದ ಒಂದೇ ತೆರನಾದ ಲಾಭವನ್ನು ಪಡೆಯುತ್ತಾರೆಂದು ಹೇಳವುದು ತಪ್ಪು. ವಯಸ್ಸಿಗನುಗುಣವಾಗಿ, ಸಾಧನ ಕ್ರಮವನ್ನು ಮತ್ತು ಪರಿಶ್ರಮದ ಪರಿಮಾಣ ವನ್ನು ಅನುಸರಿಸಿ ಯೋಗಸಿದ್ಧಿ ದೊರೆಯುತ್ತದೆಂದು ತಿಳಿಯುವುದೇ ಯುಕ್ತಿಸಂಗತ. ಯೋಗಾಭ್ಯಾಸದ ಪ್ರಾರಂಭವನ್ನು ಯಾವುದೇ ವಯಸ್ಸಿನಲ್ಲಿ ಮಾಡಬಹುದಾದರೂ ಚಿಕ್ಕ ವಯಸ್ಸಿನಲ್ಲಿ ಅದರ ಪ್ರಾರಂಭ ಹೆಚ್ಚು ಲಾಭಕರವೆಂದರೆ ತಪ್ಪಾಗಲಾರದು. ಈ ವಿಷಯವಾಗಿ ಕೆಳಗಿನ ಅಭಿಪ್ರಾಯ ಔಚಿತ್ಯಪೂರ್ಣವಾಗಿದೆ.

"The earlier in life the training begun is better. But it is not too late to start its practice."[೧೪]

ಹಾಗೆಂದ ಮಾತ್ರಕ್ಕೆ ವಯಸ್ಸಾದವರು ಹತಾಶರಾಗಬೇಕಾಗಿಲ್ಲ. ಅನಿವಾರ್ಯವಾದ ಹೊಂದಾಣಿಕೆ (necessary adjustment) ಯೊಂದಿಗೆ ತಮ್ಮ ವಯೋಮಾನಕ್ಕೆ

ಸರಿಹೋಗುವ ಯೋಗ ಸಾಧನೆ ಮಾಡಿದ್ದಾದರೆ ಸ್ವಲ್ಪವಾದರೂ ಲಾಭ ದೊರೆಯುತ್ತದೆ. ಭಗವದ್ಗೀತೆಯಲ್ಲಿ ವ್ಯಕ್ತವಾದ ಭಗವಂತನ ಈ ಅಭಯವಾಣಿಯನ್ನು ನಾವಿಲ್ಲಿ ಗಮನಿಸ ಬಹುದು.

ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ್ ಗಚ್ಛತಿ [೧೫]

ಯೋಗ ಸಾಧನೆಯಂತಹ ಮಂಗಲಕರವಾದ ಅಭ್ಯಾಸದಿಂದ ಹಾನಿಯಂತೂ ಖಂಡಿತ ಇಲ್ಲ. ತದ್‌ವಿರುದ್ಧವಾಗಿ ನಮ್ಮ ಪರಿಶ್ರಮಕ್ಕನುಗುಣವಾಗಿ ಲಾಭವಂತೂ ಗ್ಯಾರಂಟಿಯೆಂದು ಇದರಿಂದ ವ್ಯಕ್ತವಾಗದೇ ಇರದು. ಈ ರೀತಿ ಪವಿತ್ರವಾದ ಅಭ್ಯಾಸದ ದಿಕ್ಕಿನಲ್ಲಿ ಒಂದು ಹೆಜ್ಜೆ ಇರಿಸಿದರೂ ನಮ್ಮ ಜೀವನ ಸಫಲವಾಗುತ್ತದೆಂದು ತಿಳಿಯಬೇಕು.

ಈಗಾಗಲೇ ನೋಡಿದಂತೆ ಯೋಗವೊಂದು ಪ್ರಾತ್ಯಕ್ಷಿಕ ವಿಜ್ಞಾನವಾದುದರಿಂದಾಗಿ ಯೋಗ ಗ್ರಂಥ ಪಠಣವಾಗಲೀ, ತದ್‌ವಿಷಯಕ ಚರ್ಚೆ, ಭಾಷಣವಾಗಲೀ ಅಥವಾ ಸಮವಸ್ತ್ರ (unifoem) ಧರಿಸುವುದಾಗಲೀ ಯೋಗಸಿದ್ಧಿಯ ಕಾರಣವಾಗಲಾರದು. ಈ ವಿಷಯವಾಗಿ ಸ್ವಾತ್ಮಾರಾಮನ ಖಚಿತವಾದ ಅಭಿಪ್ರಾಯವಿದು.

ಕ್ರಿಯಾಯುಕ್ತಸ್ಯ ಸಿದ್ಧಿ : ಸ್ಯಾದಕ್ರಿಯಸ್ಯ ಕಥಂಭವೇತ್
ನ ಶಾಸ್ತ್ರಪಾಠಮಾತ್ರೇಣ ಯೋಗಸಿದ್ಧಿಃ ಪ್ರಜಾಯತೇ
ನ ವೇಷಧಾರಣಂ ಸಿದ್ಧೇಃ ಕಾರಣಂ ನ ಚ ತತ್ಕಥಾ
ಕ್ರಿಯೈವ ಕಾರಣಂ ಸಿದ್ಧೇಃ ಸತ್ಯಮೇತನ್ನ ಸಂಶಯಃ [೧೬]

ಅಭ್ಯಾಸನಿರತನಾದವನಿಗೆ ಅನುಷ್ಠಾನ ಪ್ರವೀಣನಾದವನಿಗೆ ಮಾತ್ರ ಯೋಗಸಿದ್ಧಿ ದೊರೆಯುತ್ತದೆಯಲ್ಲದೇ ಕೇವಲ ಗ್ರಂಥ ಪಠಣದಿಂದ ಸಿದ್ಧಿ ದೊರೆಯಲಾರದು.

ಅಗಚ್ಛನ್ ವೈನತೇಯೋ ಪಿ ಪದಮೇಕಂ ನ್ ಗಚ್ಛತಿ

ಎಂಬಂತೆ ತತ್ತ್ವದಲ್ಲಿ ಎಷ್ಟೇ ಪ್ರವೀಣನಾದರೂ ನಿಷ್ಕ್ರಿಯನಾದ ವ್ಯಕ್ತಿಯು ಯೋಗ ಸಿದ್ಧಿಯನ್ನೆಂತು ಪಡೆಯಬಲ್ಲ ? ಯಾವುದೇ ವೇಷ ಧರಿಸಿದ ಮಾತ್ರಕ್ಕೆ ಯೋಗ ಸಿದ್ಧಿಯಾಗ ಲಾರದು. 'ಜಟಾಭಿಸ್ತ್ತಾಪಸಃ' ಎಂಬಂತೆ ಜಟೆ ಬಿಟ್ಟಮಾತ್ರಕ್ಕೆ ಯಾರೂ ತಪಸ್ವಿಯಾಗಲಾರರು ಎಂಬ ಮಾತನ್ನು ಗಮನಿಸಿದರೆ ಈ ಮಾತು ನಮಗೆ ಅರ್ಥವಾಗುತ್ತದೆ. ಅಪ್ಪಯ್ಯ ದೀಕ್ಷಿತರು ತಮ್ಮ ಅಲಂಕಾರ ಗ್ರಂಥವಾದ ಕುವಲಯಾನಂದದಲ್ಲಿ ಅಪ್ರಸ್ತುತ ಪ್ರಶಂಸೆ ಎಂಬ ಅಲಂಕಾರಕ್ಕೆ ಉದಾಹರಿಸಿದ ಒಂದು ಶ್ಲೋಕವನ್ನಿಲ್ಲಿ ಅವಲೋಕಿಸಿದರೆ ಈ ಮಾತು ಹೆಚ್ಚು ಸ್ಪಷ್ಟವಾಗುತ್ತದೆ.

ಆಬದ್ಧ ಕೃತಿಮ ಸಟಾ ಜಟಿಲಾಂಸಭಿತ್ತಿ
ರಾರೋಪಿತೋ ಮೃಗಪತೇಃ ಪದವೀಂ ಯದಿಶ್ವಾ
ಮತ್ತೇಭಿಕುಂಭತಟಪಾಟನ ಲಂಪಟಸ್ಯ
ನಾದಂ ಕರಿಷ್ಯತಿ ಕಥಂ ಹರಿಣಾಧಿಪಸ್ಯ [೧೭]

ಈ ರೀತಿ ಸಾಮಾಜಿಕವೂ, ಸಾರ್ವಕಾಲಿಕವೂ ಜಾತ್ಯತೀತವೂ ಆದ ಯೋಗೋಪದೇಶವನ್ನು ಎಲ್ಲರೂ ಯಾವುದೇ ತಾರತಮ್ಯವಿಲ್ಲದೆ ಮಾಡಬಹುದೆಂದು ತಿಳಿಯುವುದು ತಪ್ಪು. ಈ ವಿಷಯವಾಗಿ ಕೆಳಗಿನ ಅಭಿಪ್ರಾಯವನ್ನು ಗಮನಿಸಬಹುದು.

" Yoga is meant for the good of all creatures, but let us not throw away this precious threasure indiscriminately."[18]

ಯೋಗವೊಂದು ಶಕ್ತಿಯ ಉಗಮ ಕೇಂದ್ರವಾಗಿದ್ದು ನೈತಿಕ ಬಲವಿಲ್ಲದವನಿಗೆ ಅದು ಪ್ರಾಪ್ತವಾದರೆ ಅವನು ವಾಸಿಸುವ ಸಮಾಜಕ್ಕೆ ಅಂತತಃ ಇಡೀ ಜಗತ್ತಿಗೆ ಅವನು ಕಂಟಕ ಪ್ರಾಯನಾಗುತ್ತಾನೆಂಬುದಕ್ಕೆ ಭಸ್ಮಾಸುರನು ಜ್ವಲಂತ ನಿದರ್ಶನವಾಗಿದ್ದಾನೆ. ಆದುದರಿಂದಲೇ ಪ್ರಾಚೀನ ಭಾರತದಲ್ಲಿ ನೈತಿಕತೆ (Moral conduct) ಕಡ್ಡಾಯವಾದ ಯೋಗ್ಯತೆ (Compulsory eligibility) ಎಂದು ಪರಿಗಣಿಸಲಾಗುತ್ತಿತ್ತು. ಅಂದರೆ ನೈತಿಕ ಬಲವಿಲ್ಲದವನಿಗೆ ಯೋಗಾಭ್ಯಾಸ ನಿಷಿದ್ಧವೆಂದು ತಿಳಿಯಬೇಕೇ ಹೊರತು ಅದು ಕೆಲವರ ಸ್ವತ್ತೆಂದು ಭಾವಿಸಲಾಗುತ್ತಿತ್ತೆಂದು ತಿಳಿಯಬಾರದು. ಶಾಂಡಿಲ್ಯೋಪ ನಿಷತ್ತಿನಲ್ಲಿ ಯೋಗಾ ಧಿಕಾರಿಯ ಲಕ್ಷಣವನ್ನು ಈ ರೀತಿಯಾಗಿ ಕಾಣುತ್ತೇವೆ.

ಯಮನಿಯಮಯುತಃ ಪುರುಷಃ ಸರ್ವಸಂಘವಿವರ್ಜಿತಃ ಕೃತವಿದ್ಯಃ ಸತ್ಯೆ ಧರ್ಮರತೋ ಜಿತಕ್ರೋಧೋ ಗುರುಶುಶ್ರೂಷಾನಿರತಃ ಪಿತೃಮಾತೃವಿಧೇಯ ಸ್ವಾತ್ಮವೋಕ್ತಸದಾಚಾರ ವಿದ್ವಚ್ಛಿಕ್ಷಿತಃ ಫಲ ಮೂಲೋಕಾನ್ವಿತಂ ತಪೋವನಂ ಪ್ರಾಪ್ಯ ರಮ್ಯದೇಶೇ ಬ್ರಹ್ಮ ಘೋಷ ಸಮನ್ವಿತೇ ಸ್ವಧರ್ಮನಿರತ ಬ್ರಹ್ಮವಿತ್ಸಮಾಮೃತೇ

ಫಲಮೂಲ ಪುಷ್ಪವಾರಿಧೇಃ ಸುಸಂಪೂರ್ಣೇ ದೇವಾಯತನೇ ನದೀತೀರೆ ಗ್ರಾಮೇ ನಗರೇ ವಾ ಪಿ ಸುಶೋಭನಮಠಂ ನಾತ್ಯುಚ್ಚನೀಚಾಯತಮಲ್ಪದ್ವಾರಂ ಗೋಮ ಯಾದಿಲಿಪ್ತಂ ಸರ್ವರಕ್ಷಾಸಮನ್ವಿತಂ ಕೃತ್ವಾ ತತ್ರ ವೇದಾಂತಶ್ರವಣಂ ಕುರ್ವನ್ ಯೋಗಂ ಸಮಾರಭೇತ್ ೧೯

ಒಟ್ಟಿನಲ್ಲಿ ಬ್ರಹ್ಮಸೂತ್ರ ಶ್ರವಣಕ್ಕೆ ಅಗತ್ಯವಾದ ಶಮದಮಾದಿ ಸಾಧನ ಸಂಪತ್ತುವುಳ್ಳವನು ಮಾತ್ರ ಯೋಗಾಭ್ಯಾಸಕ್ಕೆ ಅಧಿಕಾರಿಯಾಗುತ್ತಾನೆಂದು ತಿಳಿಯ ಬಹುದು.

ಈಗ ಯೋಗಾಸನಗಳೇ ಯೋಗವೆಂದು ತಪ್ಪಾಗಿ ಭಾವಿಸಿ ನೈತಿಕ ನೆಲೆಗಟ್ಟಿಲ್ಲದ ತಾತ್ವಿಕ ಹಿನ್ನೆಲೆಯಿಲ್ಲದೆ ಡೊಂಬರಾಟವನ್ನು ಮಾಡುತ್ತ ಜನರ ಮೆಚ್ಚುಗೆ, ಕೀರ್ತಿ, ಮುಂತಾದವುಗಳನ್ನು ಕೊಳ್ಳೆಹೊಡೆಯುತ್ತಿರುವುದು ಸರ್ವ ಸಾಮಾನ್ಯವಾಗಿದೆ. ಇದರಿಂದ ಯೋಗ ಮತ್ತು ದೈಹಿಕ ಶಿಕ್ಷಣದಲ್ಲಿ ಭೇದವಿಲ್ಲವೆಂಬ ಭಾವನೆ ಬಲಿತರೆ ಆಶ್ಚರ್ಯ ಪಡಬೇಕಾಗಿಲ್ಲ. ಈ ವಿಷಯವಾಗಿ ಕೆಳಗಿನ ಅಭಿಪ್ರಾಯವನ್ನು ಗಮನಿಸಬಹುದು.

"Many of these practices like Asana, Pranayama etc. are of purely physical nature and when diversed from higher and essential teachings of Yoga reduced their system to a science of physical culture

on a par with other systems of a similar nature. This over simplification of the problem of people to live a saner and healthier physical life, has greatly vulgarized the movement for yogic culture and produced a wrong impression, especially in the West about the real purpose and technique of Yoga.[೨೦]

ಇದರಿಂದ ಸ್ಪಷ್ಟವಾಗುವ ಇನ್ನೊಂದು ಸಂಗತಿಯೇನೆಂದರೆ ಯೋಗದ ನಿಜವಾದ ಉದ್ದೇಶ ಮತ್ತು ಕ್ರಮವನ್ನು ಸರಿಯಾಗಿ ಅರಿಯದೇ ಅದನ್ನು ಜನಪ್ರಿಯಗೊಳಿಸುವ ನೆವದಲ್ಲಿ ಅತಿ ಸರಳೀಕರಣ (over simplification) ಮಾಡುತ್ತಿರುವುದು ಪವಿತ್ರವಾದ ಯೋಗಶಾಸ್ತ್ರಕ್ಕೆ ನಮ್ಮವರು ಮಾಡುತ್ತಿರುವ ಅಪಚಾರವಾಗಿದೆಯೆಂದರೆ ತಪ್ಪಾಗದು.

ಕೈವಲ್ಯ ಅಥವಾ ಮೋಕ್ಷವೆಂಬ ಪರಮ ಗುರಿಯನ್ನು ಬೋಧಿಸುವ ಯೋಗದ ಸ್ವರೂಪ ಅಷ್ಟು ಸುಲಭವಾಗಿಲ್ಲ. ಏಕೆಂದರೆ ಯೋಗವು ಜೀವನದ ಅತ್ಯಂತ ರಹಸ್ಯಗಳನ್ನು ಭೇದಿಸುವ ದಿಸೆಯಲ್ಲಿ ಸರಿಯಾದ ಪ್ರಯತ್ನ ಮಾಡುತ್ತಿದ್ದು ರಹಸ್ಯ ವಾತಾವರಣ ಅನಿವಾರ್ಯವೆನ್ನದೇ ಗತ್ಯಂತರವಿಲ್ಲ. ಈ ವಿಷಯವಾಗಿ ಕೆಳಗಿನ ಮಾತು ಅತ್ಯಂತ ಅರ್ಥಪೂರ್ಣವಾಗಿದೆ.

``To a certain extent, this atmosphere of mystery and obscurity which surrounds yoga is due to the very nature of this subject itself. The philosophy of yoga deals with some of the greatest mysteries of life and the universe and so it must inevitably be associated with an atmosphere of profound mystery."[೨೧]

ಈಗಾಗಲೇ ನೋಡಿದಂತೆ ಸಾಂಖ್ಯ ಮತ್ತು ಯೋಗಗಳೆರಡು ಪರಸ್ಪರ ಪೂರಕ ದರ್ಶನಗಳಾಗಿವೆ. ಅರ್ಥಾತ್ ಸಾಂಖ್ಯದ ಪ್ರಾತ್ಯಕ್ಷಿಕ ರೂಪವೇ ಯೋಗವೆನ್ನಬಹುದು. ಈ ವಿಷಯವಾಗಿ ಗೀತೆ ಸ್ಪಷ್ಟವಾಗಿ ಹೀಗೆ ಹೇಳುತ್ತದೆ.

ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ
ಏಕಮಪ್ಯಾಶ್ರಿತಃ ಸಮ್ಯಕ್ ಉಭಯೋರ್ವಿಂದತೇ ಫಲಮ್ [೨೨]

ಅಂದರೆ ಸಾಂಖ್ಯದರ್ಶನದ ತತ್ತ್ವಗಳನ್ನೇ ಯೋಗವು ಅನುಸರಿಸುತ್ತಿದ್ದು, ಸಾಂಖ್ಯದಲ್ಲಿಲ್ಲದ ಈಶ್ವರ ತತ್ತ್ವಯೋಗವು ಪ್ರತಿಪಾದಿಸುತ್ತಿರುವುದರಿಂದಾಗಿ ಅದಕ್ಕೆ ಸೇಶ್ವರ ಸಾಂಖ್ಯವೆಂದು ಕರೆಯುತ್ತಾರೆ. ಪ್ರಕೃತಿ-ಪುರುಷರಲ್ಲಿಯ ಭೇದವನ್ನು ಮನಗಾಣಿಸಿ, ಆತ್ಮಸ್ವರೂಪ ಜ್ಞಾನ ವನ್ನುಂಟುಮಾಡಿ, ಅಂದರೆ ಪ್ರಕೃತಿಯಿಂದ ಪುರುಷನನ್ನು ಬೇರ್ಪಡಿಸುವುದೇ(ಕೈವಲ್ಯ ಪ್ರಾಪ್ತಿಯೇ) ಸಾಂಖ್ಯ ದರ್ಶನದ ಮುಖ್ಯ ಗುರಿಯಾಗಿದ್ದು ಆ ಜ್ಞಾನದ ಪರಾಕಾಷ್ಠೆ ಅಥವಾ ಫಲವೇ ವೈರಾಗ್ಯವೆನಿಸುತ್ತದೆ. ಪ್ರಕೃತಿ ಪುರುಷರ ವಿಯೋಗ (ಭೇದ ಜ್ಞಾನ) ಸಾಂಖ್ಯ ದರ್ಶನದ ಮೂಲ

ತತ್ತ್ವವಾಗಿದ್ದು ಯೋಗವು ಅಷ್ಟಾಂಗ ಸಾಧನೆಯಿಂದ ಆ ಗುರಿಯನ್ನು ಸಾಧಿಸಲು ನೆರವಾಗುತ್ತದೆ. ಈ ವಿಯೋಗವೇ ಯೋಗ ವೆಂದು ಕರೆಯುವುದು ವಿಚಿತ್ರವೆನಿಸುವುದಿಲ್ಲವೇ? ಈ ವಿಷಯವಾಗಿ ಒಂದು ಜನಪ್ರಿಯ ಶ್ಲೋಕ ಇಂತಿದೆ:

ಪತಂಜಲಿಮುನೇರುಕ್ತಿಃ ಕಾಪ್ಯಪೂರ್ವಾ ಜಯತ್ಯಸೌ
ಪುಂಸ್‌ಪ್ರಕೃತ್ಯೋಃ ವಿಯೋಗೋಪಿ ಯೋಗ ಇತ್ಯುದಿತೋ ಯಯಾ

ಯೋಗ ಸಾಧನೆಯನ್ನು ಜೀವಿತದ ಯಾವುದೇ ಅವಧಿಯಲ್ಲಿ ಪ್ರಾರಂಭಿಸಬಹುದು. ಪ್ರಾರಂಭ ಮಾಡಿದ ಮೇಲೆ ಸಾಧಕನು ಮೊದಲು ಸಾವಕಾಶವಾಗಿ, ನಂತರ ಅತಿ ಶೀಘ್ರವಾಗಿ (ವೇಗವಾಗಿ) ಆ ಸಾಧನಾಪಥದಲ್ಲಿ ಮುಂದುವರೆದು, ಕೆಲ ಸಮಯದ ನಂತರ ಹಿಂತಿರುಗಿ ನೋಡಿದಾಗ ತಾನು ಕ್ರಮಿಸಿದ ಅಂತರವನ್ನು ಕಂಡು ತನಗೆ ದಿಗಿಲಾಗುವಷ್ಟು ಪ್ರಗತಿಯನ್ನು ಸಾಧಿಸುತ್ತಾನೆ. ಆ ಎಲ್ಲ ಸಮಯದಲ್ಲಿಯೂ ಪವಿತ್ರ ಆತ್ಮಸ್ವರೂಪ ಜ್ಞಾನಾನಂದದಲ್ಲಿಯೇ ಮಗ್ನನಾಗಿದ್ದು ಹೊರ ಪ್ರಪಂಚವನ್ನು ಪೂರ್ಣವಾಗಿ ಮರೆಯುತ್ತಾನೆ. ಕಾಲ ಮತ್ತು ಅಂತರ ಗಳೆರಡೂ ಅವನ ಗಮನಕ್ಕೆ ಬರುವುದೇ ಇಲ್ಲ. ಈ ವಿಷಯವಾಗಿ ಕೆಳಗಿನ ಮಾತನ್ನು ಗಮನಿಸ ಬಹುದು.:

The important point is to make a definite beginning somewhere and as soon as possible now. The movement such a serious beginning is made forces begin to gather round the centre of endeavour and take the aspirant forward to wards his goal, slowly at first but with increasing speed until he becomes so absorbed in the pursuit of his ideal that time and distance cease to matter for him. And one day he finds that he has reached his goal and looks back with a kind of wonder at the long and tedious journey, which he has completed in the realm of time where all the time he was living in the eternal."[೨೩]

ಮಾನವನ ಮನಸ್ಸೇ ಬಂಧಕ್ಕೂ ಮತ್ತು ಮೋಕ್ಷಕ್ಕೂ ಕಾರಣವೆಂದು ಔಚಿತ್ಯ ಪೂರ್ಣವಾಗಿ ಹೇಳಲಾಗಿದೆ.

ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ
ಬಂಧಾಯ ವಿಷಯಾಸಕ್ತಂ ಮುಕ್ತ್ಯೈ ನಿರ್ವಿಷಯಂ ಮತಂ [೨೪]

ಸ್ವಸ್ಥವಾದ ಮನಸ್ಸು ಏಕಾಗ್ರತೆಗೆ ಅರ್ಹವಾಗಿದ್ದು ಅಂಥ ಸ್ವಸ್ಥ ಮನಸ್ಸಿಗೆ ಆಶ್ರಯವಾದ ಶರೀರವು ಸ್ವಸ್ಥವಿರಬೇಕಾದುದು ಅನಿವಾರ್ಯ. ಅಂಥ ಶರೀರದ ಬಗ್ಗೆ ಉಪೇಕ್ಷೆ ಸಲ್ಲದೆಂಬ ವಿಷಯದಲ್ಲಿ ಮತಭೇದವಿಲ್ಲ. ಶರೀರವೇ ಧರ್ಮದ ಪ್ರಥಮ ಸಾಧನವೆಂದು ಕಾಲಿದಾಸನು ಯುಕ್ತಿಯುಕ್ತವಾಗಿ ನುಡಿಯುತ್ತಾನೆ.

ಶರೀರ ಮಾದ್ಯಂ ಖಲು ಧರ್ಮ ಸಾಧನಂ [೨೫]

ಶರೀರ ಮತ್ತು ಮನಸ್ಸು ಅವಿನಾಭಾವ ಸಂಬಂಧದಿಂದ ಕೂಡಿದೆ. ಆದ್ದರಿಂದ ಹಠಯೋಗ ಮತ್ತು ರಾಜಯೋಗಗಳಲ್ಲಿ ಕೃತ್ರಿಮ ಭೇದವನ್ನು ಮಾಡುವುದು ಸರಿಯಲ್ಲ. ಆಧುನಿಕ ದಾರ್ಶನಿಕರೂ ಸಹ ಇಂತಹ ಭೇದವನ್ನು ಒಪ್ಪುವುದಿಲ್ಲ. ಏಕೆಂದರೆ ಎರಡರಲ್ಲಿಯೂ ಸ್ಪಷ್ಟವಾದ ಭೇದವನ್ನು ಎಣಿಸುವುದು ಅಸಾಧ್ಯವಾದರೂ ವ್ಯಾವಹಾರಿಕ ಅನುಕೂಲಕ್ಕಾಗಿ ಭೇದ ಸಹಾಯಕವಾಗುತ್ತದೆ. ಈ ವಿಷಯವಾಗಿ ಕೆಳಗಿನ ಅಭಿಪ್ರಾಯ ಗಮನಿಸಬಹುದುಃ

"There is no clear cut distinction between body and mind. Body and mind are but two aspects of one organism. But the division of yoga into physical and mental is a practical necessity for efficient bearing as well as theraphy. " [೨೬]

ಇದೆಲ್ಲವನ್ನೂ ಅರಿತಾಗ ಲೌಕಿತವಾಗಿ, ಪಾರಲೌಕಿಕವಾಗಿ ಯೋಗದ ಅನಿವಾರ್ಯತೆ ನಮ್ಮ ಗಮನವನ್ನು, ವಿಶ್ವದ ಎಲ್ಲಜನರ ಗಮನವನ್ನು ಸೆಳೆಯದೆ ಇರದು. ಆದ್ದರಿಂದಲೆ ಶಿವಸಂಹಿತೆಯೂ ಯೋಗಶಾಸ್ತ್ರದ ಮಹತಿಯನ್ನು ನಿರ್ದಿಷ್ಟವಾಗಿ ಮತ್ತು ನಿರ್ದುಷ್ಟವಾಗಿ ವಿಶದಪಡಿಸುತ್ತದೆ.

ಆಲೋಕ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ
ಇದಮೇಕಂ ಸುನಿಷ್ಪನ್ನಂ ಯೋಗಶಾಸ್ರಂ ಪರಮ್ ಮತಂ [೨೭]

ಸಂಸ್ಕೃತ ಸಾಹಿತ್ಯದಲ್ಲಿ ದೊರೆಯುವ ಯೋಗಶಾಸ್ತ್ರದ ಗ್ರಂಥರಾಶಿಯನ್ನು ಅವಲೋಕಿಸಿದಾಗ ಯೋಗದ ವಿವಿಧ ಮುಖಗಳ ಪರಿಚಯವಾಗುತ್ತಿದ್ದು ಅವುಗಳಲ್ಲಿ ಯಾವುದನ್ನು ಅನುಸರಿಸಬೇಕೆಂಬ ವಿಷಯದಲ್ಲಿ ಸಾಧಕನಿಗೆ ಸಂದೇಹ ಸಹಜವಾಗಿಯೇ ಉಂಟಾಗುತ್ತದೆ. ಈ ವಿಷಯವಾಗಿ ಸ್ವಾತ್ಮಾರಾಮನು ಹೀಗೆ ನುಡಿಯುತ್ತಾನೆಃ

ಭ್ರಾಂತ್ಯಾ ಬಹುಮತ ಧ್ವಾಂತೇ ರಾಜಯೋಗಂ ಅಜಾನತಾಂ
ಹಠಪ್ರದೀಪಿಕಾಂ ಧತ್ತೇ ಸ್ವಾತ್ಮಾರಾಮಃ ಕೃಪಾಕರಃ [೨೮]

ಆದರೆ ಯೋಗ ಪ್ರಭೇದಗಳಲ್ಲಿ ಹಠಯೋಗ ಮತ್ತು ರಾಜಯೋಗ ಮುಖ್ಯವಾಗಿದ್ದು ಅವು ಅನುಕ್ರಮವಾಗಿ ಶರೀರ ಹಾಗೂ ಮನಸ್ಸಿನ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಡುವುದನ್ನು ಕಾಣುತ್ತೇವೆ. ಈಗಾಗಲೇ ನೋಡಿದಂತೆ ಶರೀರ ಹಾಗೂ ಮನಸ್ಸುಗಳ ಸಂಬಂಧ ಎಷ್ಟು ಘನಿಷ್ಠವಾಗಿದೆಯೆಂದರೆ ಅವನ್ನು ಬೇರ್ಪಡಿಸುವದು ಅಸಂಭವ ಮತ್ತು ಈ ಕ್ರಿಯೆ ಅಸಾಧುವೆನ್ನದೆ ಗತ್ಯಂತರವಿಲ್ಲ. ಎರಡೂ ಯೋಗ ಪ್ರಭೇದಗಳ ಗುರಿ ಒಂದೇ ಆಗಿದ್ದು ಅವು ಒವಕ್ಕೊಂದು (ಪರಸ್ಪರ) ಪೂರಕವೆಂಬ ಭಾವನೆ ಬಹು ಕಡಿಮೆ ಸಾಧಕರಲ್ಲಿದೆ. ಅವುಗಳಲ್ಲಿಯ ಸಮನ್ವಯ ಸಾಧಿಸುವ ಪ್ರಯತ್ನವನ್ನು ಸ್ವಾತ್ಮಾರಾಮನ ಹಠಪ್ರದೀಪಿಕೆಯಲ್ಲಿ ಕಾಣುತ್ತೇವೆ. ಈ ವಿಷಯವಾಗಿ ಕೆಳಗಿನ ಶ್ಲೋಕವೊಂದರಲ್ಲಿಯೇ ಖಚಿತವಾದ ಅಭಿಪ್ರಾಯವನ್ನು ಕಾಣಬಹುದು.

ಪ್ರಣಮ್ಯ ಶ್ರೀಗುರುಂ ನಾಥಂ ಸ್ವಾತ್ಮಾರಾಮೇಣ ಯೋಗಿನಾ
ಕೇವಲಂ ರಾಜಯೋಗಾಯ ಹಠವಿದ್ಯೋಪದಿಶ್ಯತೇ [೨೯]

ಈ ಸತ್ಯವನ್ನು ಸ್ವಾತ್ಮಾರಾಮ ಯೋಗೀಂದ್ರನು ಪದೇ ಪದೇ ನೆನಪಿಗೆ ತರುವುದನ್ನು ಮರೆಯುವುದಿಲ್ಲ. ಈ ವಿಷಯವಾಗಿ ಕೆಳಗಿನ ಅಭಿಪ್ರಾಯವನ್ನು ಅವಲೋಕಿಸಬಹುದು.

"Of all the existing works on occultism, the Hatha pradipika is perhaps the one, which stands unrivalled in its attempt to grapple with the task of re-counciling. The raja Yoga and Hathayoga systems, concealing a truth in every sentence, the treatise offers in one respect a wealth of occult lore to the earnest student of yogavidya and in another holds behind the apparent charms of a bright curtain a venemous serpant ready to pounce upon the first struggler from the right hand path who has not thoroughly shaken off earthly impurities before launching himself upon the forbidden path of yoga. The pure and unselfish alone will have the keenness and power to extract the pure drop of immortality from the compound mixture in which the mystic author of the treatise has so beautifully combined the two systems of yoga."[30]

ಸಂದರ್ಭ ಸೂಚಿ

೧. ಗೀತಾ, VII, 46

೨. ಬ್ರಹ್ಮಾಂಡ ಪುರಾಣ, II, 3.10-115

3. Haridas Choudhuri, Integral Yoga, London, 1965, p.19

೪. ಸರ್ವದರ್ಶನ ಸಂಗ್ರಹ, ಚಾರ್ವಾಕ ದರ್ಶನ

೫. ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ (ಗೀತಾ, IV. 13)

೬. ಗೋರಕ್ಷಶತಕ, ಶ್ಲೋಕ ೩

೭. ಕುಮಾರಸಂಭವ, I-49

೮. ಅದೇ, V, 1

೯. ಅದೇ, V, 2

೧೦. ಅದೇ, V, 86

೧೧. ಗೀತಾ, IX, 22

೧೨. Walter Ruben, Kalidasa - The Human Meaning of His Works, Berlin, 1957, p. 94.

೧೩. ಹಠಪ್ರದೀಪಿಕಾ, I, 94

14. T. Bernard

೧೫. ಗೀತಾ, VI, 40

೧೬. ಹಠಪ್ರದೀಪಿಕಾ I, 65,66

೧೭. ಕುವಲಯಾನಂದ ಕಾರಿಕಾ ೬೫ರ ಉದಾಹರಣೆ

18. Pancham Singh, Hatha pradipika

೧೯. ಶಾಂಡಿಲ್ಯೋಪನಿಷತ್, I, 11,

20. I.K. Taimni, The Science of Yoga, The Theosophical Publishing House, Madras, 1974, Introduction, p. vi.

೨೧. ಅದೇ, p.v

೨೨. ಗೀತಾ, V, 4

23. I. K. Taimni, The Science of Yoga Introduction, p. xiii

೨೪. ಅಮೃತಬಿಂದೂಪನಿಷತ್V, 2

೨೫. ಕಾಲಿದಾಸ, ಕುಮಾರಸಂಭವ, V, 33

26. Rowly and Diskin, Joy of Life through Yoga

೨೭. ಶಿವಸಂಹಿತೆ, I, 17

೨೮. ಹಠಪ್ರದೀಪಿಕಾ, I,3

೨೯. ಅದೇ, I, 7

30. Tookaram Tatya, The Hathayoga Pradipika, The Adyar Library and Research Centre, Introduction, p. vii

ಸಂಪಾದಕರ ನುಡಿ

ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ಉತ್ತರ ಕರ್ನಾಟಕದ ಗಣ್ಯ ಲೇಖಕಿ ಕನ್ನಡ-ಕರ್ನಾಟಕಗಳ ಹಿತ ರಕ್ಷಣೆ, ಸಂಸ್ಕೃತಿ -ಸಂವರ್ಧನೆ ಮೊದಲಾದ ನಾಡಿನ ಹಿತದ ಕೆಲಸಗಳಿಗೆ ತಮ್ಮನ್ನು ಮುಡುಪಾಗಿರಿಸಿಕೊಂಡವರು. ಅವರಿಗೆ ಈ ಸಲದ ಅತ್ತಿಮಬ್ಬೆ ಪ್ರಶಸ್ತಿ ದೊರೆತು ಉತ್ತರ ಕರ್ನಾಟಕಕ್ಕೆ, ಅದರಲ್ಲೂ ವಿಶೇಷವಾಗಿ ಮಹಿಳಾ ಸಮುದಾಯಕ್ಕೆ ದೊಡ್ಡಗೌರವ ಸಂದಂತಾಗಿದೆ. ಈ ಸಂದರ್ಭದಲ್ಲಿ 'ಕರ್ನಾಟಕ ಭಾರತಿ' ಅವರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತದೆ.

ಅನಿವಾರ್ಯ ಕಾರಣ ಕರ್ನಾಟಕ ಭಾರತಿಯ ಸಂಪುಟ ೨೯ರ ಸಂಚಿಕೆ -೧ ತಡವಾಗಿ ಪ್ರಕಟವಾಗುತ್ತಿದೆ. ಚಂದಾದಾರರು ಮತ್ತು ಲೇಖಕರು ಎಂದಿನಂತೆ ಸಹಕರಿಸಬೇಕಾಗಿ ಕೋರುತ್ತೇವೆ.

- ಸಂಪಾದಕರು

ಲೇಖಕರ ಪರಿಚಯ

೧. ಡಾ. ಮಲ್ಲಿಕಾಘಂಟಿ
ಪ್ರವಾಚಕರು
ಗು.ವಿ.ವಿ. ಸ್ನಾತಕೋತ್ತರ ಕೇಂದ್ರ
ಕೃಷ್ಣದೇವರಾಯನಗರ,
ಸೊಂಡೂರು

೨. ಡಾ. ಆರ್. ಪನ್ನೀರ ಸೆಲ್ವಮ್
ಪ್ರಾಧ್ಯಾಪಕರು
ಕನ್ನಡ ಅಧ್ಯಯನಪೀಠ
ಕ. ವಿ. ವಿ. ಧಾರವಾಡ

೩. ಶ್ರೀರಾಮರಡ್ಡಿ ಎಸ್.ರಡ್ಡಿ
ಮುದನೂರ(ಬಿ) -೫೮೫೨೧೬
ಸುರಪುರ ತಾಲೂಕು,
ಗುಲಬರ್ಗಾ ಜಿಲ್ಲೆ

೪. ಡಾ. ಚಂದ್ರಮೌಳಿ ನಾಯ್ಕರ
ಮುಖ್ಯಸ್ಥರು
ಸಂಸ್ಕೃತ ಪ್ರಾಕೃತ ಮತ್ತು ಯೋಗ ಅಧ್ಯಯನ ವಿಭಾಗ,
ಕರ್ನಾಟಕ ಕಾಲೇಜ, ಧಾರವಾಡ

೫. ಡಾ.(ಶ್ರೀಮತಿ) ವಿಜಯಶ್ರೀ ಸಬರದ
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ-೫೮೫ ೧೦೬

೬. ಡಾ. ರಾಮಕೃಷ್ಣ ಮರಾಠೆ
ಕನ್ನಡ ಪ್ರಾಧ್ಯಾಪಕ
ಬಿ.ಕೆ. ಕಾಲೇಜ, ಬೆಳಗಾವಿ

೭. ಶ್ರೀ ಎಸ್. ಎಂ. ಸಜ್ಜನ
ಕನ್ನಡ ವಿಭಾಗ,
ಇನ್‌ಸ್ಟಿಟ್ಯೂಟ ಆಫ್ ಏಶಿಯನ್ ಸ್ಟಡೀಸ್
ಚಮ್ಮನ್ ಚೇರಿ ಶಾಲಿಂಗನಲ್ಲೂರ
ಚೆನ್ನೈ-೬೦೦೧೧೯

೮. ಶ್ರೀ ಪಿ. ಡಿ. ಭಜಂತ್ರಿ
ಸಂಶೋಧನಾ ವಿದ್ಯಾರ್ಥಿ
ವಾಣಿಜ್ಯ ವಿಭಾಗ
ಕ. ವಿ. ವಿ. ಸ್ನಾತಕೋತ್ತರ ಕೇಂದ್ರ, ಬೆಳಗಾವಿ

೯. ಡಾ. ವ್ಹಿ. ಮುರುಗಯ್ಯ
ಉಪನ್ಯಾಸಕರು
ಕ. ವ್ಹಿ. ವಿ. ಸ್ನಾತಕೋತ್ತರ ಕೇಂದ್ರ
ಬೆಳಗಾವಿ

೧೦. ಡಾ. ಪಿ. ಎಂ. ದಿನೇಶ
ಸಂಸ್ಕೃತ ಉಪನ್ಯಾಸಕರು
ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಹುಬ್ಬಳ್ಳಿ

೧೧. ಡಾ. ಎಂ. ಬಿ. ನೇಗಿನಹಾಳ
ಮುಖ್ಯಸ್ಥರು
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ